ಪಟ್ಟಣದ ಪತಂಗ

(ಪತ್ತೇದಾರಿ ಕಾದಂಬರಿ)

●

ವಿಜಯ.

●

ದುರ್ಗಾ ಪ್ರಕಾಶನ,
ಕಂಣ್ಣಗುಡ್ಡೆ :: :: ಮಂಗಳೂರು-3.

ಪ್ರಥಮ ಮುದ್ರಣ: ೧೯೫೯.

ಮುಖಚಿತ್ರ:
ಟಿ. ಕೃಷ್ಣ ರಾವ್, ಹುಬ್ಬಳ್ಳಿ.

ಬೆಲೆ: ೭೫ ನಯೇ ಪೈಸೆ.

ಮುದ್ರಕರು:
ದಿ ಹಿಂದ್ ಆರ್ಟ್ ಪ್ರೆಸ್, ಲಿಮಿಟೆಡ್
ರಥಬೀದಿ, ಮಂಗಳೂರು-೧.

★

ಇದೊಂದು ಪತ್ತೇದಾರಿ ಕಾದಂಬರಿ ಎಂದ ನಂತರ, ಇದರ ವಿಚಾರ ಲಹರಿ ಹರಿಸುವುದು ಅನಗತ್ಯ.

ಈ ಪುಸ್ತಕಕ್ಕೆ ಮುಖ ಚಿತ್ರವನ್ನು ಚಿತ್ರಿಸಿ ಕೊಟ್ಟ ನನ್ನ ಆತ್ಮೀಯ ಗೆಳೆಯರಾದ ಶ್ರೀ ಟಿ. ಕೃಷ್ಣರಾವ್, ಹುಬ್ಬಳ್ಳಿ, ಅವರಿಗೆ ನನ್ನ ಸ್ನೇಹದ ನೆನಕೆಗಳು.

ಈ ಕೃತಿಯನ್ನು ಪ್ರಕಾಶಿಸಿದ ದುರ್ಗಾ ಪ್ರಕಾಶನದವರಿಗೂ, ಸಕಾಲದಲ್ಲಿ ಈ ಕಾದಂಬರಿಯನ್ನು ಹೊರತರಲು ಸಹಕರಿಸಿದ ಶ್ರೀ ಎಂ. ಕೆ. ಮಲ್ಯ, ಮೆನೇಜರ್, ದಿ ಹಿಂದ್ ಆರ್ಟ್ ಪ್ರೆಸ್ ಲಿಮಿಟೆಡ್, ಅವರಿಗೂ, ಅತ್ಯಲ್ಪ ಕಾಲದಲ್ಲಿ ಪುಸ್ತಕದ ಕೆಲಸವನ್ನು ಮುಗಿಸಿ ಕೊಟ್ಟ ಪ್ರೆಸ್ ಕೆಲಸಗಾರರ ಬಳಗಕ್ಕೂ ನನ್ನ ಕೃತಜ್ಞತೆಯನ್ನರ್ಪಿಸುತ್ತೇನೆ.

ಸರ್ವ ವಾಚಕರಿಗೂ ವಂದನೆಗಳು.

ಮಂಗಳೂರು,
ತಾ. ೧೬—೫—೧೯೫೯

ವಿಜಯಾ.

ಪಟ್ಟಣದ ಪತಂಗ

೧

"ಅನಂತ ಕೆಫೆ"ಯ ಮೆನೇಜರ್ ಪ್ರಸಾದರ ಕೊಲೆ!

ವಾರ್ತೆ ಹರಡಲು ವಿಳಂಬವಾಗಲಿಲ್ಲ.

ಅಂದಿನ ವರೆಗೆ ನಡೆಯದ, ನಡೆಯಬಹುದೆಂಬ ಭಯ ಭಾವನೆಯನ್ನು ಹುಟ್ಟಿಸದ ಘಟನೆ ಗಜಪತಿ ಪಟ್ಟಣದಲ್ಲಿ ನಡೆದು ಹೋಯಿತು.

ತಮ್ಮೂರಿನಲ್ಲಿ ಕೊಲೆ ಮಾಡುವಷ್ಟು ಹೊಲೆ ಮನಸ್ಸಿನ ಮಾನವರು, ಮೋಸ-ವಂಚನೆಯಿಂದ ಮನುಷ್ಯರ ಜೀವವನ್ನು ಹಿಂಡುವಂತಹ ಮೈಗಳ್ಳರು, ಪರದ್ರವ್ಯ ಅಪಹರಿಸಲು ತವಕದಿಂದ ಸಂಚು ನಡೆಸುವ ದುರಾತ್ಮರು, ಸಟ್ಟಾ-ಜುಗಾರಿ ಕೇಂದ್ರ ಸ್ಥಾಪಿಸಿ, ದುಂದುಗಾರರನ್ನು ಹುರಿದುಂಬಿಸುವಂತಹರು ಇಲ್ಲವೇ ಇಲ್ಲವೆಂದು ಭಾವಿಸಿಕೊಂಡಿದ್ದವರಿಗೆ, ಪ್ರಸಾದರಂತಹ ಶೀಲ ಸಂಪನ್ನ ನಯವಿನಯ ಭರಿತ, ಪ್ರಮಾಣಿಕ ವ್ಯಕ್ತಿಯ ಕೊಲೆಯಾಗಲು ಕಾರಣವೇನಾಗಿರಬಹುದು ಎಂದು ಅರಿತುಕೊಳ್ಳುವ ಆತುರ ಹೆಚ್ಚಾಯಿತು.

'ಅರ್ಧ' ತೆರೆದ ಹೊರಬಾಗಿಲಿನ ಎದುರು ಮೃತ ಶರೀರ ಮಲಗಿತ್ತು! ರಕ್ತ ಒಂದು ಬದಿಯಿಂದ ಹರಿದು ಹೆಪ್ಪುಗಟ್ಟಿತ್ತು!!

ಕೊಲೆಯ ಕಾರಣವನ್ನು ತಿಳಿದುಕೊಳ್ಳಲು ಕಾತುರತೆಯಿಂದ ಜನರು ಮುನ್ನುಗ್ಗುತ್ತಿದ್ದರು.

ಕೊಲೆಯ ವಾರ್ತೆ ತಿಳಿದು, ಕಾವಲಿಗಾಗಿಯೋ ಅಲ್ಲಿಗೆ ಬಂದಿದ್ದ ಇಬ್ಬರು ಪೋಲೀಸರು ಜನರ ನೂಕು ನುಗ್ಗಲನ್ನು ಬಲೂ ಪ್ರಯಾಸದಿಂದ ನಿಯಂತ್ರಿಸಿ ಮೃತ ಶರೀರದ ಬಳಿಗಾರು ಬಾರದಂತೆ ತಡೆಹಿಡಿದಿದ್ದರು.

ದುರ್ಮರಣಕ್ಕೀಡಾಗಿ ಮಡಿದು ಮಲಗಿರುವ ಮಹಾನುಭಾವನ ಭಾವಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಧಾವಿಸಿ ಬಂದ ಬಾತ್ಮೀದಾರರು ಆದಾಗಲೇ ಫೋಟೋ ಹೊಡೆದುಕೊಂಡು ಹೋಗಿದ್ದರು.

ಇನ್ಸ್‌ಪೆಕ್ಟರ್ ವಿಶ್ವನಾಥರು 'ಪತ್ತೇದಾರ ಕೇಸರಿ' ಎಂದು ಬಿರುದಾಂಕಿತನಾಗಿದ್ದು, ಹಲವಾರು ಕೊಲೆ-ಸುಲಿಗೆ-ಮೋಸ-ವಂಚನೆಯ ಪ್ರಕರಣವನ್ನೆಲ್ಲಾ ಬಯಲಿಗೆಳೆದು ಜನಸೇವಾಸಕ್ತನಾದ ಪುಟ್ಟಣ್ಣನೊಡನೆ ಕೇಸರಗದ್ದೆಯಲ್ಲಿದ್ದ ಪ್ರಸಾದರ ಮನೆಗೆ ಆಗಮಿಸಿದಾಗ, ಅಸಂಖ್ಯಾತ ಜನರು ಕಿಕ್ಕಿರಿದು ನೆರೆದಿದ್ದರು. ಅವರೆಡೆಯಿಂದ ನುಸುಳಿಕೊಂಡು ಬರುವುದು ಅವರಿಬ್ಬರಿಗೂ ಪ್ರಯಾಸವೇ ಆಯಿತು.

ಸೂಕ್ಷ್ಮಗ್ರಾಹಿಯಾದ ಪುಟ್ಟಣ್ಣ, ನೆರೆಯಂತೆ ನೆರೆದು ನಿಂತ ಜನರೇನಾದರೂ ಈ ಕೊಲೆಯ ಪೂರ್ವೋತ್ತರವನ್ನು ತರ್ಕಿಸಿ ಮಾತನಾಡುತ್ತಿರುವರೇ ಎಂದು ಕಿವಿನಿಗುರಿಸಿ ಕೇಳುತ್ತಾ ಬರುತ್ತಿದ್ದರು. ಕುತೂಹಲದಿಂದ ಮೈಮರೆತ ಜನತೆ ನಾಲಗೆಯ ಚಾಪಲ್ಯ ತೀರಿಸಿಕೊಳ್ಳದಿದ್ದೀತೆ?

'ಪ್ರಸಾದರು ಕೊಲೆಯಾಗಿ ಸತ್ತು ಬಿದ್ದಿದ್ದರೂ, ಅವರ ಪತ್ನಿ ಪ್ರಮಿಳಾ ಎಲ್ಲಿ ಹೋಗಿರುವಳು?'

'ಗಂಡನ ಮರಣ ವಾರ್ತೆ ತಿಳಿದೂ ಒಳಗೆ ಕುಳಿತಿರುವಳೇ?'

'ಕೈ ಹಿಡಿದ ಗಂಡನನ್ನು ಕೊಂದು, ಬಯಸಿ ಬಂದ ಭ್ರಮರದೊಡನೆ ಪರಾರಿಯಾಗಿರಬಹುದೇ?'

'ಉಂಡು ಮಲಗಿದ ಗಂಡ-ಹೆಂಡಿರಲ್ಲಿ ತುಂಡು ಜಗಳವೇನಾದರೂ ನಡೆದು, ತನ್ನ ಪತಿಯ ಮೇಲೆ ಹೆಣ್ತನದ ಪ್ರಾಬಲ್ಯ ತೋರಿಸಿ ಗಂಡನನ್ನು ಸಂಹರಿಸಿರಬಹುದೇ?'

'ಗಂಡ......ಸತ್ತು ಬಿದ್ದಿರುವನು! ಸತ್ತ ಗಂಡನ ಚಿಂತೆಯನ್ನು ಗೋಳಾಟದಿಂದ ಶಮನ ಮಾಡಿಕೊಳ್ಳಬೇಕಾಗಿದ್ದ ಹೆಂಡ್ತಿ......ಎಲ್ಲಿ!?'

'ಇದು ಈ ಯುಗದ ಮಹಾತ್ಮೆಯೇ?'

'ಸ್ವಾತಂತ್ರ್ಯದ ಸಾಮರ್ಥ್ಯವೇ?'

ಗಂಡನನ್ನು ಹಿಂಡ್ಹಿಪ್ಪೆ ಮಾಡುವುದೇ ಹೆಂಡಂದಿರ ಮನೋಧರ್ಮವಾಗಿರುವ ಕಾಲ! ತಮ್ಮ ಚಂಚಲ ಮನ ಚಡಪಡಿಸಿದಂತೆ ನಡಕೊಂಡು ಬೇಕೆಂದಾಗ ಬಲೆ ಬೀಸಿ ಕೈ ಹಿಡಿದವನ ಸರ್ವಸ್ವವನ್ನು ಸರಸದೊಂದಿಗೆ ಹೀರಿಕೊಂಡು, ವಿರಸವಾಗಿ, ಗಂಡು ಮುಖ ನೀರಸವಾಗಿ ಕಂಡಾಗ ಈ ರೀತಿ ತೀರಿಸಿ ಬಿಡಲೂ ಹಿಂಜರಿಯಲಾರರು—ಹಿಂದಿನ ಕಾಲದಲ್ಲಿ ಹಿರಿಯರಿಂದ ಅಬಲೆಯರು ಎಂದೆನಿಸಿಕೊಂಡು ಕತ್ತಲೆಯ ನೆರಳಿನಲ್ಲಿ ಬೆಳೆದು ಬಂದು ಇಂದಿನ ಯುಗಧರ್ಮದಂತೆ ಬದಲಾಗಿರುವ ಪ್ರಬಲೆಯರು!

ಕಡಿವಾಣವಿಲ್ಲದೆ ನಾಲಿಗೆ ಮನಬಂದಂತೆ ಮಾತಿನ ಚಟಾಕಿ ಹಾರಿ ಸುತ್ತಿತ್ತು.

ಪ್ರತಿಯೊಂದು ಮನೆಯ ವಾತಾವರಣ-ಹಗರಣ ಅರಿತಿರುವವರಂತೆ ಒದರುತ್ತಿದ್ದರು!

ಕಣ್ಣು ಕಂಡರಿಯದ ವೈಚಿತ್ರ್ಯವುಂಟೇ?

ಕಿವಿ ಕೇಳದ ವಾರ್ತೆಯಿರಬಹುದೇ?

ಪುಟ್ಟಣ್ಣ ನುಡಿಯ ನಡೆಯನ್ನು ಮೆಲುಕು ಹಾಕುತ್ತಾ ಆಡುವ ನಾಲಗೆಯ ವೈಖರಿಗಾಗಿ ಮುಗುಳು ನಗುತ್ತಾ ಪ್ರಸಾದರ ಮನೆಯ ಮೆಟ್ಟಲೇರಿದರು.

ಹೊರಗೆ ನೆರೆದವರ ಊಹೆಯೇ ಒಂದು ತೆರನಾದರೆ ಒಳಗೆ ನಡೆದಿದ್ದುದೇ ಬೇರೆಯಾಗಿತ್ತು!

ಪ್ರಸಾದರ ಪತ್ನಿ—ಪ್ರಮಿಳೆ ಹಗ್ಗದಿಂದ ಬಂಧಿತಳಾಗಿ ಮಂಚದಲ್ಲಿ ತುಲಗಿದ್ದಳು! ಆಕೆಗೆ ಇಹದ ಪರಿವೆಯಿರಲಿಲ್ಲ!

ವಂಚಕರ ಸಂಚಿನಿಂದ ವಂಚಿತಳಾಗಿ, ಇಹದ ಪರಿವೆಯಿಲ್ಲದೆ ಸವಡಿಸಿದ್ದವಳ ವಿಚಾರವಾಗಿ ಹೊರನಿಂತು, ಕೊಲೆಯಾದವರನ್ನು ತವಕದಿಂದ ನೋಡುತ್ತಾ ಏನೇನನ್ನುತ್ತಿದ್ದರು?

ಹೀಗಿದೆ ಆಡುವ ನಾಲಗೆಯ ಅಬ್ಬರ!

ಪಕ್ಕದ ಮನೆಯಲ್ಲಿ ಟೆಲಿಫೋನ್ ಇದ್ದುದರಿಂದ ಆಸ್ಪತ್ರೆಗೆ ಫೋನ್ ಮಾಡಿ, ಪ್ರಥಮ ಚಿಕಿತ್ಸೋಪಕರಣಗಳೊಂದಿಗೆ ಕೂಡಲೇ ಬರಬೇಕೆಂದು ಆದೇಶವನ್ನು ಡಾಕ್ಟರರಿಗಿತ್ತು, ಮರಳಿ ಬಂದ ಪುಟ್ಟಣ್ಣನವರು, ಮನೆಯ ಪರಿಶೀಲನೆಗೆ ಮುಂದಾದರು.

ಕೊಲೆಗೈದವರಾರು ಎಂದು ತಿಳಿದುಕೊಂಡು ಶಿಕ್ಷೆ ವಿಧಿಸಬೇಡವೆ?

ಸತ್ತವಸಿಗಾಗಿ ಕೊಂದವನ ಬಲಿಯೂ ನಡೆಯಬೇಕಲ್ಲ!

ಕೊಲೆ ಮಾಡಲು ಕಿಟಕಿಯ ಸರಳನ್ನು ಬಗ್ಗಿಸಿಯೋ, ಕನ್ನಡಿ ಒಡೆದು ದ್ವಾರ ರಚಿಸಿಯೋ ಹಂಚು ತೆಗೆದು ಒಳ ನುಸುಳಿ ಬಂದಿರಬಹುದೋ ಎಂದು ಸುತ್ತಲೂ ಕಣ್ಣು ಹಾಯಿಸಿದರು.

ಅಂಥಹ ಪ್ರಮಾದ ನಡೆದಿರಲಿಲ್ಲ!

ಮಂಚದಲ್ಲಿ ಮುಡಿದು ಬಾಡಿದ್ದ ಮಲ್ಲಿಗೆ ಹರಡಿ ಬಿದ್ದಿತ್ತು! ಗೋಡೆಯ ಬದಿಯಲ್ಲಿ ನಿಲ್ಲಿಸಿಟ್ಟ ಹಿಡಿಸೂಡಿಯ ಬಳಿ, ಸುಲಿದೆಸೆದ ಬಾಳೆ

ಹುಣ್ಣಿನ ಸಿಸ್ಸೆ ಬಿದ್ದಿತ್ತು! ಹಚ್ಚಿಟ್ಟಿದ್ದ ಬೆಡ್ ಲೆಂಪು ಹಾಗೆಯೇ ಮಂದ ಪ್ರಕಾಶ ಬೀರಿತ್ತು! ಸೆಕೆಯ ಪರಿಹಾರಕ್ಕೆ ಇಟ್ಟು ಕೊಂಡಿದ್ದ ಬೀಸಣಿಗೆ ನೆಲದಲ್ಲಿ ಬಿದ್ದಿತ್ತು!

ಮನೆಯ ಮೂಲೆ-ಮೂಲೆಯತ್ತಲೂ ದೃಷ್ಟಿಯ ಬೆಳಕು ಹರಿಸಿ, ಸೂಕ್ಷ್ಮ ಪರಿಶೀಲಿಸಿ ಮರಳಿದ ಪತ್ತೇದಾರರಿಗೆ ಶವದ ಪಕ್ಕದಲ್ಲಿ ಮುದುಚಿ ಬಿದ್ದಿದ್ದ ಕಾಗದದ ತುಂಡೊಂದು ಗಮನಕ್ಕೆ ಬಂತು.

ಅಂತಹ ಕಾಗದಗಳೇ ಪತ್ತೆ ಹಚ್ಚಲು ಮುನ್ನಡೆಯುವವರಿಗೆ ದಾರಿ ತೋರುವ ದೀಪವಲ್ಲವೆ?

ಕಾತುರತೆಯಿಂದ ಕಾಗದವನ್ನು ಕೈಯಲ್ಲಿ ತೆಗೆದುಕೊಂಡು ಓದ ತೊಡಗಿದರು.

"ಆಶಾಪಾಶದಿಂದ ಬಂಧಿಸಿ, ಮಾತಿನಿಂದ ಮೋಹಿಸಿ, ಮತ್ತೊಬ್ಬಳಿಗೆ ಮಾಂಗಲ್ಯ ಕಟ್ಟಿ ಮೈಮರೆತುದಕ್ಕೆ ಈ ಪ್ರತೀಕಾರ

ಮಾಯಾವಿನಿ

ಭಾವನೆಗಳ ಬಿರುಗಾಳಿಯೇ ಬೀಸಿ ಪ್ರಾಯಾಸವಾಯಿತು—ಪತ್ತೇದಾರರ ಮನದಲ್ಲಿ.

ಪ್ರತೀಕಾರದ ಪಣತೊಟ್ಟ ಹೆಣ್ಣು ಈ ಕೊಲೆ ಮಾಡಿದೆ. ಪ್ರಣಯ ಪ್ರಸಂಗದಲ್ಲಿ ವಂಚಿತಳಾಗಿ, ಮೋಸಗೈದವನನ್ನು ಬಲಿ ತೆಗೆದು ಕೊಂಡಿದ್ದಾಳೆ!

ಈ ಮಾಯಾವಿನಿ—ಯಾರು?

ಯಾರಿಂದ ಕೊಲೆ ನಡೆಯಿತು!?

ಈ ರಹಸ್ಯ ಬೇದಕಕ್ಕಾಗಿ ಯಾವ ಯುಕ್ತಿ ಹೂಡಬೇಕಾದೀತು?

ಹೆಣ್ಣು ಸಾಹಸಿಗಳಾಗುತ್ತಿದ್ದಾರೆ!

ಗರತಿ ಗೌರಮ್ಮನೆಂದೆನಿಸಿ, ತೊಟ್ಟಿಲು ತೂಗುತ್ತಿದ್ದ ಕೋಮಲ ಕೈ, ಪುಟ್ಟ ಪಾಪವನ್ನು ಮೃದುವಾಗಿ ಎತ್ತಿ ಆಡಿಸಿ, ಶುಶ್ರೂಷೆ ಮಾಡಿ ಬೆಳೆಯಿಸಿದ ಮೃದು ಕೈ, ಪೆನ್ನು ಹಿಡಿದು ಗಂಡಿನಂತೆ, ಗಂಡಾಗಿ ದುಡಿಯಲು ಮುಂದಾದಳು. ವಿಚಾರವಂತಳಾಗಿ ಮುಂದುವರಿದು, ತನ್ನ ಪಾಲಿಗೆ ಸಂಪಾದಿಸಿಕೊಳ್ಳಲೇಬೇಕೆಂದು ಹಟದಿಂದ ಸ್ತ್ರೀ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಬೇಕೇಬೇಕೆಂದು ಛಲದಿಂದ ಪಡೆದು, ತಾವು ಅಬಲೆಯರಲ್ಲ, ಪ್ರಬಲೆಯರು ಎಂದು ದಿಟ್ಟತನದ ನೇರ ಹೆಜ್ಜೆಯಿರಿಸಿ, ಬಿಸಿಲಿಗೆ ಕೊಡೆ ಹಿಡಿಯದೆ ಇಳಿದು, 'ಗಂಡು'ಗಳೆಂದು ಹಾರಾಡುತ್ತಿದ್ದವರಿಗೆ ತಮ್ಮ ಸಾಮರ್ಥ್ಯದ ಕೆಚ್ಚನ್ನು ತೋರಿಸಿಕೊಟ್ಟರು. ಹೆಜ್ಜೆಯ

ಮೇಲೆ ಹೆಜ್ಜೆಯಿರಿಸುತ್ತ, ಬದುಕಿನಲ್ಲಿ ತನ್ನ ಪ್ರಗತಿಯನ್ನು ಹೊಂದುತ್ತಿ ಪವರು ಇದೀಗ ತಮ್ಮ ಕುಲವುಹತ್ಮೆಯಾದ 'ಮುನಿದರೆ ಮಾರಿ' ಎಂಬ ತತ್ವದಂತೆ, ಪ್ರತೀಕಾರದ ಪಣಕ್ಕಾಗಿ, ತನ್ನ ಮನದ ಬಯಕೆ ಇಂಗಿ ಹೋಗಲೂ, ಚೂರಿಯನ್ನು ಹಿಡಿದು ನಾರಿತ್ವ ತೋರಲು ಮುಂದಾಗಿರುವ ನಾರೀ ರತ್ನಗಳನ್ನು ಪಡೆದಿರುವುದು ಭಾರತ ಮಾತೆಯ ಪೂರ್ವ ಪುಣ್ಯದ ಸುಕೃತ ಫಲದಿಂದಲ್ಲವೆ? ನಿಜ, ಇಂತಹ ಹೆಣ್ಣುಗಳೇ ಹೆಚ್ಚೆಚ್ಚಾಗಿ ಹುಟ್ಟಿ ಕೊಂಡರೆ, ಭಾರತದ ಸರ್ವ ಯೋಜನೆಗಳೂ ಫಲಪ್ರದವಾಗಬಹುದು! ಕನಸಿನಲ್ಲಿ ಕಾಣುತ್ತಿರುವ ರಾಮರಾಜ್ಯ ನೆಲೆಯಾಗಿ ನಿಲ್ಲಬಹುದು— ಎಂದಂದು ತಲೆದೂಗಿಕೊಂಡರು ಪತ್ತೇದಾರರು.

ಇನ್ಸ್‌ಪೆಕ್ಟರರು ತಮ್ಮ ಕಾರ್ಯಭಾರವನ್ನೆಲ್ಲಾ ತೀರಿಸಿ, ಶರೀರದ ಪರೀಕ್ಷೆಗಾಗಿ ಶವವನ್ನು ಆಸ್ಪತ್ರೆಗೆ ಸಾಗಿಸಿದರು.

ಮನೆಯ ಒಳ-ಹೊರಗೆ, ಅಂಗಳ, ತೋಟವನ್ನೆಲ್ಲಾ ಸಂಚರಿಸಿ ತನ್ನ ಮಾರ್ಗ ಬೇದನಕ್ಕೆ ಸಹಕರಿಸಲು ಕುರುಹುಗಳೇನಾದರೂ ದೊರೆ ಯಬಹುದೋ ಎಂದು ನಿರೀಕ್ಷಿಸುತ್ತಾ ಪರಿಶೀಲಿಸಿದ ಪತ್ತೇದಾರರಿಗೆ ನಿರಾಶೆಯೇ ಆಯಿತು.

ಆಸ್ಪತ್ರೆಯಿಂದ ಆಗಮಿಸಿದ ಡಾಕ್ಟರರು, ಪ್ರಮೀಳೆಯು ಹೊರಟು ಹೋಗಿದ್ದ 'ಆ' ಜಗತ್ತಿನಿಂದ 'ಈ' ಜಗತ್ತಿಗೆ ಸೆಳೆದು ತರಲು ಪಯತ್ನಿಸ ತೊಡಗಿದರು.

ತಮ್ಮ ತಮ್ಮ ಕಾರ್ಯಗಳನ್ನು ಚಾಚೂ ತಪ್ಪದೆ ತೀರಿಸಿಕೊಂಡು ಬಂದ ಇನ್ಸ್‌ಪೆಕ್ಟರ್ ವಿಶ್ವನಾಥರು-ಪತ್ತೇದಾರ ಪುಟ್ಟಣ್ಣನವರು ಪ್ರಮೀ ಳೆಯ ಪ್ರಜ್ಞೆಗಾಗಿ ಕಾತರತೆಯಿಂದ ಕೆರಳಿ ಕುಳಿತಿದ್ದು, ಕ್ರಿಯಾ ಸಮ ಯದಲ್ಲಿ ಅಸ್ಪಷ್ಟ ನುಡಿಗಳೇನಾದರೂ ಕೇಳಿ ಬರುವುದೋ ಎಂದು ಕಿವಿ ನಿಗುರಿಸಿ ಕೇಳುತ್ತಿದ್ದರು.

ಆದರೆ...ಪ್ರಮೀಳೆಯ ಬಾಯಿಯಿಂದ ಮಾತೇ ಹೊರಬೀಳಲಿಲ್ಲ!

ಇನ್ಸ್‌ಪೆಕ್ಟರರು ಗಂಭೀರವಾಗಿ, ಕೊಲೆಯಾರಿಂದ ನಡೆದಿರಬಹುದು ...ತಾನು ಇನ್ನೇನು ಕ್ರಮಕೈಕೊಳ್ಳಬೇಕು...ಯಾರ್ಯಾರನ್ನು ಈ ಕೊಲೆಯ ಸಂಬಂಧ ಗೊತ್ತುಹಚ್ಚಬೇಕು ಎಂದು ಯೋಚನಾಮಗ್ನರಾಗಿ ಕಾಲ ಮೇಲೆ ಕಾಲಹಾಕಿಕೊಂಡು ಸಿಗರೇಟು ಸೇದುತ್ತಿದ್ದರು.

ಪತ್ತೇದಾರರು, ತಮ್ಮ ಬುದ್ಧಿವಂತಿಕೆಯ ಗಂಟು ಬಿಚ್ಚಿ, ಈ ಕೊಲೆಗೆ ಪ್ರೇರಿತರಾರು-ಪ್ರೋತ್ಸಾಹಕರಾರು? ಯಾರ ಹಂಬಲವಾಗಿರ

ಬಹುದು! ಜಂಬಲವಾಗಿರಬಹುದು! ಚೀಟಿಯಲ್ಲಿ ಬರೆದದ್ದು ನಿಜವಾಗಿರಬಹುದೇ? ಅಥವಾ ಇದು ಕಣ್ಣು ಮುಚ್ಚಾಲೆಯೋ? ಲಿಖಿತದಂತೆ ತಪಾಸಣೆಗೆ ಮುಂದಾದಾಗಿ ನಿಜವನ್ನು ಮರೆಸಿ ತಾವು ನೆಮ್ಮದಿಯಿಂದಿರಬಹುದೆಂದು ಬರೆದಿರಬಹುದೇ?—ಪತ್ತೇದಾರರು ತಮ್ಮ ಮನಸ್ಸಿನಲ್ಲಿಯೇ ವಾದಿಸುತ್ತಿದ್ದರು.

ಡಾಕ್ಟರರು, ಪ್ರಮೀಳೆಗೆ ಬಾರದೆ ಇರುವ ಪ್ರಜ್ಞೆಗೆ ಯಾವ ಚಿಕಿತ್ಸೆ ಮಾಡಬೇಕು? ಆಕೆಯನ್ನು ಯಾವ ಮದ್ದಿನಿಂದ ಪ್ರಜ್ಞೆ ತಪ್ಪಿಸಿರಬಹುದು! ಹೊಟ್ಟೆಗೇನಾದರೂ ಸೇವಿಸಿರಬಹುದೇ ಎಂದು ತನ್ನಷ್ಟಕ್ಕೆ ವಿಚಾರಿಸಿಕೊಳ್ಳುತ್ತಿದ್ದರು.

ಮೂವರೂ ಕಾರ್ಯೋನ್ಮುಖರಾಗಿ ಒಂದೊಂದು ವಿಧವಾಗಿ ಆಲೋಚಿಸುತ್ತಿದ್ದರು.

೨

ತ್ರಿಮೂರ್ತಿಗಳು ತ್ರಿಕೋಣವಾಗಿ ಆಲೋಚಿಸುತ್ತಿದ್ದಂತೆ 'ಅನಂತ ಕೆಫೆ'ಯ ಮಾಲಿಕರಾದ ಹಯಗ್ರೀವಾಚಾರ್ಯರು ಆಗಮಿಸಿದರು.

ಚಿಂತಾಜನಕ ಸ್ಥಿತಿಯಲ್ಲಿ ನಿರ್ಜೀವಿಯಂತೆ ಬಿದ್ದಿರುವ ಪ್ರಜ್ಞಾಹೀನ ಪ್ರಮೀಳೆಯನ್ನೊಮ್ಮೆ ಮರುಕದ ನೋಟದಿಂದ ದಿಟ್ಟಿಸಿದ ಆಚಾರ್ಯರು ನಿಟ್ಟುಸಿರು ಬಿಟ್ಟು, ಕಿಸೆಯಲ್ಲಿದ್ದ ಕರವಸ್ತ್ರ ಹೊರತೆಗೆದು ಮುಖ ಒರಸಿಕೊಂಡರು.

ಅಲ್ಲಿ ನೆರೆದಿದ್ದವರು ಅಪರಿಚಿತರಾದರೂ, ನಸುನಗುತ್ತ ನಮಸ್ಕರಿಸಿ ತಮ್ಮ ಪರಿಚಯವನ್ನು ತಾವೇ ಮಾಡಿ ಕೊಟ್ಟರು.

ಮೆನೇಜರರ ಕೊಲೆಯ ಸಂಬಂಧವಾಗಿ ಅವರ ಪೂರ್ವೋತ್ತರವನ್ನು ಮಾಲಿಕರು ಅರಿತಿರಬಹುದೆಂದು ಭಾವಿಸಿದ ಪತ್ತೇದಾರರು, ಮಾಲಿಕರನ್ನು ಕುಳಿತುಕೊಳ್ಳುವಂತೆ ವಿನಂತಿಸಿ:

'ನಿನ್ನೆ ಇವರು ಹೊಟೇಲಿಗೆ ಬಂದಿದ್ದರೆ?

ಹೌದೆಂಬಂತೆ ಕಿರುಕೆಮ್ಮು ಮಿಶ್ರಿಸಿ ತಲೆಯಲ್ಲಾಡಿಸಿದರು.

'ರಾತ್ರಿ ಎಷ್ಟು ಗಂಟೆಗೆ ಹೊಟೇಲಿನಿಂದ ಹೊರಟು ಹೋದರು'

'ನಿನ್ನಿನ ಸಂಗ್ರಹಿತ ಹಣವನ್ನೆಲ್ಲಾ ನನ್ನ ವಶಕ್ಕೆ ಒಪ್ಪಿಸಿ ಸಾಧಾರಣ 9–30 ಗಂಟೆಗೆ ಇವರು ಮನೆಯ ಹಾದಿ ಹಿಡಿದಿದ್ದರು'

'ನಿನ್ನೆ ಪ್ರಸಾದರ ಬೇಟಿಗೆ ಪರಿಚಿತರ್ಯಾರಾದರೂ ಬಂದಿದ್ದರೇ?'

'ನಾನರಿಯೆ!'

'ನೀವು ಹೊಟೇಲಿನಲ್ಲಿ ಇರುವುದಿಲ್ಲವೆ?'

'ಇಲ್ಲ!'

'ಪ್ರಸಾದರು ತಮ್ಮ ಹೊಟೇಲಿಗೆ ಬಂದು ಎಷ್ಟು ವರ್ಷವಾಯಿತು'

'ಚಿಕ್ಕ ಬಾಲಕನಾಗಿದ್ದಲಾಗಾಯ್ತು, ಅವರು ನಮ್ಮ ಹೊಟೇಲಿನ ಕೂಳಿನಲ್ಲಿಯೇ ಬೆಳೆದವರು.'

'ಚಿಕ್ಕಂದಿನಿಂದಲೂ ಮೆನೇಜರ್ ಆಗಿದ್ದರೆ?'

'ಇಲ್ಲ; ಮನುಷ್ಯನ ಪ್ರಮಾಣಿಕತೆಯನ್ನು ಅರಿಯದೆ, ಹಣದ ವಹಿವಾಟು ನೋಡಿಕೊಳ್ಳಲು ಬಿಡಲು ಸಾಧ್ಯವಿದೆಯೇ? ಅವರ ಸತ್ಯಾಸತ್ಯತೆ,

ನ್ಯಾಯ-ನಿಷ್ಠೆಯನ್ನೆಲ್ಲಾ ತುಲನಾತ್ಮಕವಾಗಿ ಪರಿಶೀಲಿಸಿಯೇ ಮೆನೇಜರ್ ಪದವಿಯಿತ್ತಿರುವೆನು?

'ಅವರು ಮೆನೇಜರ್ ಆಗಿ ಎಷ್ಟು ವರ್ಷಗಳಾದುವು?'

'ಏಳೆಂಟು ವರ್ಷವಾಯಿತು'

'ಅವರಿಗೆ ಯಾರಾದರೂ ವೈರಿಗಳಿದ್ದರೆ?'

'ನನಗೆ ತಿಳಿದ ಮಟ್ಟಿಗೆ ಯಾರೂ ಇರಲಿಲ್ಲ. ಇವರು ವೈರತ್ವವನ್ನು ಗಳಿಸಿಕೊಳ್ಳುವಂತಹ ಸ್ವಭಾವದವರೂ ಅಲ್ಲ. ನಯ-ವಿನಯ ಭರಿತರು. ಸಾಧು ಸಜ್ಜನರು. ಕೆಲಸದವರೊಡನಂತೂ ನಗು ನಗುತ್ತಲೇ ವ್ಯವಹರಿಸುತ್ತಿದ್ದು, ಯಾರ ಮೇಲು ಚಾಡಿ ಮಾತನಾಡಿದವರಲ್ಲ. ಅವರು ಕೋಪದಿಂದ ನಂಜು ಕಾರಿದುದು ನಾನು ಕಂಡರಿಯೆ.'

'ಅವರನ್ನು ಮೆನೇಜರ್ ಮಾಡಿದುದರಿಂದ ನಿಮ್ಮಲ್ಲಿರುವ ಇನ್ನಾವ ಕೆಲಸಗಾರರಿಗಾದರೂ ಬೇಸರವಾಗಿದೆಯೆ? ತನಗೆ ಬರಬೇಕಾಗಿದ್ದ ಸ್ಥಾನ ಪರರಿಗೆ ಹೋಯಿತೆಂದು ಕ್ರೋಧಗೊಂಡವರಿರುವರೇ?'

'ಇವರಷ್ಟು ವರ್ಷ—ಇವರಂತೆ ದುಡಿದವರು ನಮ್ಮ ಹೊಟೇಲಿನಲ್ಲಿ ಇನ್ನಾರೂ ಇಲ್ಲ'

'ಇವರಿಗೆ ಮದುವೆಯಾದುದು ಯಾವಾಗ?'

'ಎರಡು ವರ್ಷವಾಯಿತು'

'ಈ ಹುಡುಗಿಯ ತವರು ಮನೆಯೆಲ್ಲಿ?'

'ಈಕೆ ಮಂಗಳೂರಿನ ಹುಡುಗಿ!'

'ಇವರು ಇಲ್ಲಿನ ಯಾವುದಾದರೂ ತರುಣಿಯೊಡನೆ ಸ್ನೇಹಪಿರಿಸಿಕೊಂಡಿದ್ದರೆ.'

'ಅದನ್ನು ನಾನರಿಯೆ!'

'ಅಂದರೆ......!'

'ಅಂಥಹ ಗೂಢವನ್ನು ಬೇಧಿಸಲು ನಾನೆಂದೂ ಮುಂದಾಗಲಿಲ್ಲ. ಅವರಿಗೆ ಹುಡುಗಿಯರ ಹುಚ್ಚು ಇದೆ ಎಂಬ ವಾರ್ತೆಯನ್ನು ನಾನು ಕೇಳರಿಯೆ. ಅದಲ್ಲದೆ ನಮ್ಮಲ್ಲಿಯ ಕೆಲಸ ಮುಗಿದ ನಂತರ ಎಲ್ಲಿ ಹೋಗುವಿರಿ ಎಂದು ನಾನೆಂದೂ ಪ್ರಶ್ನಿಸಿದವನಲ್ಲ.'

'ಆದರೆ......ಅವರಿಗೂ ಓರ್ವ ಪತಂಗವಿದೆಯಂತೆ. ಅವರಾವಾಗಲೂ ತಿರುಗುತ್ತಿದ್ದರಂತೆ! ಕಾರಿನಲ್ಲಿ ಊರಿಂದೂರಿಗೆ ಸಂಚರಿಸುತ್ತಿದ್ದರಂತೆ!'

'ನಿಮಗಾರು ಹೇಳಿದರು?' ಆಶ್ಚರಿಯಿಂದಲೇ ಪ್ರಶ್ನಿಸಿದರು ಮಾಲಿಕರು.

'ಅಲ್ಲಾರೋ ಹೊರಗೆ ಮಾತಾಡುತ್ತಿದ್ದರು'

'ಇದು ಶುದ್ಧ ಸುಳ್ಳು' ಅವರು ರಜೆ ಪಡೆದಾಗಲೀ, ನನಗರಿವಿಲ್ಲದಂತೆ ಹೋದವರೇ ಅಲ್ಲ.'

'ಈ ಮನೆಯಲ್ಲಿ ಅವರು ಮೊದಲಿನಿಂದಲೂ ವಾಸವಾಗಿದ್ದರೆ!'

'ಮದುವೆಯಾದ ನಂತರವೇ ಈ ಬಿಡಾರ ಮಾಡಿದರು'

'ಅದರ ಮೊದಲು ಅವರೆಲ್ಲಿರುತ್ತಿದ್ದರು?'

'ನಮ್ಮ ಹೊಟೇಲಿನ ಕೋಣೆಯೊಂದರಲ್ಲಿ!'

'ನಿಮ್ಮ ಮನೆ ಎಲ್ಲಿದೆ?'

'ಇಲ್ಲಿಯೇ ಮುಂದಿನ ಬೀದಿಯಾದ 'ಮೋಹಿನಿ ಪುರಂ'...... ...ಇಲ್ಲಿಂದ ಎಂಟ್ಹತ್ತು ಮನೆಯಾಚೆ'

ಅಷ್ಟೊತ್ತಿಗೆ ಪ್ರವಿಣಾಳೆ ಒಮ್ಮೆ ಕಣ್ಣು ತೆರೆದು...ತೆರೆದಂತೆ ಪುನಃ ಮುಚ್ಚಿಕೊಂಡಳು. ಆಕೆಯ ತೆರೆದ ಕಣ್ಣುಗಳನ್ನು ಕಂಡು, ಮಾಲಿಕರ ಮುಖಾರವಿಂದದಲ್ಲಿ ನಗೆಯ ಮಲ್ಲಿಗೆ ಅರಳಿ ಮುದುಡಿಕೊಂಡಿತು. ಅದೇನನ್ನೋ ಗ್ರಹಿಸಿಕೊಂಡ ಮಾಲಿಕರು:

'ನಾನಿನ್ನು ಹೊರಡಬಹುದಲ್ಲವೆ?'

'ಅವಸರವೇನು? ಸ್ವಲ್ಪ ತಡೆಯಿರಿ!'

'ಹೊಟೇಲಿನಲ್ಲಾರೂ ಇಲ್ಲ'

'ಈಗ ಅಲ್ಲೇನೂ ಬಿಸಿನೆಸ್ಸ್ ನಡೆಯೋದಿಲ್ಲವೆ? ಹೊಟೇಲು ಮುಚ್ಚಿಕೊಂಡು ಬಂದಿರುವಿರಾ?'

'ಇಲ್ಲ; ಸಪ್ಲೈ ಮಾಡುವ ಹುಡುಗನಿಗೆ ಗಲ್ಲದ ಬಳಿ ನೋಡಿಕೊಳ್ಳಲು ಹೇಳಿ ಬಂದಿರುವೆನು. ಆದರೂ, ಯಾರನ್ನೂ ಈ ಕಾಲದಲ್ಲಿ ನಂಬಲು ಸಾಧ್ಯವಿಲ್ಲ' ಎಂದು ದೇಶಾವರಿ ನಗೆ ಬೀರಿದರು.

'ಆದೀತು ಹೋಗಿ. ತಮ್ಮಿಂದೇನಾದರು ಮಾಹಿತಿ ಬೇಕಾದರೆ ಬಂದು ಕಾಣುತ್ತೇವೆ'

'ಓಹೋ...ಬನ್ನಿ. ಅಗತ್ಯವಾಗಿ ಬನ್ನಿ. ಈ ಕೊಲೆ ಯಾರಿಂದ ನಡೆಯಿತು ಎಂದು ತಾವು ಕಂಡುಹಿಡಿಯಲೇ ಬೇಕು. ನನ್ನ ಕೈಲಾದಷ್ಟು ಸಂಪೂರ್ಣ ಸಹಕಾರ ನಾನೀಯುತ್ತೇನೆ' ಎಂದು ಕೈಮುಗಿದ ಹಯಾಗ್ರೀವಾಚಾರ್ಯರು ಅವಸರದ ನಡಿಗೆಯಿಂದ ಹೊರ ಹೊರಟು ಹೋದರು.

೩

ಗಂಟೆಗಳ ಮೇಲೆ ಗಂಟೆಗಳು ಉರುಳುತ್ತಿತ್ತು. ಜೀವದ ಬದುಕಿಗಾಗಿ ಡಾಕ್ಟರರ ಹೋರಾಟ ನಡೆಯುತ್ತಲೇ ಇತ್ತು. ಮೃತ್ಯುವಿನೊಡನೆ ಹೋರಾಡಲು ಶಕ್ತರಾಗಿರುವ ಡಾಕ್ಟರರು, ಜೀವದಿಂದ ಆತ್ಮ ಹಾರಿ ಹೋಗುವ ವರೆಗೆ ತನ್ನ ಪ್ರಯತ್ನ ಮಾಡುತ್ತಿರಲೇ ಬೇಕಲ್ಲವೆ?

ಬದುಕು—ಸಾವು ದೈವೇಚ್ಛೆ....ಪ್ರಯತ್ನ ಮಾತ್ರ ಮಾನವನದು!

ಡಾಕ್ಟರರು ಆಸ್ಪತ್ರೆಗೆ ಫೋನ್ ಮಾಡಿ ತನಗೆ ಬೇಕಾದ ಮದ್ದುಗಳನ್ನು ತರಿಸಿಕೊಂಡರು.

ಸುಮಾರು ಹನ್ನೊಂದು ಗಂಟೆಗೆ, ತಮ್ಮ ಕೊನೆಯ ಪ್ರಯತ್ನ ಎಂದು ಚುಚ್ಚಿದ ಇಂಜೆಕ್ಷನ್‌ನಿಂದ ಪ್ರಮೀಳೆ ಸಂಪೂರ್ಣ ಎಚ್ಚತ್ತು ಎದ್ದು ಕುಳಿತು ತನ್ನ ಕೆದರಿದ ಕೂದಲನ್ನು ಸರಿಪಡಿಸಿಕೊಂಡಳು.

ಎದುರಿನಲ್ಲಿ ಕುಳಿತಿದ್ದ ಖಾಕಿ ವಸ್ತ್ರಧಾರಿ ಇನ್ಸ್‌ಪೆಕ್ಟರು ಅಪರಿಚಿತ ದುಂಡುಗಣ್ಣಿನ ನವಯೌವ್ವನ ವ್ಯಕ್ತಿ, ಶುಶ್ರೂಷೆ ಮಾಡುತ್ತಿದ್ದ ಡಾಕ್ಟರರನ್ನು ಕಂಡು ಬೆರಗು ಕಣ್ಣಿನಿಂದ ನೋಡತೊಡಗಿದಳು, ಬೋಧ ತಪ್ಪಿ ಬಳಲಿ ಬೆಂಡಾದ ಬಾಲೆ.

ಪತ್ತೇದಾರಿ ಪುಟ್ಟಣ್ಣ ನಡೆದ ವೈಚಿತ್ರವನ್ನೆಲ್ಲಾ ಸಂಕ್ಷಿಪ್ತವಾಗಿ ವಿವರಿಸಲು, ಪುನಃ ಬೋಧ ತಪ್ಪಿ ಮಂಚಕ್ಕೊರಗಿದಳು ಕೋಮಲೆ—ಕಡಿದ ಬಾಳೆಯ ಗಿಡ ಕೆಡದು ಬಿದ್ದಂತೆ.

ಮರಳಿ ಎಚ್ಚತ್ತ ಹೆಣ್ಣು:

'ಅಯ್ಯೋ! ದೇವರೆ? ಕರುಣಾಸಾಗರನೆಂದು ಬಿರುದಾಂಕಿತನಾದ ಪರಮಾತ್ಮನೆ, ನನ್ನ ಬಾಳುವೆಯ ದೇಗುಲದ ದೇವರನ್ನೇ ಅಪಹರಿಸಿ ನನ್ನನ್ನು ನಿರಾಶ್ರಿತಳನ್ನಾಗಿ ಮಾಡಿದೆಯಾ? ನಾನು ಮಾಡಿದ ಯಾವ ಅಪರಾಧಕ್ಕಾಗಿ ಈ ಘೋರ ಶಿಕ್ಷೆಯನ್ನಿತ್ತಿರುವಿ? ನಾನು ಯಾರಿಗೂ ಯಾವ ವಿಧದ ಅಪಚಾರವನ್ನು ಮಾಡದೆ, ಪ್ರತಿ ಶುಕ್ರವಾರ ನಿನ್ನ ದರ್ಶನಕ್ಕಾಗಿ ಬರುತ್ತಿದ್ದು, ಭಕ್ತಿಯಿಂದ ಪೂಜಿಸಿ ಪ್ರಸಾದ ಸ್ವೀಕರಿಸುತ್ತಿದ್ದ ನನ್ನಲ್ಲಿ ನಿನ್ನ ಅಭಯ ಹಸ್ತ ಹರಿಸದಾದೆಯಾ? ನನಗಿನ್ನಾರು ಗತಿ! ತವರಿನಾಶ್ರಯ ತೊರೆದ ನನಗಿನ್ನಾರು ಆಶ್ರಯ ಕೊಡುವರು? ನಾನು ಇನ್ನು ಹೇಗೆ ಬದು

ಕಲಿ! ಮನೆಯೊಡತಿಯಾಗಿ ಮೆರೆದ ನಾನು ಬದುಕಿಗಾಗಿ ಪರಮನೆಯ ಆಳಿನಂತೆ ಎಂಜಲು ತೊಳೆದು, ಈ ಒಡಲು ತುಂಬಬೇಕೇ? ಹಾ ವಿಧಿಯಾಟವೇ? ಎಂದು ನಾನಾ ವಿಧವಾಗಿ ಧ್ವನಿ ಏರಿಸಿ-ತಗ್ಗಿಸಿ ರೋಧಿಸತೊಡಗಿದಳು.

ಕಷ್ಟ-ಸುಖದ ಏರಿಳಿತಕ್ಕೆ ಬೆದರಬಾರದೆಂದು ಪತ್ತೆದಾರರು ಸಮಾಧಾನದ ಮಾತಾಡಿ, ಹಿಂದಿನ ರಾತ್ರಿ ಏನಾದರೂ ಅಚಾತುರ್ಯ ನಡೆದುದರ ನೆನಪಿದೆಯೇ ಎಂದು ವಿಚಾರಿಸಿದರು.

ತನ್ನಿಂದ ತಾನೇ ಚೇತರಿಸಿಕೊಂಡ ಪ್ರಮೀಳೆ ಅಳುವುದನ್ನು ನಿಲ್ಲಿಸಿದಳು ಮಂಕುಬಡಿದವಳಂತೆ ಕೆಲವು ನಿಮಿಷ ಎದುರಿನ ಗೋಡೆಯಲ್ಲಿ ಹಸನ್ಮುಖಿಯಾಗಿ ನೋಡುತ್ತಿದ್ದ ತನ್ನ ಪತಿ ದೇವರ ಪಟವನ್ನು ನೋಡಿ ನಿಟ್ಟುಸುರು ಬಿಟ್ಟು:

'ಸಾಧಾರಣ ನಡುರಾತ್ರಿ ಕಳೆದಿರಬಹುದು, ಎಲ್ಲೆಡೆಯಲ್ಲಿಯೂ ನಿಶ್ಶಬ್ದತೆ ಆವರಿಸಿತ್ತು. ಆಗ ಅವರು 'ಅಯ್ಯೋ ಸತ್ತೆ' ಎಂದು ಕಿರಿಚಿಕೊಂಡರು. ರೋದನ ಧ್ವನಿಯಿಂದ ಎಚ್ಚೆತ್ತ ನಾನು ದೀಪ ಹಚ್ಚಲು ಬೆಂಕಿ ಕಡ್ಡಿ ಗೀರಿದೆ. ಮೊದಲಿನದು ಹತ್ತಿಕೊಳ್ಳದೆ ಆರಿಯುರಿಕಾರಿನಂದಿಕೊಳ್ಳಲು, ಇನ್ನೊಂದು ಗೀರಲು ಮುಂದಾದೆ. ಅಷ್ಟೊತ್ತಿಗೆ ನನ್ನೆದುರು ಕರಿ ವಸ್ತ್ರದಿಂದ ಮೈಮರೆಸಿಕೊಂಡ ವ್ಯಕ್ತಿಯೊಂದು ಕೈಯಾಡಿಸುತ್ತಿರುವಂತೆ ಭಾಸವಾಯಿತು. ಮುಂದೇನಾಯಿತು—ಅವರಿಗೇನಾಯಿತು ಎಂದು ನನಗೆ ತಿಳಿಯದು,' ಎಂದವಳು ಪುನಃ ರೋಧಿಸತೊಡಗಿದಳು.

ಕೊಂದವರಾರು? ಗಂಡೋ-ಹೆಣ್ಣೊ? ಕಂಡುಹಿಡಿಯುವುದು ಹೇಗೆ? ಯಾವ ಸೂತ್ರವನ್ನವಲಂಭಿಸಬೇಕು?

ವಿಚಾರಾಸಕ್ತರಾದ ಪತ್ತೇದಾರರು ಕೊಂದ ಪಾತಕಿಯನ್ನು ಕಂಡುಹಿಡಿದು ತಕ್ಕ ಶಿಕ್ಷೆಗೆ ಗುರಿಪಡಿಸುವೆನೆಂಬ ಭರವಸೆಯನ್ನು ಪ್ರಮೀಳೆಗಿತ್ತು ಮೂವರೂ ಅಲ್ಲಿಂದ ಹೊರಟರು.

ಪತ್ತೇದಾರರ ಪ್ರಯತ್ನದ ಫಲವಾಗಿ ಕೊಂದವನ ಪತ್ತೆಯಾದರೂ ಪ್ರಮೀಳೆಗೆ 'ಗಂಡ' ಎನ್ನುವ ಆ ವ್ಯಕ್ತಿ ಮರಳಿ ದೊರೆಯಬಹುದೆ?

ಹೆಣ್ಣಾಗಲೀ—ಗಂಡಾಗಲೀ, ತಮ್ಮ ಜೀವಮಾನದಲ್ಲಿ ವಿವಾಹದ ಪವಿತ್ರ ಗಂಟಿನಿಂದ ಬಂಧಿತರಾಗುವುದು ಒಂದು ಬಾರಿ......ಆ ನಂತರ ಸುಖೋಲ್ಲಾಸ ಬಯಸಿದವರ ಬಳಿ ಬರುವವರೆಲ್ಲರೂ.........?

ಪುಣ್ಯಕ್ಕೆ ತಕ್ಕಂತೆ ದೊರೆಯುವ ಗಂಡನನ್ನೇ ಆಶ್ರಯಿಸಿ ಬಂದ ಹೆಣ್ಣಿಗೆ ಇನ್ನಾರು ಗತಿ! ಒಬ್ಬನ ಕೈಯಲ್ಲಿ ತನ್ನ ಕೈಯಿರಿಸಿ ಜೋಡಿಸಿದ ನಂತರ ಆಕೆಗೆ ಇನ್ನೊಬ್ಬನ ಕೈ ಮುಟ್ಟುವ ಅಧಿಕಾರವಿಲ್ಲ. ಗಂಡಿನ ನೆರಳೂ ಸೋಂಕದಂತೆ ಮೈ ಮುದುಡಿಕೊಂಡು ಆಕೆ ಇಲಿಯಂತೆ ಬದುಕಿರಬೇಕು. ಆಶ್ರಯದಾತ ಅನ್ನವಿಕ್ಕಿದರೂ ತಿನ್ನಬೇಕು—ಇಕ್ಕದಿದ್ದರೂ ಮೌನವಾಗಿರಲೇಬೇಕು. ಗಂಡನ ಎದುರು ನಿಂತು ಮಾತಿಗೆ ಪ್ರತಿ ಮಾತಿನ ಉತ್ತರವೀಯುವ ಅವಕಾಶವಿಲ್ಲ. ಹೊಡೆದರೂ ಬಡೆದರೂ ಪ್ರತಿಭಟಿಸಬಾರದು. ಪತಿಯೇ ಪ್ರತ್ಯಕ್ಷ ದೇವರು—ಅವನ ದಯಾಪೂರಿತ ಕರುಣಾಕ್ಷವಿಲ್ಲದಿದ್ದರೆ ಹೆಣ್ಣು ಬಾಳಲಾರಳು ಎಂದು ಬದುಕುತ್ತಿದ್ದ ಕಾಲ ನಮ್ಮ ಹಿರಿಯರಿರುವಾಗ ಇತ್ತಂತೆ—ಆದರೆ ಆ ಕಾಲ ಅಕಾಲಿಕವಾಗಿ ಬದಲಾಗುತ್ತಿದೆಯಂತೆ—ಅದೇ ಈ ಕಾಲ!

ಮನೆ ಸೇರಿ ಆರಾಮ ಕುರ್ಚಿಯಲ್ಲಿ ಕಾಲು ನೀಡಿ ಕುಳಿತ ಪತ್ತೇದಾರರು ಆಲೋಚನಾ ಸಾಗರದ ತೆರೆಗಳ ಮಧ್ಯೆ ಉರುಳಾಡುತ್ತಿದ್ದರು.

ಕೊಲೆ—ಈ ಕೊಲೆ!

ಹಣಕ್ಕಾಗಿ ಪ್ರಸಾದರ ಪ್ರಾಣಹರಣವಾಗಲಿಲ್ಲ! ಆಸ್ತಿಯ ಪಾಲಿನಾಸೆಯಿಂದ ಈ ಕೊಲೆ ನಡೆಯಲಿಲ್ಲ! ಸ್ಥಾನ-ಮಾನಗಳ ಹೊಯ್ದಾಟಕ್ಕಾಗಿ ನಡೆದ ಕೊಲೆಯಲ್ಲ! ದ್ವೇಷಾಸೂಯೆಯಿಂದ ನಡೆದ ಕೊಲೆಯಲ್ಲ! ಮೋಸ-ವಂಚನೆಗಾಗಿ ನಡೆದ ಕೊಲೆಯಲ್ಲ!

ಹಾಗಾದರೆ.........?

ಪ್ರಾಮಾಣಿಕತನದಿಂದ ನಡೆದು ಬಂದಿರುವಂತಹ ಪ್ರಸಾದರಲ್ಲಿ ಯಾರಿಗೂ ಹಗೆತನವಿಲ್ಲ.

ಚೀಟಿಯಲ್ಲಿ ಬರೆದು ವ್ಯಕ್ತಪಡಿಸಿರುವಂತೆ ಪ್ರಣಯ ಪ್ರಕರಣವಾಗಿರಬಹುದೇ?

ಆದರೆ, ಪ್ರಸಾದನ ಚರ್ಯೆಯಲ್ಲಿ ಅಂತಹ ಪ್ರಣಯ ದುರಂತಕ್ಕೆ ಅವಕಾಶವಿಲ್ಲ.

ಹಾಗಾದರೆ, ಪ್ರಮಿಳೆಯದೇನಾದರೂ ಕಾರಸ್ಥಾನವಿರಬಹುದೇ?

ಪ್ರಮೀಳೆಯನ್ನು ಕಂಡ ಕಣ್ಣು, ಆಕೆಯ ಸೌಂದರ್ಯ ಸೌರಭಕ್ಕಾಗಿ ಮಾರುಹೋಗದಿರಲಾರದು! ಮಂಗಳೂರಿನ ಹುಡುಗಿಯರು ಚೆಲುವೆಯರು ಎನ್ನುವುದಕ್ಕೆ ಪ್ರಮೀಳೆಯೇ ಸಾಕ್ಷಿ! ಆಕೆ ಪಟ್ಟಣದ ಪತಂಗ!

ಅವಳು ಪಟ್ಟಣದಲ್ಲಿ ಬೆಳೆದು, ಉದ್ಯಾನವನದಲ್ಲಿ ವಿರವಿಸುತ್ತ ಯಾರನ್ನಾದರೂ ಮೋಹಿಸಿರಬಹುದೇ? ಯಾರನ್ನಾದರೂ ವಿವಾಹವಾವಾಗುವೆನೆಂದು ಭಾಷೆ ಕೊಟ್ಟು, ವಂಚಿಸಿರಬಹುದೆ?

ಯಾರನ್ನೂ ಈ ಕಾಲದಲ್ಲಿ ನಂಬಲಸಾಧ್ಯ!

ಮುಖ, ಮುಖ ನೋಡಿದೊಡನೆ ಮರುಳಾಗುವವರಿಗೇನೂ ಕಡಿಮೆಯಿಲ್ಲ.

ಹುಚ್ಚು ಹಂಬಲದಿಂದ ಮೆಚ್ಚಿ ಬೆಂಬತ್ತಿ ಬಂದು ಮೋಹಿಸುವೆನೆಂಬ ಆಶಾಪಾಶವನ್ನೊಡ್ಡಿದ ಹುಡುಗನ ಕೈಯ ಮೇಲೆ ತನ್ನ ಕೋಮಲ ಕೈಯಿರಿಸಿ, ಹೃದಯ ವಿಡಾಡಿಸಿ, ಕಣ್ಣು ಕೂಡಿಸಿ, ಹುಬ್ಬು ಹಾರಿಸಿ, ಮೃದು ಮಧುರವಾಗಿ 'ನಾನು ನೀನು ಜೋಡಿ' ಎಂದಿತ್ತ ಭಾಷೆಗೆ ಭೂಷಣವಾದರೂ ಏನು?

ಹುಚ್ಚು ಮನಸ್ಸಿನ ಕಿಚ್ಚು ಕೆದರಿದರೆ ಕೊಚ್ಚಿ ಕೊಲ್ಲುವ ಕೊಲೆಯೇ ಪೂರಕವಲ್ಲವೆ?

ಕೊಲೆಯೇನೋ ನಿಜ! ಕೊಂದವರು ಯಾರು?

ಅದೇನೋ ಪಕ್ಕನೆ ಜ್ಞಾಪಿಸಿಕೊಂಡ ಪತ್ತೇದಾರರು ಮನೆಯಿಂದ ಹೊರ ಹೊರಟರು. ಪೋಲೀಸ್ ಠಾಣೆಯತ್ತ ನಡೆದರು.

ಕೊಲೆ ರಹಸ್ಯ ಬೇಧಿಸುವ ವರೆಗೆ ಪತ್ತೇದಾರರಿಗೆ ವಿರಾಮ ಬೇಡ! ಊಟ-ತಿಂಡಿಯ ಪರಿವೆಯಿಲ್ಲ! ನಿದ್ರೆಯೂ ಬಾರದು!

ಪ್ರವೀಣೆ !

ಉರ್ವದ ಊರ್ವಶಿ !!

ಮಂಗಳೂರಿನ ಅಪ್ಸರೆ !!!

ಸರ್ವಾಂಗ ಸುಂದರಿಯನ್ನು ಕಂಡರಿಯದ ಕಣ್ಣುಗಳಿಲ್ಲ !

ದಿನನಿತ್ಯ ನಾಲ್ಕುವರೆ ಗಂಟೆಗೆ ಸರಿಯಾಗಿ, ಬಿಸಿಲಿನ ತಾಪವಿರಲಿ, ಮಳೆಯ ಹೊಡೆತವಿರಲಿ, ತಪ್ಪದೆ ಉರ್ವದಿಂದ ಉದ್ಯಾವನದ ಹಾದಿ ಹಿಡಿಯುವವಳನ್ನು ದಿಟ್ಟಿಸದ ಕಣ್ಣುಗಳಾವುವು ?

ವಸ್ತ್ರದಂಗಡಿಯ ಎದುರಲ್ಲಿ, ನವನವೀನ ವಸ್ತ್ರಾಲಂಕಾರದಿಂದ ಶೃಂಗರಿಸಿ ನಿಲ್ಲಿಸಿರುವ ಬೊಂಬೆಯಂತೆ ಆಕೆಯ ನಿಲುವು !

ದುಂಡು ದುಂಡಾದ ದುಂಡು ಮಲ್ಲಿಗೆಯಂತಹ ಬಿಳಿಯ ಹೊಳಪು ಮುಖ, ಚಿಗುರಿಯ ಚಿಕ್ಕ ಕಣ್ಣು, ತುಂಬಿದ ಮೈಕಟ್ಟು, ಅದಕ್ಕೆ ತಕ್ಕಂತೆ ಹಿತಮಿತವಾಗಿ ಅಚ್ಚುಕಟ್ಟಿದ ಶೃಂಗಾರ !

ನೈಲಾನ್ ಸೀರೆ, ಅದರೊಳಗೆ ಮರೆಯಾದ ಲಂಗದ ಮೇಲೆ ಬಣ್ಣ ಬಣ್ಣದ ನೂಲಿನಿಂದ ಹೆಣೆದ ಹೂಗಳು, ಸೀರೆಯ ಬಣ್ಣಕ್ಕೆ ಹೋಲುವ ರವಕೆ ತೊಟ್ಟು, ಸೌಂದರ್ಯಕ್ಕೆ ಮೆರುಗನ್ನೀಯುವ ಉಪಾಸಕಗಳನ್ನೆಲ್ಲಾ ಉಪಯೋಗಿಸಿಕೊಂಡು, ಕೊರಳಿಗೊಂದು ನೆಕ್‌ಲೇಸ್, ಎಡ ಕೈಗೆ ವಾಚ್, ಬಲಗೈಯಲ್ಲಿ ಒಂದು ಡಜನ್ ಬಳೆ ತೊಟ್ಟು, ಆಗೊಮ್ಮೆ, ಈಗೊಮ್ಮೆ ಬಾಗುತ್ತ, ಬಳಕುತ್ತ, ಹೆಜ್ಜೆಯ ಮೇಲೆ ಹೆಜ್ಜೆಯನಿಕ್ಕುತ, ಬರುವ ಭ್ರಮರವನ್ನು ಕಂಡ ಕಣ್ಣುಗಳು ಹೂವಾಗಿ ಅರಳಲು ಪ್ರಯತ್ನಿಸದಿರಬಹುದೇ? ಆಕೆಗಾಗಿ, ಆಕೆಯ ಒಲುಮೆಗಾಗಿ, ಆಕೆಯ ಹಿಂದು-ಮುಂದು ತಮ್ಮ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತ ಅದೆಷ್ಟೋ ಯೌವನದ ವೀರರು ತಿರುಗುತಿದ್ದರು.

ಆಕೆಯನ್ನು ಕಂಡ ವೃದ್ಧರೂ ಯೌವನದ ನವಚೇತನ ತುಂಬಿದವರಂತಾಗಿ ಉಲ್ಲಾಸಿತರಾಗುತ್ತಿದ್ದರು.

ಆಕೆ ಮನ್ಮಥನರಗಿಣಿಯಾಗಿ ಮಾರ್ಗಕ್ಕೆ ಕಾಲಿರಿಸಿದಳೆಂದರೆ, ನಡೆಯುತ್ತಿರುವವರ ನಡಿಗೆಯ ವೇಗ ಕಡಿಮೆಯಾಗುತ್ತಿತ್ತು! ವೇಗವಾಗಿ

ಸಂಚರಿಸುತ್ತಿದ್ದ ಕಾರು, ಮೋಟಾರು ಲೋರಿ, ಬಸ್ಸುಗಳು ತಮ್ಮಷ್ಟಕ್ಕೆ 'ಬ್ರೇಕ್' ಹಾಕಿಕೊಳ್ಳುತ್ತಿದ್ದುವು! ಅದೆಷ್ಟೋ ಸೈಕಲ್ ಸವಾರರು ಚರಂಡಿಯ ಆಳವೆಷ್ಟೆಂದು ತಮ್ಮ ಇಚ್ಛಾನುಸಾರವಾಗಿ ನೋಡುತ್ತಿದ್ದರು.

ಇಷ್ಟರಿಂದ ತೃಪ್ತಿಯಾಗದೆ, ಆಕೆಯ ಎದುರು ಮುಗುಳು ನಗುವನ್ನು ಹರಿಯಬಿಟ್ಟವರೆಷ್ಟು ?

ಹಿಂದಿನಿಂದ ಗೇಲಿ ಮಾಡಿ ಸೇಡು ತೀರಿಸಿ ಕೊಂಡವರೆಷ್ಟು ?

ಆದರೆ, ಆಕೆ ಯಾರ ಗೇಲಿಗೂ ಮಣಿಯುವವಳಲ್ಲ! ಮಾತಿನಿಂದ ಮಾರ್ನುಡಿಯಲ್ಲೂ ಮುಂದಾಗುವವಳಲ್ಲ !

ಆಕೆಯನ್ನು ಅಡ್ಡ ಹೆಸರಿನಿಂದ ಕೂಗಿಕೊಂಡವರೆಷ್ಟೋ! ಮಿಲಿಟರಿಯ ಹುಡುಗಿ ಎಂದು ಕರೆದವರೆಷ್ಟೋ! ಬುಲ್-ಬುಲ್, ದಿಲ್-ಕಾ-ರಾಣಿ, ಮನ್-ಕೀ-ಪ್ಯಾರಿ, ಅಪ್ಸರೆ, ಅಪರಂಜಿ, ಬೆಳ್ಳಕ್ಕಿ, ಕೋಮಲೆ, ಮೈನ-ಮೈನ-ಇಕೆಯ ಸುತ್ತಲೂ ಹಾರಿ ಬರುವ, ಮನಮೋಹಕ ಮಾರಾಕಾಸ್ತ್ರಗಳು !

ಒಮ್ಮೊಮ್ಮೆ ಆಕೆಯ ಹೆಸರಿಡಿದು ಕೂಗಿಕೊಂಡು ಗೇಲಿ ಮಾಡಿದಾಗ ಮಾತ್ರ ಆಕೆ ಹಿಂತಿರುಗಿ ನೋಡುವಂತಹ ಪರಿಪಾಠವನ್ನಿರಿಸಿಕೊಂಡಿದ್ದಳು.

ಆಗ ಮಾತ್ರ ಕಂಡು ಬರುತ್ತಿತ್ತು — ನಾರಿಯ ನಿಜರೂಪ — ಮಾರಿ!

ನಗುನಗುತ್ತ ಗೇಲಿಮಾಡಿ ಪ್ರೇಮದ ಸೇಡು ತೀರಿಸಿಕೊಳ್ಳುತ್ತಿದ್ದ ಮುಖ......ಮುದುಡಿಕೊಳ್ಳುತ್ತಿತ್ತು.

ಕೆಲವರಂತೂ ಕಲ್ಲಿನ ಗೊಂಬೆಯಂತೆ ತಟಸ್ಥರಾಗಿ, ಪಿಳಿಪಿಳಿ ಕಣ್ಣು ಮಿಟುಕಿಸಿ, ಮುಂದೇನು ಅನರ್ಥ ಸಂಭವಿಸಲಿದೆಯೋ ಎಂದು ಬೆದರಿ ಬೆಂಕಿನಂತಾಗುತ್ತಿದ್ದರು.

ಹೀಗಾಗಿ, ಹೆದರಿದವರ ಜೀವನದಲ್ಲಿ ಉಸಿರಿನ ಆಟ ಸುರುವಾಗಬೇಕಾದರೆ, ಅವಳು ತನ್ನ ಸೆರಗನ್ನು ಸರಿಪಡಿಸಿಕೊಂಡು, ಗಂಟು ಕಟ್ಟಿದ ಹುಬ್ಬನ್ನು ಸಡಿಲಿಸಿ, ಮುಖ ತಿರುಹಿ, ಮುನ್ನಡಿ ಇಟ್ಟಾಗಲೇ !

ಅಲ್ಲಿಯ ವರೆಗೆ ಮಾನವರೆಲ್ಲರೂ, ಜೀವಂತ ಕಲ್ಲಿನ ಗೊಂಬೆಗಳು !

ಆದರೆ......ಪ್ರಮಿಳೆ !

ಯಾರನ್ನೂ ಕೊಂಕು ನುಡಿಯಿಂದ ಮೂದಲಿಸಿದವಳಲ್ಲ !

ಯಾರೊಡನೆಯೂ ಕಾಲಕೆರೆದು ಜಗಳಾಡಲು ಮುಂದಾದವಳಲ್ಲ!!

ಮೂದಲಿಕೆಯ ಮಾರ್ನುಡಿ ಕೊಟ್ಟವಳಲ್ಲ !!!

ಹೀನೈಸಲು ಕೇಕರಿಸಿ ಉಗುಳಿದವಳಲ್ಲ !!!!

ಬೊಗಳುವ ನಾಯಿ ಬೊಗಳುತ್ತಿರಲಿ–ತಮ್ಮ ರಥ ಮುಂದೆ ಸಾಗುತ್ತಿರಲಿ ಎಂಬ ಪಂಥಕ್ಕೆ ಸೇರಿದವಳವಳು.

ಯಾರ ಎಡೆತಡೆಗೂ ಒಳಗಾಗದೆ, ಆಕೆ ತನ್ನ ಕಾರುಣ್ಯದ ಕುಳುಕಿನಿಂದ ಹೆಜ್ಜೆಯನ್ನಿಕ್ಕುತ್ತ, ಆಗೊಮ್ಮೆ, ಈಗೊಮ್ಮೆ ತನ್ನ ವರ್ಣರಂಜಿತ ಕರವಸ್ತ್ರವನ್ನು ಮುಖದ ಮೇಲೆಲ್ಲಾ ಹರಿಸುತ್ತ, ನೇರವಾಗಿ ನಡೆದು ಉದ್ಯಾನವನದಲ್ಲಿ ವಿರಮಿಸಲು ಹಾಸಿದ್ದ ಕಲ್ಲು ಮಂಚದತ್ತ ನಡೆದು ಬರುತ್ತಿದ್ದಳು. ಅಲ್ಲಿ ಆಕೆಯ ಬರವನ್ನೇ ನಿರೀಕ್ಷಿಸುತ್ತ ಆಸೀನನಾಗಿರುತ್ತಿದ್ದ ತರುಣ ಮುಗುಳು ನಗೆ ಬೀರಿ, ಮಂದಹಾಸದಿಂದ ಆಕೆಯನ್ನು ಸ್ವಾಗತಿಸಿ ಸಂಭ್ರಮಿಸುತ್ತಿದ್ದನು:

ಅವರಿಬ್ಬರೂ ಕೈಗೆ ಕೈ ಸೋಂಕಿಸಿ ಕುಳಿತುಕೊಂಡು ಲಲ್ಲೆ ಹೊಡೆಯುತ್ತಿದ್ದರು.

ಅವರು ಯಾರ ಬೆದರಿಕೆಯೂ ಇಲ್ಲದೆ ಲಲ್ಲೆಯಲ್ಲಿ ನಿರತರಾಗಿರುವುದನ್ನು ಕಂಡ ಹಲವಾರು ಪ್ರಣಯ ಭಿಕ್ಷುಕರು, ತಮ್ಮ ಜೋಳಿಗೆಗೂ ಇಂತಹ ಒಂದು ಭಿಕ್ಷೆ ಬೀಳದೆ ಹೋಯಿತಲ್ಲ ಎಂದು ಮತ್ಸರಿಸುತ್ತಿದ್ದರು

ಪ್ರಮೀಳೆಯನ್ನು ಆಧರಿಸುವ ಆ ಪುರುಷನಾರು ?

ಪ್ರಮೀಳೆಯ ಭಾವೀ ಪತಿಯೋ ?

೨೪

ಮಂಗಳೂರಿನ ಇತಿಹಾಸದಲ್ಲೇ ಪ್ರಪ್ರಥಮವೆಣಿಸುವ ವಸ್ತು ಪ್ರದರ್ಶನವೊಂದು ಸೆಂಟ್ರಲ್ ಮೈದಾನಿನಲ್ಲಿ ಹಲವಾರು ಕಲಾಪ್ರೇಮಿಗಳು, ಹಾಗೂ ಆಢ್ಯ ಮಹನೀಯರ ಬೆಂಬಲದಿಂದ ಏರ್ಪಡಿಸಿದ್ದು, ನಗರದ ಹಲವರನ್ನು ಆಕರ್ಷಿಸಿತ್ತು.

ವಿಸ್ತಾರವಾದ ಮೈದಾನಿನ ಒಂದು ಪಾರ್ಶ್ವದ ಒಂದು ಮೈಲು ವಿಸ್ತೀರ್ಣದಲ್ಲಿ ಕಟ್ಟಲ್ಪಟ್ಟ ಆವರಣದೊಳಗೆ, ಸಾಲುಸಾಲಾಗಿ ನಿಂತು ವಿವಿಧಾಕರ್ಷಣೆಯಿಂದ ರಂಜಿಸುವ ಅಂಗಡಿಗಳು, ನವನವೀನ ಮಕ್ಕಳ ಆಟದ ಸಾಮಾನುಗಳು, ಭಾರತದಲ್ಲಿ ಅಭಿವೃದ್ಧಿ ಹೊಂದುತ್ತಿರುವ ವಿವಿಧ ಕೈಗಾರಿಕಾ ಕ್ಷೇತ್ರವನ್ನು ಪ್ರತಿಬಿಂಬಿಸುವಂತಹ ಮಾದರಿಗಳು, ಚಿನ್ನದ ಅಂಗಡಿ, ಫೊಟೋ ಸ್ಟುಡಿಯೋ, ಬಸ್ ಕಂಪೆನಿ, ತಂಪಾದ ಪಾನೀಯಗಳೂ, ಬೇಂಕ್ ಮೊದಲಾದ ಹಲವಾರು ವೈವಿಧ್ಯತೆಗಳಿಂದ ಕೂಡಿತ್ತು. ಅದರಲ್ಲಿ ಎಲ್ಲದಕ್ಕಿಂತಲೂ ಮಿಗಿಲಾದ ಮುಖ್ಯ ಆಕರ್ಷಣೆಯೊಂದೆಂದರೆ ಮಹಿಳೆಯರಿಂದಲೇ ನಡೆಸಲ್ಪಡುತ್ತಿದ್ದ, ಅವರ ಕುಶಲ ಕಲೆಯ ಸ್ಟಾಲ್......ಅಲ್ಲಿ ನೆರೆದು ನಿಂತು ನೋಡುವಷ್ಟು ತರುಣರು ಮತ್ತೆಲ್ಲಿಯೂ ಬಂದು ನಿಲ್ಲುತ್ತಿರಲಿಲ್ಲ.

ಆ ಸ್ಟಾಲ್ ಸಂದರ್ಶನಕ್ಕಾಗಿಯೇ ಹೆಚ್ಚಿನ ತರುಣರು ಟಿಕೇಟು ಪಡೆದು ಒಳನಡೆಯುತ್ತಿದ್ದರೆಂದರೂ ತಪ್ಪಾಗಲಾರದು.

ಪ್ರತಿದಿನ ಸಾಯಂಕಾಲ ಏಳು ಗಂಟೆಯಿಂದ ಒಂಭತ್ತರ ವರೆಗೆ ನಡೆಯುತ್ತಿದ್ದ ಸಾಂಸ್ಕೃತಿಕ ಚಟುವಟಿಕೆಗಳೂ ಹಲವರಿಗೆ ಮನರಂಜನೆಯನ್ನೀಯುತ್ತಿತ್ತು. ಒಂದು ತಿಂಗಳ ವರೆಗೆ ನಡೆದ ಪ್ರದರ್ಶನದಲ್ಲಿ ಮಂಗಳೂರಿನ ಎಲ್ಲಾ ಪ್ರಮುಖ ಕಲಾವಿದರು ಭಾಗವಹಿಸಿದ್ದರು. ಅಂದ ಹಾಗೆ, ಕಲೆಯ ಬೆಲೆಯನ್ನರಿತ ವ್ಯವಸ್ಥಾಪಕರು ಕಲಾಪ್ರೇಮಿ ಪ್ರೇಕ್ಷಕರಿಗೆ ಸದವಕಾಶವನ್ನೇ ಒದಗಿಸಿಕೊಟ್ಟಿದ್ದರು.

ಅಂದು ಮಂಗಳೂರಿನ ಕಲಾವೃಂದದವರ 'ಮಿಸ್ ಮೀನಾಕ್ಷಿ ಎಂ. ಎ.' ಎಂಬ ಸಾಮಾಜಿಕ ನಾಟಕವನ್ನು ಏರ್ಪಡಿಸಲಾಗಿತ್ತು. ಮಂಗಳೂರಿನಲ್ಲಿ ಹೆಸರಾಂತ ಕಲಾ ಸಂಸ್ಥೆ, ನವನವೀನ ಕ್ರಾಂತಿಕಾರಕ,

ಸಮಾಜ ಸುಧಾರಣಾ ನಾಟಕವನ್ನು ಅಭಿನಯಿಸುವ ನೂತನ ನಾಟಕ, ಹೆಸರಾಂತ ಅಭಿನಯ ಕೇಸರಿಗಳು, ನಾಟಕದಲ್ಲಿ ಭಾಗವಹಿಸಲಿದ್ದುದರಿಂದಲೂ ಹಲವು ಅಢ್ಯ ಮಹನೀಯರೂ, ಹಿರಿಯರೂ, ಕಿರಿಯರೂ ಕಿಕ್ಕಿರಿದು ನೆರೆದಿದ್ದರು.

ನಾಟಕದ ರಚನೆ, ಕಲಾವೃಂದದ ಉತ್ತಮ ಬರಹಗಾರನಾದ ದಿನಕರನದು. ಅವನು ಬರೆದ 'ಜಂಬದ ಕೋಳಿ' 'ಹುಡುಗಿಯರ ಹುಚ್ಚು' 'ಕಲ್ಯಾಣಿ ಯಾರ ಹೆಂಡ್ತಿ' 'ಮದುವೆ ಮುಷ್ಕರ' 'ಕೋಟಿಸ್ ಬಜಾರ್' 'ಕುಡ್ಕ ರಂಗ' 'ವಿಚಿತ್ರ ವಿಧವೆ'—ಜನಮನ ಸೆಳೆದಿತ್ತು.

ಅಂದು, ತನ್ನ ಉತ್ತಮ ಗೆಳೆಯ ಬಳಗದವರೊಂದಿಗೆ ಖಳನಾಯಕನ ಪಾತ್ರ ವಹಿಸಿ, ಹೃದಯಸ್ಪರ್ಶಿ ಅಭಿನಯವನ್ನು ನೀಡಿ ಪ್ರೇಕ್ಷಕರ ಮನಸೆಳೆದು ಮೆಚ್ಚಿಗೆ ಪಡೆದು ಬಹು ಜನರ ಅಪೇಕ್ಷೆಯ ಮೇರೆಗೆ ಅದೇ ನಾಟಕವನ್ನು ಒತ್ತಾಯಪೂರ್ವಕವಾಗಿ ಮೂರು ಬಾರಿ ಪ್ರದರ್ಶಿಸುವ ವ್ಯವಸ್ಥೆ ಮಾಡಲಾಯಿತು.

ನಾಟಕವನ್ನು ದ್ವಿತೀಯ ಬಾರಿ ಪ್ರಯೋಗಿಸಿದಾಗ ದಿನಕರನಿಗೆ ಪ್ರೇಕ್ಷಕ ವೃಂದದವರಿಂದ ಚಿನ್ನದ ಪದಕವೊಂದು ಪಾರಿತೋಷಕವಾಗಿ ದೊರೆಯಿತು. ಅವನು ಹಾಡಿದ ಸಿನೇಮಾ ದಾಟಿಯ ಹಾಡನ್ನು ಪುನ: ರಪಿ ಹಾಡಿಸಲಿಕ್ಕಾಗಿ ಐದು ರೂಪಾಯಿಯ ನೋಟೊಂದು ರಂಗಭೂಮಿಯ ಮೇಲೆ ತೂರಿ ಬಂತು.

ಕಲಾ ಪ್ರೇಮಿಗಳಿಗೆ ರಸದೌತಣವೊದಗಿತ್ತು !

ದಿನಕರನಲ್ಲಿ ದೈವದತ್ತವಾಗಿ ಬಂದ ಅಭಿನಯ ಕಲೆಯಿತ್ತು! ಸುಮಧುರ ಕಂಠವಿತ್ತು! ದೃಢಕಾಯ ಶರೀರವಿತ್ತು! ಉತ್ತಮ ವಿದ್ಯೆ ಪಡೆದ ಪಾಂಡಿತ್ಯವೂ ಅವನಲ್ಲಿ ತುಂಬಿತ್ತು! ನವ ಯೌವನ ನರನಾಡಿಯಲ್ಲಿ ನವಿರಾಗಿ ಹರಿದಿತ್ತು !

ಪ್ರತಿ ಬಾರಿಯೂ ತಪ್ಪದೆ ಮೈದಾನಿನಲ್ಲಿ ನಾಟಕ ನೋಡಿದವಳು ಪ್ರಮಿಳೆ !

ದಿನಕರನ ಅಭಿನಯ ಅವಳಿಗೆ ಬಹಳ ಮೆಚ್ಚುಗೆಯಾಗಿತ್ತು!

ಸೂರ್ಯೋದಯವನ್ನೇ ಹಂಬಲಿಸಿ ಕಾದು ನಿಲ್ಲುವ ಕಮಲದಂತೆ, ದಿನಕರ ರಂಗಭೂಮಿಯ ಬೆಳಕಿನಲ್ಲಿ ಬರುವುದನ್ನೇ ಹಾರೈಸುತ್ತ ನಿಂತಿರುತ್ತಿದ್ದಳು.

ದಿನಕರನ ದರ್ಶನದಿಂದ ಕಮಲ ಮರಳುತಿತ್ತು! ದಿನಕರನ ನೋಟದಿಂದ ಪ್ರಮೀಳೆಯ ಮುಖ ಕಮಲವರಳುತಿತ್ತು!

ನಾಟಕದ ಕತೆಯಂತೂ ಅವಳಿಗೆ ತುಂಬಾ ಹಿಡಿಸಿತ್ತು.

'ಎಂ. ಎ. ಕಲಿತು ಅತುಲೈಶ್ವರ್ಯದಲ್ಲಿ ಮೆರೆಯುವ ನವ ಯೌವ್ವನೆಯನ್ನು ವಿವಾಹವಾಗ ಬಯಸಿ, ಎಸ್. ಎಸ್. ಎಲ್. ಸಿ.ಯನ್ನು ಪ್ರಯಾಸದಿಂದ ಎರಡನೆಯ ಬಾರಿ ದಾಟಿದ ಯುವಕನೋರ್ವ ಪ್ರಣಯಾಭಿಲಾಷಿಯಾಗಿ ಬಂದಾಗ, ಹಣದ ಮದದಿಂದ ಮೆರೆಯುವ 'ಬಿಳಿ ಆನೆ' ಎಂದೆನಿಸಿಕೊಂಡ ಯುವತಿ, ಪರಿಹಾಸ್ಯಕ್ಕಾಗಿಯೇ ತನ್ನ ಒನಪು ವೈಯ್ಯಾರಗಳಿಂದ ತರುಣನನ್ನು ಮರಳು ಮಾಡಿ, ತನ್ನಂತಹ ಕಲಿತ ಕನ್ಯೆಯನ್ನು ಬಯಸಿದ 'ಹುಚ್ಚ' ಎಂದು ಮೂದಲಿಸುತ್ತಾಳೆ. ತನ್ನಷ್ಟೇ ಪದವೀಧರನಾಗಿ ಧನದ ಅಂತಸ್ತಿನಲ್ಲಿಯೂ ಕಡಿಮೆ ಬಾರದ ಯುವಕನಲ್ಲಿ ಆಕರ್ಷಿತಳಾದ ಆಕೆ ಅವನಲ್ಲಿ ಬಾಂಧವ್ಯ ಬೆಳೆಸಲು ಹವಣಿಸುತ್ತಾಳೆ. ತನ್ನನ್ನು ಬಯಸಿ ಬಂದಂತಹ ಅಲ್ಪ ವಿದ್ಯಾವಂತನನ್ನು ತನ್ನ ಮನೆಯ ಅಡಿಗೆಯವನನ್ನಾಗಿ ಮಾಡಿಕೊಳ್ಳಬೇಕೆಂದು ಅಹಂಕಾರದಿಂದ ಝೇಂಕರಿಸುತ್ತಾಳೆ ಆದರೆ......ಸರ್ವ ದುರ್ಗುಣ ಸಂಪನ್ನನಾದ ಆ ಶ್ರೀಮಂತ ಕುಡುಕ, ವ್ಯಭಿಚಾರಿ ಎಂದು ಚಾಲಿ ಅರಿತುಕೊಂಡ ನಂತರ ಈ ಹಣದ ಮದ ಮಾನವನನ್ನು ಮಂಗನನ್ನಾಗಿ ಮಾಡುತ್ತದೆ ಎಂದೆಣಿಸುತ್ತಾಳೆ. ಹಣ ಯಾರ ಬಳಿಯಲ್ಲಿಯೂ ಸ್ಥಿರವಾಗಿ ನಿಂತಿರುವುದಿಲ್ಲವೆಂದೆಣಿಸಿ ಬರೀ ಹಣ, ಭಾರಿ ವಿದ್ಯೆಗಿಂತಲೂ ಬುದ್ಧಿವಂತಿಕೆ, ನಯ ವಿನಯ ಶೀಲ ಸಂಪನ್ನವೇ ಬಾಳಪಥಕ್ಕೆ ಜಯದ ಬೆಳಕೆಂದು ತನ್ನಿಂದ ತಾನೇ ವಿವೇಕ ಹೊಂದಿದ ಯುವತಿ ಕಡಿಮೆ ಕಲಿತವನಿಗೆ, ತನ್ನ ಹಣವನ್ನೂ, ತನ್ನನ್ನೂ ಧಾರೆ ಎರೆಯುತ್ತಾಳೆ.

ಪ್ರತಿ ದೃಶ್ಯದ ಉದ್ದಕ್ಕೂ ನಕ್ಕು ನಗಿಸುವ ಸಂಭಾಷಣೆಯನ್ನು ಹೆಣೆದ ನಾಟಕದಲ್ಲಿ ಎಂ. ಎ. ಕಲಿತ ದುರಾಚಾರಿ ಯುವಕನಾಗಿ ಅಭಿನಯಿಸಿದ ದಿನಕರ ರಂಗಭೂಮಿಯಲ್ಲಿ ತನ್ನಷ್ಟೇ ಕಲಿತು, ನವಕಾಲಕ್ಕೆ ತಕ್ಕಂತೆ, ತಾನೆ ಗಂಡನನ್ನು ಆರಿಸಲು ಮುಂದಾದ ಯುವತಿಯೊಡನೆ ಸರಸರ ಸವಿ ಹೀರುವಾಗ, ಪ್ರೇಕ್ಷಕರ ನಡುವಿನಲ್ಲಿ ನಿಂತಿದ್ದ ಪ್ರಮೀಳೆಗೆ ತನ್ನ ಹೃದಯವೇ ಅವನೊಡನೆ ಮಾತಾಡುತ್ತಿರುವಂತೆ ಭಾಸವಾಗುತಿತ್ತು!

ಪ್ರೇಕ್ಷಕರತ್ತ ಕಣ್ಣು ಹಾಯಿಸಿ ನಗುಬೀರಿದಾಗ, ಅವನು ತನ್ನನ್ನೇ ಗುರುತಿಸಿ ನಗುತ್ತಿರುವಂತೆ ಭಾಸವಾಗಿ ಆಕೆಯೂ ಹಲವು ಬಾರಿ ಮುಗುಳು ನಕ್ಕು ತನಗರಿವಿಲ್ಲದೆ ಮಾರುತ್ತರವನ್ನಿತ್ತಿದ್ದಳು.

ಅವನು ನಾಯಕಿಯನ್ನು 'ಮೀನಾಕ್ಷಿ' ಎಂದು ಕರೆದಾಗಲೆಲ್ಲ, ತನ್ನ ಹೆಸರಿಡಿದು ಮೃದುವಾಗಿ 'ಪ್ರಮೀಳ' ಎಂದು ಕರೆಯುತ್ತಿರುವಂತೆ ಪುಲಕಿತಳಾಗುತ್ತಿದ್ದಳು.

ಅವಳು ಅವನ ಅಪ್ರತಿಮ ಕಲಾಪ್ರತಿಭೆಗಾಗಿ ಮಾರುಹೋಗಿದ್ದಳು ಅಂತಹ ಪ್ರತಿಭಾವಂತನ ಕೈ ಹಿಡಿದರೆ ಬಾಳು ಹಸನಾದೀತು. ಅವನು ದೊರೆತರೆ ಮಾತ್ರ ತನ್ನ ಕೈಕೊಡಬೇಕೆಂದೂ ಇಲ್ಲದಿದ್ದರೆ ಆಜನ್ಮ ಬ್ರಹ್ಮಚಾರಿಣಿಯಾಗಿ ಕೈ ಉಳಿಸಿಕೊಳ್ಳುವೆನೆಂದು ಮೈದಾನಿನಲ್ಲಿಯ ಸರಸ್ವತಿ ಕಲಾ ಮಂದಿರವಾದ ರಂಗಭೂಮಿಯ ಇದಿರಲ್ಲಿ ಪ್ರತಿಜ್ಞೆ ಮಾಡಿದ್ದಳು.

ಹೆಣ್ಣು, ಮನಸ್ಸಿನಲ್ಲಿ ಒಂದು ಕಾರ್ಯವನ್ನು ನಿಶ್ಚಯಿಸಿಕೊಂಡರೆ ಅದನ್ನು ಸಾಧಿಸಲು ಹಲವು ಮಾರ್ಗಗಳನ್ನು ಅರಿತಿರುವಳು. ಆಕೆ ನಿಜವಾಗಿಯೂ ಸೃಷ್ಟಿಯ ಅಧಿದೇವತೆಯಾಗಬಲ್ಲಳು — ಅಂತ್ಯದ ರುದ್ರದೇವತೆಯೂ ಆಗಬಲ್ಲಳು. ಆಕೆಯಿಂದಲೇ ಸೃಷ್ಟಿ, ಸ್ಥಿತಿ, ಲಯಗಳಲ್ಲವೇ ?

ಪ್ರಮೀಳ, ತಾನು ಮೆಚ್ಚಿದ ಗಂಡಸನ್ನು ತನ್ನ ಮೋಹದ ಬಲೆಯಲ್ಲಿ ತುರುಕಿಸಿಕೊಳ್ಳಲು ಅಂದಿನಿಂದ ಪ್ರಯತ್ನಿಸತೊಡಗಿದಳು. ಮೆಚ್ಚಿದ ಗಂಡಿನ ಮನವೊಲಿಸಲು ಯೌವ್ವನಕ್ಕೆ ಮುಕುಟವಿಡುವ ಶೃಂಗಾರ ಪೂಜೆಯೇ ನಾಂದಿಯಾಯಿತು !

ತಾರೀಕು 26ನೇ ಶನಿವಾರ! ಅಂದು ಕೋಕಿಲಕಂಠ ಸಾವಿತ್ರಮ್ಮನ ಸಂಗೀತ ಕಚೇರಿಯು ನಡೆಯುತ್ತಿತ್ತು! ಸಂಗೀತವೆಂದರೆ ಮೂಗು ಮುರಿಯುವವರೇ ಹೆಚ್ಚು! ಹೆಚ್ಚಾಗಿ ಯಾರು ತಾಳ್ಮೆ ವಹಿಸಿ ಸಂಗೀತ ಕೇಳುವಂತಹ ಪರಿಪಾಠವನ್ನಿಟ್ಟುಕೊಂಡಂತೆ ಕಂಡು ಬರಲಿಲ್ಲ. ದೂರ ದೂರ ಒಬ್ಬೊಬ್ಬರು ನಿಂತು ಕಿವಿ ನಿಗುರಿಸಿ ಕೇಳುತ್ತಿದ್ದರು.

ಹಾಡುವವರ ಕಂಠ ಸುಮಧುರವಾಗಿತ್ತು — ಆದರೆ ಕೇಳುವವರು ಮಾತ್ರ ಇದ್ದಿಗಲಿಲ್ಲ.

ಪ್ರತಿನಿತ್ಯ ಬರುತ್ತಿದ್ದ ಪ್ರಮೀಳೆ, ಅಂದು ಆದಾರನ್ನೋ ಅರಸುತ್ತಿದ್ದಳು. ನಿಂತಲ್ಲಿಂದಲೇ ಕಣ್ಣುಗಳನ್ನು ಹರಿಯಬಿಟ್ಟು ತನ್ನ ಮನಸ್ಸಿನ

ಮನ್ಮಥನನ್ನು ಹುಡುಕುತ್ತಿದ್ದಳು. ತನ್ನ ಕಣ್ಣೆಂಬ ಬಿಲ್ಲಿಗೆ ನೋಟದ ಬಾಣ ತೊಟ್ಟು ಬೇಟೆಯಾಡಲು ಮುಂದಾಗಿದ್ದಳು.

ದಿನಕರನೂ ಅಂದು ಬಂದಿದ್ದ. ಅಡ್ಡ ಮುಂಡು—ಇಸ್ತ್ರಿ ಕಾಣದ ಶರ್ಟು...ಆಯಿತು ಅವನ ವೇಷ ಭೂಷಣ! ಕಾಲಲ್ಲಿ ಮೆಟ್ಟಿಲ್ಲ — ಕೈಯಲ್ಲಿ ವಾಚಿಲ್ಲ — ಬೆರಳಲ್ಲಿ ಉಂಗುರವಿಲ್ಲ! ಎಂತಹ ಕಲಾವಿದ! ಎಂತಹ ಉಡುಪು! ಮರಿ ಅರಸು ಕುಮಾರನಂತೆ ಬರಬಹುದು ಎಂದು ಭಾವಿಸಿದ ಪ್ರಮೀಳೆಗೆ ನಿರಾಸೆಯೇ ಆಯಿತು !

ನಟ ಸಾರ್ವಭೌಮನೆಂದೆನಿಸಿಕೊಂಡು ಕೀರ್ತಿ ಶಿಖರಕ್ಕೇರುತ್ತಿರುವವನು ತನ್ನ ಸ್ಥಾನ-ಮಾನಕ್ಕೆ ತಕ್ಕಂತೆ ವೇಷ ಭೂಷಣಗಳನ್ನು ತೊಟ್ಟು, ಹಿರಿಮೆಯನ್ನು ತೋರ್ಪಡಿಸುತ್ತಿರಬೇಕೆಂಬ ಮನೋಭಾವ ಆಕೆಯದು.

ಬಯಸಿದವನ ನಿಲವನ್ನು ಕಂಡು ಆತನ ಪಕ್ಕಕ್ಕೆ ಸರಿದು, ಕಣ್ಣು ತುಂಬಾ ನೋಡಿ, ಅಂಜುತಂಜುತ್ತಾ ನಗು ಬೀರಿದಳು. ಅವನು ಸುಂದರಿಯನ್ನು ಕಂಡ. ತನ್ನ ಹಿಂಬದಿಯಲ್ಲಿರುವ ಆಕೆಯ ಪರಿಚಿತರನ್ನು ನೋಡಿ ಈಕೆ ನಗುತ್ತಿರುವಳೇ ಎಂದು ಭ್ರಮಿಸಿ ಹಿಂತಿರುಗಿ ನೋಡಿದ. ಆದರೆ, ಅವನ ಬೆನ್ನ ಹಿಂದೆ ಯಾರೂ ನಡೆದು ಬರುತ್ತಿರಲಿಲ್ಲ.

ತಿರುಗಿ ನೋಡಿದಾಗ ಈಕೆ ನಗುತ್ತಿದ್ದಳು.

ಈಕೆ ಯಾರು ?

ಹಿಂದಿ ಸಿನೇಮಾದ ಕತೆಯಲ್ಲಿ ಬರುವಂತಹ ಪ್ರಣಯ ಸನ್ನಿವೇಶದಂತೆ ಈಕೆ ತನ್ನ ಅಭಿನಯವನ್ನು ಮೆಚ್ಚಿ, ಪ್ರಣಯ ದೇವತೆಯಾಗಿ ಅವತರಿಸಿ ಬಂದಿರಬಹುದೇ? ಪ್ರಣಯ ಭಿಕ್ಷೆಗಾಗಿ ನಗುವಿನ ಅಕ್ಷಯ ಪಾತ್ರೆ ತುಂಬಿಕೊಂಡು ಎದುರು ಬಂದಿರಬಹುದೇ ?

ಮನಸ್ಸು ಎಣಿಸುತ್ತಿರುವಂತೆ ಕಣ್ಣುಗಳು ಮಾತಾಡಿಕೊಂಡವು! ತುಟಿಗಳು ಮಾತ್ರ ಕದಲಲಿಲ್ಲ !

ಯೌವ್ವನದಿಂದ ದಷ್ಟಪುಷ್ಟವಾಗಿ ರಬ್ಬರಿನ ಚೆಂಡಿನಂತೆ ತುಂಬಿಕೊಂಡಿರುವ ಸುಂದರ ಮುಖದ ಹೆಣ್ಣನ್ನು ಕಂಡ ದಿನಕರ, ಆಕೆಯ ಸ್ನೇಹ ಬೆಳೆಸಿದರೆ ತಮ್ಮ ಕಲಾ ವೃಂದದಲ್ಲಿ ಅಭಿನಯಿಸಲು ಆಮಂತ್ರಿಸಬಹುದು! ತಾವಿಬ್ಬರೂ ನಾಯಕ—ನಾಯಕಿಯಾಗಿ ನೈಜಾಭಿನಯವನ್ನೀಯಬಹುದು ಎಂದು ಆಲೋಚನಾ ಸಾಗರದ ತೆರೆಗಡೆಯಲ್ಲಿ ತೇಲುತ್ತಿರುವಂತೆಯೇ ಆಕೆ ತನ್ನ ಹುಬ್ಬು ಕುಣಿಸಿ 'ಹತ್ತಿರ ಬಾ' ಎಂಬಂತೆ ಕೊರಳು ಕೊಂಕಿಸಿ, ಆಹ್ವಾನವನ್ನಿತ್ತಳು-ಆ ಉರ್ವದ ಅಪ್ಸರೆ !

ಪಕ್ಕಕ್ಕೆ ಸರಿದು ಬಂದ ದಿನಕರನೊಡನೆ:

‘ತಮ್ಮ ಅಭಿನಯ ತುಂಬಾ ಮೆಚ್ಚುವಂತಹದು!’

ಹಸ್ತಲಾಘವನ್ನೀಯಲು ಕೈ ಮುಂಚಾಚಿದಳು ಮುಂದುವರಿದ ಮುಗ್ಧೆ! ದಿನಕರ ಕೈ ಜೋಡಿಸಿ ನಮಸ್ಕರಿಸಿದ.

‘ತಮ್ಮ ಅಭಿಮಾನಕ್ಕೆ ಸಂತೋಷ! ತುಂಬಾ ಕೃತಜ್ಞತೆಗಳು.’ ನಿಡಿದಾದ ಉಸಿರು ಬಿಟ್ಟು ನುಡಿದ.

ಆತನ ಅಂಜುತನಕ್ಕಾಗಿ ಖೇದಗೊಂಡರೂ ತೋರ್ಪಡಿಸದೆ:

‘ಬರೀ ಮಾತಿನ ಕೃತಜ್ಞತೆಯೋ?’ ನಗುತ್ತಾ ಕೇಳಿದಳು.

‘ಮತ್ತೇನು ಮಾಡಬೇಕು’ ಅಪರಿಚಿತೆಯೊಡನೆ ಹೇಗೆ ಮಾತನಾಡಬೇಕೆಂದು ತಡವರಿಸುತ್ತಾ ನುಡಿದ ದಿನಕರ.

ಅದಕ್ಕೆ ಆಕೆಯ ಅರೆ ಮುಚ್ಚಿದ ಕಣ್ಣಿನ ಉತ್ತರ:

‘ಕಲಾವಿದರೇ ನೆನಸಿಕೊಳ್ಳಬಹುದು!’

ಮುದ್ದು ಮೋಹಿನಿಯೊಡನೆ ಮಾತು ಬೆಳೆಸಿ ಸವಿಹೀರ ತೊಡಗಿದ ದಿನಕರ ಕಲಾ ಮಂಟಪದ ಬಳಿಯಲ್ಲಿ ತಂದು ಶೇಖರಿಸಿದ್ದ ಮರಳು ರಾಶಿಯ ಕಡೆಗೆ ನಡೆದು ಬಂದು ತನ್ನ ನೂತನ ಗೆಳತಿಯನ್ನು ಕುಳಿತು ಕೊಳ್ಳುವಂತೆ ವಿನಂತಿಸಿದ. ಆಕೆ ಸೆರಗು ಸರಿಪಡಿಸಿ ಕುಳಿತುಕೊಳ್ಳಲು ತಾನೂ ಸ್ವಲ್ಪ ಅಂತರದಲ್ಲಿ ಕುಳಿತುಕೊಂಡ.

ಆಕೆಯ ಪುಟಗೊಂಡ ಸುಂದರ ಮುಖ, ಅಳುಕಿಲ್ಲದ ಆದರ್ಶ ನುಡಿ, ತುಂಬು ಹೃದಯದ ಅಭಿಮಾನ—ದಿನಕರನನ್ನು ಸ್ವರ್ಗದ ಸುಪ್ಪತ್ತಿಗೆಗೆ ಏರಿಸಿತು.

ಗಂಭೀರ ನುಡಿಯ ಉತ್ತಮ ಕಲಾವಿದ, ಮೆಚ್ಚಿ ಕರೆದವಳೊಡನೆ ಮುಚ್ಚು ಮರೆಯಿಲ್ಲದೆ ಬೆಳಸಿದ ಮಾತು—ಪ್ರಮಿಳೆಯನ್ನು ಅಂದಳನ್ನಾಗಿ ಮಾಡಿಸಿತು.

ಬೋಳಾರದಲ್ಲಿ ಮನೆಮಾಡಿಕೊಂಡಿದ್ದ ದಿನಕರನಿಗೆ ಉರ್ವದ ಅಪ್ಸರೆ ಪ್ರಮಿಳೆಯ ಪರಿಚಯವಾಯಿತು. ಪರಿಚಯ ಬೆಳೆದು ಸ್ನೇಹ ಉಂಟಾಯಿತು. ಬದುಕಿನ ಕಲ್ಪವೃಕ್ಷ ಸ್ನೇಹದ ದಿನಚರಿಯಿಂದ ಬೆಳೆದು ನಿಂತಿತು. ಇನ್ನು ಅರಳಬೇಕಾಗಿರುವುದು ಪ್ರಣಯದ ಬಾಡದ ಹೂ!

ಪ್ರವಿಕಾಳೆ ಅರಳುವ ಹೂವಿನ ನಿರೀಕ್ಷೆಯಲ್ಲಿದ್ದಳು.

ಬೋಳಾರದ ಗಂಡು! ಉರ್ವದ ಹೆಣ್ಣು!!

ಒಂದುಗೂಡಿದರು ವಸ್ತು ಪ್ರದರ್ಶನದ ಮೈದಾನಿನಲ್ಲಿ!

ಇಬ್ಬರ ಮನೆಗಳ ಅಂತರ ಆರು ಮೈಲು.

ಉತ್ತರ ಧ್ರುವ—ದಕ್ಷಿಣ ಧ್ರುವದೊಡನೆ ಹೊಂದಿಕೊಳ್ಳಲು ಹತ್ತಿರ—ಹತ್ತಿರ ಬರಲು ಹವಣಿಸುತ್ತಿತ್ತು.

ಅಭಿನಯ ಸಾರ್ವಭೌಮನನ್ನು ಸಂಪೂರ್ಣ ಶರಣಾದಳು ಸೌಂದರ್ಯ ರಾಣಿ!

ಅವರಿಬ್ಬರೂ ನಗುನಗುತ್ತಾ ಎಲ್ಲಿಯಿಲ್ಲದ ಲಲ್ಲೆ ಹೊಡೆದು ಕೊಂಡು ಕುಳಿತಿರುವುದನ್ನು ನಾಲ್ಕಾಣೆ ಟಿಕೇಟು ಪಡೆದು ವಸ್ತು ಪ್ರದ ರ್ಶನದೊಳಗೆ ಬಂದವರೆಲ್ಲ ಕಂಡರು! ಕಂಡವರು ಬೆರಗು ಕಣ್ಣಿನಿಂದ ದಿಟ್ಟಿಸಿದರು! ದಿಟ್ಟಿಸಿದವರು ಇದರ ಗೂಢವೇನೆಂದು ಅರಿಯಲು ಮುಂದಾದರು!

ಕಾದು ಕಣ್ಣು ಬಿಡುವವರಿದ್ದಾರೆಂದು ತಿಳಿದ ಅವರು ತಮ್ಮ ಮಾತಿನ ಸರಣಿಯನ್ನು ಕಡಿಯಲು ಮುಂದಾಗಲಿಲ್ಲ. ಬೆವರಿ ಬೆಚ್ಚಿ ಓಡಿ ಹೋಗಲು ಪ್ರಯತ್ನಿಸಲಿಲ್ಲ.

ಅವರೊಳಗಿನ ಸೌಹಾರ್ದ ಪ್ರೇಮ ಅವರಿಬ್ಬರನ್ನೂ ಧೈರ್ಯದ ಕವಚದಿಂದ ಬಂಧಿಸಿತ್ತು.

೬

ನಿರ್ದಿಷ್ಟ ನಿಯಮದಂತೆ ಒಂದು ತಿಂಗಳ ಕಾಲ ನಡೆದ ವಸ್ತು ಪ್ರದರ್ಶನ ಕೊನೆಗೊಂಡಿತು. ಅಂದಿನ ತನಕ ದಿನಕರ — ಪ್ರಮೀಳೆಯರು ಅಲ್ಲಿಯೇ ಕಲೆತು, ಒಂದು ಮೈಲು ವಿಸ್ತಾರವಿರುವ ಆವರಣದೊಳಗೆ ನಕ್ಕು—ನಲಿಯುತ್ತಾ ಸುತ್ತಿ ಬರುತ್ತಿದ್ದರು.

ಏನು ಮುಗಿದರೇನು? ಪ್ರಪಂಚದ ಆಟವೇ ಬೇಕಾದರೆ ಮುಗಿಯಲಿ......ಒಮ್ಮೆ ಬೆಳೆದ ಪ್ರೇಮ ಮುರಿಯಬೇಕಾದರೆ, ಮರಣವೇ ಬರಬೇಕು. ಪ್ರೇಮ.......ಮೊಳೆಯುವುದು ಪ್ರಯಾಸ! ಅದು ತನ್ನಿಂತಾನೇ ಮೊಳೆಯಬೇಕಾದರೆ ಸುಂದರ ದೃಢಕಾಯ, ಅಲಂಕಾರಿತ ಶರೀರವಿರಬೇಕು, ಪರರನ್ನು ಅರಿತುಕೊಳ್ಳುವಂತಹ ಕರುಣಾಮಯ ಹೃದಯವಿರಬೇಕು. ಅಂತಲ್ಲಿ ಮೊಳೆಯಿತೋ, ಮತ್ತೆ ಅದು ಹಸನಾಗಿ ಬೆಳೆದು, ಹೂವಾಗಿ, ಕಾಯಿಯಾಗಿ, ಹಣ್ಣಾಗಿ ನೆಲಕ್ಕೆ ಉದುರಬೇಕು. ಅಲ್ಲಿಯವರೆಯು ಯಾರಿಂದಲೂ ಬೇರ್ಪಡಿಸಲು ಅಸಾಧ್ಯ. ಹೀಗಿದೆ ಪ್ರೇಮ ಪ್ರಕರಣ!

ಒಬ್ಬರ ಮುಖವನ್ನೊಬ್ಬರು ನೋಡದಿದ್ದರೆ ನಿದ್ರೆಯಾದರೂ ಬರಬಹುದೇ?

ಹತ್ತಿರ ಕುಳಿತು ಮಾತನಾಡದಿದ್ದರೆ ಮನಸ್ಸಾದರೂ ಸ್ಥಿಮಿತದಲ್ಲಿ ನಿಂತೀತೇ?

ಅವರವರ ಕಾವು—ನೋವುಗಳನ್ನು ಹೇಳಿಕೊಂಡು ಹೃದಯದ ಭಾರವನ್ನು ತಗ್ಗಿಸಿಕೊಳ್ಳದಿದ್ದರೆ ನೆಮ್ಮದಿ ದೊರೆಯಬಹುದೇ?

ಪ್ರೇಮಿಗಳಾವಾಗಲೂ ಹತ್ತಿರ ಸಂಪರ್ಕವಿಟ್ಟುಕೊಂಡಿರಬೇಕು! ಬಾಯಿಯಿಂದ ಹೇಳಲು ನಾಚಿಕೆಯಾದ ವಿಷಯವನ್ನು ಕಾಗದದಲ್ಲಿ ಬರೆದು ಅತ್ತಿತ್ತ ಕಳುಹಿಸುತ್ತಿರಬೇಕು.

ಸಂಜೆಯ ವಿಹಾರಕ್ಕಾಗಿ ಅಂದ ಚೆಂದದ ಹೂಗಳಿಂದ ತುಂಬಿ ರಾರಾಜಿಸುವ ಉದ್ಯಾನವನದಲ್ಲಿಯೇ ಈ ಪ್ರೇಮಿಗಳೂ ಪ್ರತೀ ಸಂಜೆ ದರ್ಶನ ಪಡೆಯುವುದೆಂದು ನಿರ್ಧರಿಸಿಕೊಂಡರು.

ಆಡುವ ನಾಲಿಗೆಗೂ, ನೋಡುವ ಕಣ್ಣುಗಳಿಗೂ, ಹಾರಿ ಬರುವ ಹಾಸ್ಯಕ್ಕೂ ಆಕೆ ತಲೆತೂಗದೆ, ಅವನ ಸನ್ನಿಹಕ್ಕೆ ನಡೆದು ಬರುತ್ತಿದ್ದಳು.

ಅವನೂ ಅವಳಿಗಾಗಿ ಬಾಡಿಗೆಯ ಸೈಕಲಿನಲ್ಲಿ ಬಂದು ಕಾದಿರುತ್ತಿದ್ದ.

ಪ್ರೇಮ ಪ್ರಣಯದ ಹಾದಿ ಹಿಡಿಯಲಾರಂಭಿಸಿತು !

ಮೆಚ್ಚಿದವನ ಮೆಚ್ಚುಗೆ ಉಳಿಯಲು ಅವಳು ವಿಶೇಷ ಅಲಂಕಾರ ಮಾಡಿಕೊಳ್ಳುತ್ತಿದ್ದಳು.

ಅವನು ಮಾತ್ರ ಅಲಂಕಾರಕ್ಕಾಗಿ ಹೆಚ್ಚಿಗೆ ಮನವಿತ್ತಂತೆ ಕಂಡು ಬರುತ್ತಿರಲಿಲ್ಲ.

ಅವಳ ಠೀವಿ, ಅಲಂಕಾರ, ಮಧುಭರಿತ ನಡಿಗೆ, ಮಾಟವಾದ ಮೈಕಟ್ಟು......ಕಂಡವರಿಗೆ ಅವಳ ಹುಚ್ಚು ಹಿಡಿಯಲೇ ಬೇಕು.

ಪ್ರಣಯದ ಪಥ ಹಿಡಿದವರು ವೇದಾಂತಿಗಳಾಗುತ್ತಾರೆ! ಕವಿಗಳಾಗುತ್ತಾರೆ! ಕಟು ವಿಮರ್ಶಕರಾಗುತ್ತಾರೆ! ಆದರೆ, ವಿವೇಕಿಗಳಾಗುವುದಿಲ್ಲ!

ಅವರಿಬ್ಬರು ಒಟ್ಟು ಕಲೆತಾಗ ಮಾತನಾಡದ ವಿಚಾರವಿಲ್ಲ! ನಡೆಸದ ವಿಮರ್ಶೆಯಿರಲಿಲ್ಲ! ಕಟ್ಟದ ಗಾಳಿ ಗೋಪುರವಿರಲಿಲ್ಲ! ಕಡೆಯದ ಸಮುದ್ರವಿಲ್ಲ! ಕಾಣದ ಕನಸಿಲ್ಲ! ಹಾರಿಸದ ಹಾಸ್ಯವಿಲ್ಲ!

ಅದೊಂದು ದಿನ !

ಪ್ರಮೀಳ ತನ್ನ ಜೀವಮಾನದಲ್ಲಿ ಎಂದೆಂದೂ ಮರೆಯಲಾರದ ದಿನ!

ಶುಕ್ರವಾರ !

ಅಂದಿನಿಂದಲೇ ಆಕೆ ಪ್ರತೀ ಶುಕ್ರವಾರ ತಪ್ಪದೆ ದೇವಸ್ಥಾನಕ್ಕೆ ಹೋಗಿ ಪ್ರದಕ್ಷಿಣೆ ಬಂದು ಭಕ್ತಿಯಿಂದ ದೇವರನ್ನು ಸ್ಮರಿಸತೊಡಗಿದ್ದು.

ಅಂದೇ, ಆಕೆ ತನ್ನ ಬಾಳಿನ ಸುದಿನಕ್ಕೆ ಬೆಳಕು ಹರಿಸಲು ಪ್ರಯತ್ನಿಸಿದ ದಿನ !

ಆಕೆ ಗಟ್ಟಿ ಮನಸ್ಸಿನಿಂದ ತನ್ನ ಪ್ರಿಯಕರನನ್ನು ಪ್ರಶ್ನಿಸಿದ್ದಳು:

'ನೀವು ನನ್ನ ಜೀವನ ಸಂಗಾತಿಯಾಗುತ್ತೀರಾ?' ಮೃದುವಾಗಿ ನಾಚುತ್ತಾ, ಕಿರುಬೆರಳ ತುದಿ ಕಡಿಯುತ್ತಾ, ಕಣ್ಣರಳಿಸಿ ಕೇಳಿದಳು.

'ನಿನಗೊಪ್ಪಿಗೆಯಿದೆಯೆ?'

'ಒಪ್ಪಿಯೇ ವಿಚಾರಿಸುತ್ತಿರುವೆನು'

'ಹೆಣ್ಣು, ಬಡವನನ್ನು, ಕಲಾವಿದನನ್ನು ಬಯಸುವುದು ತಪ್ಪು'

'ಬಡತನ — ಸಿರಿತನಕ್ಕಿಂತಲೂ, ಒಲವು — ಒಮ್ಮತ ಮುಖ್ಯವಲ್ಲವೆ? ಒಬ್ಬರನ್ನೊಬ್ಬರು ಸರಿಯಾಗಿ ಅರಿತಿರುವಾಗ, ಮುಂದಿನ ಜೀವನವೂ ಸುಗಮವಾಗಬಹುದಲ್ಲವೆ?'

'ಆದರೆ ಜೀವನವೆಂದರೆ ಕಣ್ಣು ಮುಚ್ಚಿ ಕಾಣುತ್ತಿರುವ ಕನಸ್ಸಲ್ಲ. ಇಂದೊಂದು, ನಾಳೆ ಇನ್ನೊಂದು ಕನಸ್ಸನ್ನು ಕಾಣಬಹುದು ಎಂಬ ಹಂಬಲವಿರಬಾರದು. ಹುಚ್ಚು ಮನಸ್ಸು ಹಂಬಲಿಸಿತೆಂದು ಅಮಾವಾಸ್ಯೆಯ ರಾತ್ರಿ, ಹುಣ್ಣಿಮೆಯ ಚಂದ್ರನನ್ನು ಬಯಸಿ ಕಾದು ನಿಲ್ಲಬಹುದೇ?

'ನೀವೇಕೆ ಹಿಂದೇಟು ಹಾಕುತ್ತಿರುವಿರಿ?'

'ನಾನು ಹಿಂದೇಟು ಹಾಕುತ್ತಿಲ್ಲ ಪ್ರಮಿಳಾ. ವಿಷಯ ವಿಚಾರಕ್ಕಾಗಿ ನುಡಿಯುತ್ತಿರುವೆನು. ನಾವಿಂದು ಯೌವ್ವನದ ಕಣ್ಣು ಕತ್ತಲೆಯಿಂದ, ನಮ್ಮ ಪತಿ-ಪತ್ನಿಯರು ಇಂತಹವರಾದರೆ ಬದುಕಿನಲ್ಲಿ ತೊಡಕು ಬರಲಾರದು ಎಂದು ಕಲ್ಪಿಸಿಕೊಳ್ಳುತ್ತೇವೆ. ಆದರೆ......?'

'ಏನು!'

'ನಮ್ಮ ಬಯಕೆ ನೀರ ಮೇಲಣ ಗುಳ್ಳೆಯಾಗುತ್ತದೆ'

'ಯಾಕೆ! ಅಂತಹ ಪ್ರಮಾದವೇನಿದೆ?'

'ಜೀವನದಲ್ಲಿ ಕೃತಕತೆ ಬೆರಸಿಕೊಂಡ ಗಂಡು-ಹೆಣ್ಣುಗಳ ಮನಸ್ಸು ಸ್ಥಿಮಿತದಲಿಲ್ಲ'

'ಅದನ್ನು ಯಾವ ಮಾಪಕದಿಂದ ಯಾರು ಕಂಡು ಅರಿತುಕೊಂಡಿರುವರು?'

'ಕಂಡದುದನ್ನು ಅರಿತು ವಿಚಾರಿಸಿಕೊಳ್ಳುವ ತಾಳ್ಮೆ ನಮ್ಮ ಯುವ ಜನತೆಯಲ್ಲಿದೆಯೇ? ಕಣ್ಣಿಗೆ ಕಂಡ ಸುಂದರ ವಸ್ತು ಮೋಹಕವಾಗಿ ಕಂಡು, ಮೋಹಿಸಬಯಸಿ, ಮೋಹದುಬ್ಬರ ಕಡಿಮೆಯಾಗಲು, ವಿರಸ ಉದ್ಭವಿಸಿ ಪ್ರೇಮ ಕಾಲ ಕಸವಾಗುತ್ತದೆ'

'ನೀವು ಮಾತ್ರ ಹಾಗೆ ಅಭಿಪ್ರಾಯ ಪಡಬೇಕು. ನೀವಾದರೂ ಇದನ್ನು ಹೇಗೆ ಅರಿತುಕೊಂಡಿರಿ?'

'ನನ್ನ ಭಾವನೆಯಂತೆ.....ಈಗಿನ ಕಟ್ಟು ಕತೆಯ ಕಾಲ್ಪನಿಕ ಸನ್ನಿವೇಶವನ್ನು ಓದಿ, ಹಣಕ್ಕಾಗಿ ಹೇಳಿದ ಕೋಲ ಕಟ್ಟಿ ಕುಣಿವ ಸಿನೇಮಾ ನೋಡಿ, ಈ ಪ್ರೇಮದ ವಿಚಾರವಾಗಿ ನಾನಾ ಬಗೆಯ ಕಲ್ಪನೆಗಳು ಯೌವ್ವನ ಭರಿತದಲ್ಲಿ ಕಲ್ಪಿತವಾಗುತ್ತಿದೆ. ಹೆಣ್ಣು ಗಂಡಿನ ಕೈಗೆ ಸೋಂಕಿದಾಗ ರೋಮಾಂಚನವಾಗುತ್ತದೆ, ವಿದ್ಯುತ್ ಸಂಚಾರವಾದಂತಾಗು

ತ್ತದೆ ಎಂದು ವಿವರಿಸಿದ ವರ್ಣನೆಕಂಡು ಅದೆಷ್ಟೋ ಗಂಡು-ಹೆಣ್ಣುಗಳು, ದಾರಿ ನಡೆವಾಗ ಮೈಸೋಂಕಿಸುವಂತೆ ಹತ್ತಿರ ಸಾರಿ 'ಸುಖ' ಹೀರಲು ಪ್ರಯತ್ನಿಸುತ್ತಾರೆ. ಮುಖ-ಮುಖ ನೋಡಿದೊಡನೆ, ಕಣ್ಣು-ಕಣ್ಣು ಮಾತಾಡುತ್ತದಂತೆ, ಹೃದಯ-ಹೃದಯ ಮಿಡಿಯುತ್ತದಂತೆ ಎಂದು ಭ್ರಾಂತಿಗೊಂಡವರು ಪ್ರೇಮಾರಾಧನೆಗೆ ತೊಡಗಿ ಪ್ರಿಯರೆಣಿಸಿ ಕೊಂಡ ವರೇ, ಮುಖ ತಿರುಗಿಸಿ, ಹೊರಟು ಹೋದ ನಂತರ ಪ್ರೇಮ ಮಾರಿ ಯಾಲೇಬೆಕಲ್ಲವೇ?'

'ನೀವೇಕೆ ಹೀಗೆ ಮಾತಾಡುತ್ತಿರುವಿರಿ?'

"ಏಕೆಂದು ನನಗೂ ಅರ್ಥವಾಗದೆ ಉಳಿದಿದೆ."

"ಹಾಗಾದರೆ, ನಿಮ್ಮನ್ನೇ ನಂಬಿದ ನನಗೆ ನಿರಾಶೆಯೇ?"

"ನೀನೂ ಅದಾವುದೋ ಆಸೆ ಕಟ್ಟಿಕೊಂಡು ನನ್ನ ಬಳಿ ಬಂದಿದ್ದರೆ, ನಿನಗೂ ನಿರಾಶೆಯೇ!"

"ನೀವೇಕೆ ನನಗೆ ಮೊದಲು ತಿಳಿಸಲಿಲ್ಲ!"

"ನೀನೇಕೆ ಇಂದಿನ ವರೆಗೆ ಕೇಳಲಿಲ್ಲ"

"ನೀವೇಕೆ ನನ್ನ ಹಿಂದಿನ ನೆರಳಿನಂತೆ ನನ್ನನ್ನು ಹಿಂಬಾಲಿಸಿದಿರಿ!"

"ನೀನಾಗಿ ಕರೆದುದಲ್ಲದೆ ನಾನಾಗಿ ಬರಲಿಲ್ಲ!"

"ನನ್ನ ರೂಪದಿಂದಲಾದರೂ ನಿಮ್ಮ ಭಾವನೆ ಬದಲಾಗಲಾರದೆ"

"ರೂಪ! ಸ್ಥಿರವಾಗಿ ನಿಲ್ಲಲಾರದ ರೂಪಕ್ಕೇನು ಬೆಲೆಬರಬಹುದು-ಪ್ರಮೀಳಾ! ಗಂಡು, ರೂಪಕ್ಕೆ ಮಾರುಹೋಗುತ್ತಾನೆ ಎಂಬುದು ಶುದ್ಧ ಸುಳ್ಳು!

"ಹೆಣ್ಣಿನ ಹೃದಯವನ್ನು ನೀವು ಅರಿಯಲಾರದೆ ಹೋದಿರಿ"

"ಗಂಡಿನ ಆದರಕ್ಕೆ ಅಪಾರ್ಥ ಕಲ್ಪಿಸಿಕೊಂಡವಳು ನೀನು!"

"ನೀವು ನನ್ನನ್ನು ವಂಚಿಸಿದಿರಿ. ನನ್ನ ಬಾಳಿನ ಬಯಕೆಯ ಮೇಲೆ ದೊಡ್ಡ ಕಲ್ಲನ್ನು ಉರುಳಿಸಿದಿರಿ. ನನ್ನನ್ನು ಜೀವಂತ ಕೊಂದಿರಿ!"

"ನಿನ್ನನ್ನು ವಂಚಿಸಲಿಲ್ಲ—ಪ್ರಮೀಳಾ! ನಿನ್ನನ್ನು ಪಾಪಕೂಪಕ್ಕೂ ನೂಕಲಿಲ್ಲ. ಬಳಿಸಾರಿದವಳಲ್ಲಿ ಸರ್ವ ಸುಖವನ್ನು ಅನುಭವಿಸಲು ಮುಂದಾಗಲಿಲ್ಲ. ನೀನಿನ್ನು ಕುಮಾರಿಯಾಗಿಯೇ ಉಳಿದಿರುವಿ. ನಾನೇನು ನಿನ್ನನ್ನು ಕೆಡಿಸಲಿಲ್ಲ.

"ನಿಮ್ಮ ವರ್ತನೆ ನಿಂದಾಸ್ಪದವಾದುದು"

೭

ಪ್ರವೀಣಾಳೆ ದಿನಕರನನ್ನು ಮೋಹಿಸಿದಾಗ ಆಕೆಗೆ ಹದಿನೆಂಟು ವರ್ಷ ನಡೆಯುತ್ತಿತ್ತು. ಮೊಳಕೆಯೊಡೆಯುತ್ತಿರುವ ಯೌವ್ವನದ ಹುಚ್ಚು ಉನ್ಮಾದ — ಗಂಡನನ್ನು ಬಯಸುವಂತಹದೇ ಪ್ರಾಯ! ಆದರೆ, ಹುರುಪಿನ ಉತ್ಸಾಹ ಹುಂಬತನದಿಂದ ಹುರಿಗಾಳಾಯಿತು! ದಿನಕರನೆಂದು ತನ್ನಾಸೆಗೆಲ್ಲಾ ಬರೆ ಎಳೆದನೋ ಅಂದಿನಿಂದ ಆಕೆ ಯಾರೆಡೆಗೂ ಮೋಹಕಾಸ್ತ್ರ ಹಾರಿಸಲು ಪ್ರಯತ್ನಿಸಲಿಲ್ಲ. ಯಾರ ಅಭಿನಯಕ್ಕಾಗಲಿ, ಪಾಂಡಿತ್ಯಕ್ಕಾಗಲಿ, ಸುಮಧುರ ಕಂಠಕ್ಕಾಗಲಿ, ನರ್ತನದ ಜಯ ಭೇರಿಗಾಗಲಿ, ಮಾರುಹೋಗಲಿಲ್ಲ.

ಪ್ರಥಮ ಪ್ರಯತ್ನದಲ್ಲೇ ಪ್ರಣಯ ಭಂಗವಾದ ಆಕೆಗೆ ಗಂಡುಗಳೆಡೆ ನೋಟ ಹರಿಸುವುದು ಹೇಸಿಗೆಯಾಗಿ ಕಾಣತೊಡಗಿತು.

'ಗಂಡಸರೆಲ್ಲಾ ಮೋಸಗಾರರು — ನಂಬಿಸಿ ದ್ರೋಹ ಬಗೆಯುವ ಷಂಡರು' ಎಂದಾಕೆ, ದಿನಕರನಿಂದ ಉದ್ಯಾನವನದಲ್ಲಿ ತಿರಸ್ಕರಿಸಲ್ಪಟ್ಟಾಗಲೇ ನಿರ್ಧರಿಸಿ ಬಿಟ್ಟಿದ್ದಳು.

ಆಜನ್ಮ ಪರ್ಯಂತ ಅವಿವಾಹಿತೆಯಾಗಿಯೇ ಬಾಳಿ ಬದುಕಬೇಕೆಂದು ಬಯಸಿದ ಬಾಲೆಗೆ, ಹೆತ್ತವರ ಒತ್ತಾಯ ಹೆಚ್ಚಾಗಲು, ಸಾಯುವ ತನಕ ಹೇಗಾಯಿತೋ ಹಾಗೆ ಬದುಕಿದರೆ ಸಾಕೆಂದು ಕಂಡಿತು. ಇಪ್ಪತ್ತ ನಾಲ್ಕನೆ ವರ್ಷ ತುಂಬಿದ ಕಾಲದಲ್ಲಿ — ಸಮಾಜದ ತೆರೆದ ಕಣ್ಣು, ಮನೆತನದ ಗೌರವ ಕುಕ್ಕಲಾರಂಭಿಸಿದಾಗ, ತನ್ನ ಅಪ್ಪನ ಒತ್ತಾಯಕ್ಕೂ, ಅಮ್ಮನ ಕಣ್ಣೀರಿಗೂ ಮರುಗಿದಳು.

ವಿಧಿನಿಯಮವೆಂಬಂತೆ ಜಾತಕಗಳ ಯೋಗಾಯೋಗದಿಂದ ಕೂಡಿಬಂದ ಗಂಡಿನ ಕೈಯಿಂದ ತಾಳಿ ಕಟ್ಟಿಸಿಕೊಂಡು ಗೃಹಿಣಿಯಾದಳು.

ಕೊರಳಲ್ಲಿ ಕರಿಮಣಿ ಕಂಡ ನಂತರ, ಆಶಾಪಾಶದಿಂದ ಕಾಣುವ ಗಂಡುಗಳೂ ಕಣ್ಮರೆಯಾದರು.

ಹೆಣ್ಣನ್ನು ವಿನಾಶದಿಂದ ಕಾಪಾಡುವ ಮಹಾಮಣಿ — ಕರಿಮಣಿ !

ಪಟ್ಟಣದ ಪತಂಗ ಎಂದು ಬಿರುದಾಂಕಿತಳಾದವಳ ಕೈ ಹಿಡಿದು ಆಕೆಯ ಬ್ರಹ್ಮಚರ್ಯ ವ್ರತಕ್ಕೆ ಬರೆ ಎಳೆಯಲು ಅದೃಷ್ಟದೊಡಸಿ

ಕಂಕಣ ಕಟ್ಟಿ ಹೋರಾಡಿದವ ಗಜಪತಿ ಪಟ್ಟಣದ 'ಅನಂತ ಕೆಫೆ'ಯ ಪ್ರಾಮಾಣಿಕ ಮೆನೇಜರ್ ಎಂದೆನಿಸಿಕೊಂಡ ಪ್ರಸಾದ.

ತಾನು ಆಸೆಯಿಂದ ಅರಸಿ, ಆರಿಸಿದ ಗಂಡು ಕೈ ಬಿಟ್ಟ! ಅಪ್ಪ 'ಆದೀತು' ಎಂದು ಆರಿಸಿಕೊಟ್ಟವನು ಕೈ ಕೊಟ್ಟ!!

ಆಕೆಗೆ 'ಗಂಡ' ಎಂಬ ಪುರುಷ ದರ್ಶನವಾಯಿತು!

ತಾಳಿಮಣಿ ಎಂಬ ಬಿಲ್ಲೆ ತೊಟ್ಟವಳನ್ನು ಪರಗಂಡು ಪಾಪಪೂರಿತ ದೃಷ್ಟಿಯಿಂದ ನೋಡಲಾರ; ಸಮಾಜವೆಂಬ ಸಂಭಾವಿತ ವರ್ಗದ ವಕ್ರ ನೋಟ ಹರಿಯಲಾರದು!

ವಿವಾಹವಾಗಿ ಪತಿಗೃಹ ಸೇರಿದ ಪ್ರಮೀಳೆಗೆ ತಾನು ಗಂಡನೊಡಗೂಡಿ ಸಂತೋಷದಿಂದ ದಿನಕಳೆಯಬೇಕು—ಗಂಡನ ಹಿತಮಿತವನ್ನು ಅರಿತುಕೊಂಡು ಅವನಿಗೂ ಸರ್ವಸುಖ ಉಣ್ಣಿಸಬೇಕೆಂಬ ಲವಲವಿಕೆಯಿರಲಿಲ್ಲ. ಗಂಡು ಜಾತಿಯನ್ನು ಕಂಡರೆ ಉರಿದೇಳುವ ಸ್ವಭಾವದವಳಾದ ಅವಳಿಗೆ 'ಪತ್ನಿ'ಯ ಪಟ್ಟಕ್ಕೇರಿಸಿ ಬಾಳು ನಡೆಸಲು ಕರೆ ತಂದ ಗಂಡಿನಲ್ಲಿ ವಿಶ್ವಾಸವಿರಬಹುದೇ?

ಹೆಣ್ಣು ಮನಸ್ಸು ಚಂಚಲ!

ಅವಳ ಮನಸ್ಸು ಸಂಪೂರ್ಣವಾಗಿ ಆಕೆಯ ಹತೋಟಿಯಲ್ಲುಳಿಯಲಿಲ್ಲ! ಸಹನಾಶೀಲತೆಯಿಂದ ತನ್ನೊಡನೆ ಸಹಕರಿಸುವ ಗಂಡನ್ನು ಕಂಡರಿತು, ದಿನಕಳೆದಂತೆ ತನ್ನ ನಡತೆಯಿಂದ ತಾನೇ ಬೇಸರಗೊಂಡು, ತನ್ನನ್ನಾದರಿಸುವ ಗಂಡನನ್ನು, ತನ್ನ ಅವಿವೇಕಕ್ಕಾಗಿ ದೂರೀಕರಿಸಬಾರದೆಂದು ನಿರ್ಧರಿಸಿಕೊಂಡು ತನ್ನ ನಡತೆಯನ್ನು ಬದಲಿಸಲು ಮುಂದಾದಳು.

ಗಂಡ, ತನ್ನ ಸುತ್ತಮುತ್ತ ನಲಿದು ಉಲ್ಲಾಸಯುಕ್ತವಾದ ನುಡಿಗಳಿಂದ ರಮಿಸುತ್ತಿರುವಾಗ, ತಾನು ತನ್ನ ಮುಂಕುತನವನ್ನು ಪ್ರದರ್ಶಿಸಬಾರದೆಂದು ನೆನೆದುಕೊಂಡಳು.

ಪಾಲಿಗೆ ಬಂದುದೇ ಪಂಚಾಮೃತವೆಂದು ಸ್ವೀಕರಿಸಬೇಕು—ದೊರೆಯದ ಮೃಷ್ಟಾನ್ನಕ್ಕಾಗಿ ಮರುಕ ಪಡಬಾರದೆಂದು ತನ್ನ ವಿವೇಕ ಬಲದಿಂದಲೇ ಉತ್ತೇಜನ ಹೊಂದಿದಳು.

ಗಂಡು-ಹೆಣ್ಣು ಒಮ್ಮತದಿಂದ ಒಂದುಗೂಡಿದಲ್ಲಿ ಸ್ವರ್ಗ!

ವಿವಾಹವಾಗಿ ಪತಿಗೃಹ ಸೇರಿದ ಹೆಣ್ಣು, ತವರಿನ ಬಲವನ್ನು ತೊರೆದು ಒಬ್ಬಂಟಿಗಳಾಗಿ, ಅಪರಿಚಿತನ ಹಿಂದೆ ಬಂದು ಹೆದರಿಕೊಂಡಿ

ದ್ದಾಳೆಂದು ಭ್ರಮಿಸಿದ ಪ್ರಸಾದ್, ಪ್ರಮಿಳಾಳೆಯೊಡನೆ ಅಕ್ಕರೆಯಿಂದ ಮಾತನಾಡುತ್ತಿದ್ದ! ಒಲುವಿನಿಂದ ರಮಿಸಿ ಮುದ್ದಾಡುತ್ತಿದ್ದ! ಹೊಟೇಲಿನ ಸಿಹಿತಿಂಡಿ ತಂದು ಲಲ್ಲೆಯಾಡುತ್ತ ತಿನ್ನಿಸುತ್ತಿದ್ದ! ಒತ್ತಾಯದಿಂದ ತಿರುಗಾಡಲು ಹೊರಡಿಸುತ್ತಿದ್ದ! ತನ್ನ ಶಕ್ತಿಗೆ ತಕ್ಕಂತಹ ಶೃಂಗಾರ ಸಾಧನವನ್ನು ತಂದೊದಗಿಸುತ್ತಿದ್ದ!

ಪ್ರಮಿಳಾಳೆಯೊಡಗೂಡಿ ಆದರ್ಶ ಜೀವನವನ್ನು ನಡೆಸಬೇಕೆಂದು ಅವನ ಮುಹದಿಚ್ಛೆ!

ತಾನು ಇಷ್ಟಪಟ್ಟದ್ದನ್ನು, ಹೇಳಿದ ಕೂಡಲೇ ತಂದುಕೊಡುತ್ತಿದ್ದ ಪತಿಯಲ್ಲಿದ್ದ ತಿರಸ್ಕಾರ ಕ್ರಮೇಣ ಮಾಯವಾಯಿತು.

ಅದರಂತೆ ಅವಳೂ ತನ್ನ ನಡತೆಯನ್ನು ತಿದ್ದಿಕೊಂಡಳು.

ಹೆಣ್ಣನ್ನು ಹದವರಿತು ನಡೆಸಿಕೊಂಡು ಬರಬೇಕು. ಒಮ್ಮೆ ಬಿಗಿಹಿಡಿದ ಕಡಿವಾಣವನ್ನು ಸಡಿಲಿಸಿ ಬಿಟ್ಟೆತೋ ಮತ್ತೆ ಅದನ್ನು ಹತೋಟಿಗೆ ತರುವುದು ಬಲೂ ಪ್ರಯಾಸ!

ಕಾಲಕ್ಕೆ ತಕ್ಕಂತೆ ಬದಲಾಗಿರುವ ಹೆಣ್ಣುಗಳು, ಪತಿಯನ್ನು ತಮ್ಮ ಅಂಕಿತದಲ್ಲಿರಿಸಿಕೊಳ್ಳಲು ಮುಂದಾಗುತ್ತಾರೆ ಅದರಂತೆ ಹಲವರು ಪತ್ನಿದಾಸರಾಗಿ ಬದುಕಿಕೊಂಡಿರುವವರೂ ಇದ್ದಾರೆ.

ದಿನಗಳೆದಂತೆ ಪ್ರಮಿಳಾಳೆಯ ಆಸೆಯ ಕಿಡಿ ಉರಿದು ಜ್ವಾಲಾಯುಕ್ತ ನಾಲಗೆಯನ್ನು ಚಾಚತೊಡಗಿತು. ಆಕೆಯ ಪಟ್ಟಣದ ಶೃಂಗಾರ ಹಂಬಲ ಹೆಚ್ಚಾಯಿತು!

ಮಂಗಳೂರಲ್ಲಿದ್ದಾಗ, ತನ್ನ ನವನವೀನ ಶೃಂಗಾರದಿಂದ 'ಉರ್ವದ ಅಪ್ಸರೆ' ಎಂದು ಬಿರುದಾಂಕಿತಳಾದವಳು ಮುಂದೆಯೂ ತನ್ನ ಸೌಂದರ್ಯಾರ್ಜನೆಯನ್ನು ಬೆಳೆಸಿಕೊಂಡು ಯೌವ್ವನದ ಕಾಂತಿ ಬೀರಬೇಕೆಂದು ತನ್ನ ಆಸೆಯನ್ನೆಲ್ಲಾ ಪತಿಯ ಮುಂದೆ ನಿವೇದಿಸಿಕೊಂಡು ಸಕಲವನ್ನು ಒದಗಿಸಿಕೊಳ್ಳುತ್ತಿದ್ದಳು.

ಹೆಣ್ಣು, ಹೆಂಡತಿಯಾಗಿ ಹತ್ತಿರ ಬಂದಾಗ ಗಂಡು ಆಕೆಯ ಗುಲಾಮನಾಗುತ್ತಾನೆ! ಅಂದರೆ ಆಕೆಯ ಚಾಕರಿ ಮಾಡಿ, ಆಕೆ ಉಟ್ಟೆಸೆದ ಸೀರೆ ಒಗೆದು ಒಣಗಿಸುವ ಆಳಿನಂತಲ್ಲ; ಮಾತಾಪಿತೃ ವಾತ್ಸಲ್ಯವನ್ನು ತೊರೆದು ಬಂದವಳ ಮನನೋಯಿಸಬಾರದೆಂಬ ಮೋಹಜಾಲದ ಸೇವಕ.

ಆಸೆಯ ಮುದ್ದೆಯಾದ ಹೆಣ್ಣಿಗೆ ತೃಪ್ತಿ ಎಂಬುದಿದೆಯೆ? ಕಣ್ಣಿಗೆ ಚಂದವಾಗಿ ಕಂಡದ್ದನ್ನು ಪಡೆಯಬೇಕೆಂಬ ಆಸೆ ಮಾಯವಾಗಬಹುದೆ?

ಒಮ್ಮೆ ತರತರದ ಸೀರೆಯ ಬಯಕೆಯಾದರೆ, ಮತ್ತೆ ಇರುವೆಯ ದಿಬ್ಬಣದಂತೆ ರವಕೆ, ಸ್ನೋ, ಪೌಡರ್, ಪರಿಮಳದ ಎಣ್ಣೆ, ಉಂಗುರ, ಚೈನು, ಬಳೆ, ಕಿವಿದು– ಕುತ್ತಿಗೆದು– ಕಾಲಿನದು! ಅವಳ ಕೇಳಿಕೆಗಳಾವುದನ್ನೂ ನಿರಾಕರಿಸದೆ ಪ್ರಸಾದ ತಂದು ಕೊಟ್ಟಂತೆ ಆಸೆಯೂ ಹೆಚ್ಚಾಗುತಿತ್ತು!

ಆದರೆ......ತಿಂಗಳಲ್ಲಿ ನಿಯಮಿತ ಸಂಬಳ ಪಡೆಯುವ ಗಂಡು, ಸಿನೇಮಾ ತಾರೆಯರ ಪ್ರತಿರೂಪ ಬಿಂಬಿಸಲು ಪ್ರಯತ್ನಿಸುವ ಹೆಣ್ಣನ್ನು ತೃಪ್ತಿಪಡಿಸಲು ಸಾಧ್ಯವಾದೀತೆ ?

ಮುಂದಿನ ಕಷ್ಟಕ್ಕಾಗಿ ಕೂಡಿಟ್ಟ ಹಣ ಹೆಣ್ಣಿನ ಶೃಂಗಾರಕ್ಕಾಗಿ ಕರಗಿ ಹೋಯಿತು !

ಆಸೆಯಿಂದ ಬೇಕೆಂದು ಬೇಡಿದ ವಸ್ತು ಬಾರದಿರಲು ಮೂದಲಿಕೆಯ ಜಗಳ ಬೆಳೆಯತೊಡಗಿತು.

ಬೇಡಿಕೆಗೆ 'ಹಣವಿಲ್ಲ' ಎನ್ನುವ ಉತ್ತರ ಬಂದಾಗ ಸಿಂಹಿಣಿಯಾಗುತ್ತಿದ್ದಳು ಪ್ರಮೀಳೆ !

'ನೀವೇಕೆ ನನ್ನನ್ನು ಮದುವೆಯಾದುದು? ನಿಮ್ಮ ಶೋಕಿಗೆ ಎಷ್ಟು ಬೇಕಾದರೂ ಖರ್ಚು ಮಾಡುವ ಶಕ್ತಿ ನಿಮ್ಮಲ್ಲಿದೆ–ನನಗೆ ಮಾತ್ರ ತಂದು ಕೊಡಲು ನಿಮ್ಮಲ್ಲಿ ಹಣವಿಲ್ಲ! ನನ್ನ ಅಪ್ಪ–ಅಮ್ಮ ಹುಡುಕಿ–ಹುಡುಕಿ ಓರ್ವ ಬಡವನ ಕೊರಳಿಗೆ ಬಿಗಿದು ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡರು? ನೀವಿಷ್ಟು ಜಿಪುಣರು–ಬಡವರು ಎಂದು ತಿಳಿದಿದ್ದರೆ, ನಾನು ಮದುವೆಯಾಗುತ್ತಿರಲಿಲ್ಲ' ಎನ್ನುತ್ತಿದ್ದಳು.

ಮಗುವಿನ ಮನಸ್ಸಿನಂತೆ ಮಾತಾಡುವವಳಿಗೆ ಪ್ರಸಾದ ವಿವೇಕ ಬೋಧಿಸುತ್ತಿದ್ದ.

'ನೀನು ಹೀಗೆಲ್ಲಾ ಮಾತಾಡಿ ಮನನೋಯಿಸಬಾರದು. ನಾವು ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು. ಸಾಲ ಮಾಡಿದರೆ ಹೇಗೆ ತೀರಿಸುವುದು' ಎಂದರೆ.

'ಹೊಟೇಲಿನ ಲೇವಾದೇವಿ ನೋಡಿಕೊಳ್ಳುವವರು ನೀವಲ್ಲವೆ ? ಅವರಿಗೆ ತಿಳಿಯದಂತೆ, ತಪ್ಪು ಲೆಕ್ಕ ತೋರಿಸಿ ಹಣ ಹಾರಿಸಿರಿ' ಎನ್ನುತ್ತಿದ್ದಳು.

ಕಳ್ಳತನ ಮಾಡಲು ಕೈ ಹಿಡಿದವಳ ಉಪದೇಶ! ಮೋಸ–ವಂಚನೆಯಿಂದ ಜೈಲು ಸೇರಿದರೂ ಚಿಂತಿಲ್ಲ. ತಾನು ಮಾತ್ರ ಸಿಂಗರದ ಬೊಂಬೆಯಾಗಿ ಬದುಕಬೇಕೆಂದು ಬಯಸುವ ಹೆಣ್ಣಿನ ಮನವನ್ನು ಏನನ್ನಬೇಕು?

ಕ್ರಮೇಣ ಅವರ ಸಂಸಾರದಲ್ಲಿ ಸಂಗ್ರಾಮವಾಗತೊಡಗಿತು! ಸರಸ ವಿರಸವಾಯಿತು! ಸಂಸಾರ ಸಹರ ಮರುಭೂಮಿಯಾಯಿತು! ಮಾತು ಗಾರಿಕೆಯಲ್ಲಿ ಪಳಗಿದ ಹೆಣ್ಣು, ಗಂಡನ ಒಂದು ಮಾತಿಗೆ, ಚಾಟಿ ಏಟಿ ನಂತಹ ಹತ್ತು ಮಾತಿನ ಉತ್ತರಕೊಟ್ಟು, ಗಂಡನ ಬಾಯಿ ಮುಚ್ಚಿಸಿ ಬಿಡುತ್ತಿದ್ದಳು.

ಗಂಡನ ಕಷ್ಟ-ನಷ್ಟವನ್ನು ಅರಿತುಕೊಳ್ಳದೆ ಜಗಳ ಕರೆಯುವ ಹೆಣ್ಣಿನೊಡನೆ ಮಾತಾಡದೆ ಮೌನವಾಗಿಯೇ ಇರುವುದು ಉತ್ತಮವೆಂದು ಪ್ರಸಾದ ನೆನೆದು ಮಾತು ಬಾರದ ಮೂಕನಂತೆ, ಹೆಂಡ್ತಿ ಹಾಕಿದ್ದನು ತಿಂದುಕೊಂಡು ಇರತೊಡಗಿದ.

ಹೆಣ್ಣಿನ ನಾಲಗೆ ಕೇವಲ ಮೂರಂಗುಲವಾದರೂ ಆರಡಿಯ ಗಂಡ ನನ್ನು ಬರೀ ತನ್ನ ನಾಲಗೆಯ ಚಾಪಲ್ಯದಿಂದ ಅಶ್ವ ಸಹಿತ ಕೊಲ್ಲಬಲ್ಲದು.

ಅತೃಪ್ತಿ ಆಕೆಯ ತಲೆಯಲ್ಲಿ ತುಂಬಿಕೊಂಡಿತು. ತನ್ನನ್ನು ಸುಖ ದಿಂದ ಸಾಕಿ, ತನ್ನ ಬಯಕೆಯ ತಾಳಕ್ಕೆ ಸರಿಯಾಗಿ ಕುಣಿಯಲು ತ್ರಾಣ ವಿಲ್ಲದ ಗಂಡು, ಗಂಡ್ಸಲ್ಲ ಎಂದು ನಿರ್ಧರಿಸಿಬಿಟ್ಟಳು.

೦ ೦ ೦ ೦

ಪ್ರಮಿಳೆಯ ಪೂರ್ವ ವೃತ್ತಾಂತವನ್ನು ಅರಿತುಕೊಳ್ಳಲು ಪತ್ತೇ ದಾರರು ಬಹಳವಾಗಿ ಶ್ರಮವಹಿಸಿದರು !

ತಮಗೆ ಬೇಕೆನಿಸಿಕೊಂಡುದೆಲ್ಲಾ ವಿವರ ಪಡೆದುಕೊಂಡರು.

ಸಂಶಯದ ನಿವಾರಣೆ ಹೇಗೆ ?

ಕೈ ಹಿಡಿದ ಗಂಡನನ್ನು ಕೊಲೆಮಾಡಿ, ಪಾತಿವ್ರತ್ಯದ ಪವಿತ್ರ ಮಾಂಗಲ್ಯ ಕಡಿದುಕೊಂಡು, ಕುಂಕುಮ ವಿಹೀನೆಯಾಗಿ, ಹೂವಿನ ಆಸೆ ತೊರೆದು ಯಾರಾದರೂ ಬಾಳಲು ಬಯಸಿಯಾರೆ ?

ಪತಿ ಎಂದರೆ ಪರಮಾತ್ಮ ಸ್ವರೂಪಿ ಎಂದು ಭಯಭಕ್ತಿಯಿಂದ ಕಾಲು ತೊಳೆದು ಪೂಜಿಸುವ ಸಂಪ್ರದಾಯ ನಡೆದು ಬಂದ ಈ ಭರತ ಖಂಡದಲ್ಲಿ ಗಂಡನ ರುಂಡವನ್ನೇ ಚೆಂಡಾಡುವ 'ಚಂಡಿ' ಸ್ವರೂಪಿಣಿ ಯರು ಇರಬಹುದೆ ?

ಪ್ರಮಿಳೆಯೇ ಪ್ರಸಾದನನ್ನು ಕೊಂದಿರಬಹುದೆ !?

ಮೃತ ಶರೀರದ ಬಳಿ ಬಿದ್ದಿದ್ದ ಚೀಟಿಯ ಅರ್ಥವೇನು ?

ಸಮಸ್ಯೆ ಜಟಿಲವಾಗಿಯೆ ಉಳಿಯಿತು.

ಪ್ರಮೀಳೆಯ ಕಾರ್ಯಸ್ಥಾನವನ್ನು ಗೊತ್ತುಹಚ್ಚುವುದು ಹೇಗೆ ?

ಪ್ರಸಾದರನ್ನು ಕೊಂದ ಕೈ ಯಾವುದಾಗಿರಬಹುದು ?

ದಿನಗಳ ಮೇಲೆ ದಿನಗಳು ಉರುಳುತ್ತಿದ್ದುವು.

ಕೊಲೆಯ ರಹಸ್ಯ ಮಾತ್ರ ಅಭೇದ್ಯವಾಗಿಯೇ ಉಳಿಯಿತು.

ಕೊಲೆಗಾರ ತಾನೇ ಕೊಲೆ ಮಾಡಿದೆ ಎಂದೂ ಸರಕಾರಕ್ಕೆ ಬಂದು ಮಣಿಯಲೂ ಇಲ್ಲ.

ಕೊಲೆಯ ಪ್ರಸಂಗವನ್ನೇ ಜನರು ಮರೆಯುತ್ತಾ ಬಂದರು.

ಯಾರು ಮರೆತರೂ ಇನ್ಸ್‌ಪೆಕ್ಟರ್ ವಿಶ್ವನಾಥರು ಮತ್ತು ಪತ್ತೇದಾರಿ ಪುಟ್ಟಣ್ಣ ತಮ್ಮ ಕರ್ತವ್ಯದಲ್ಲಿ ಆಲಸಿಗಳಾಗಲಿದ್ದಾರೆಯೇ ?

ಅವರ ಪ್ರಯತ್ನ ನಡೆದೇ ಇತ್ತು !

ಕೊಲೆ ರಹಸ್ಯವಾಗಿಯೇ ಉಳಿದಿತ್ತು !

೮

ವಿವಿಧ ವೇಷಧರಿಸಿ, ಭಗೀರಥ ಪ್ರಯತ್ನ ನಡೆಸಿದ ಪತ್ತೇದಾರರಿಗೆ, ಕೊಲೆಯ ರಹಸ್ಯ ಭೇದಿಸಲು ತನ್ನಿಂದ ಸಾಧ್ಯವಾದೀತೆ ಎಂಬ ಶಂಕೆ ಉದ್ಭವಿಸತೊಡಗಿತು. ಅವರು ಸಂದೇಹದಿಂದ ಮುಂದಾದೆಡೆಯೆಲ್ಲ ನಿರಾಶೆಯ ಫಲ ದೊರೆಯಿತು. ಅವರು ಹೂಡಿದ ಜಾಲವೆಲ್ಲವೂ ಮರುಳುಗಾಡಿನಲ್ಲಿ ಸಸಿ ನೆಟ್ಟು, ಚಿಗುರ ಕಾಣಲು ಹಂಬಲಿಸಿದಂತಾಯಿತು.

ಊರೊಳಗೆ ಅಪರೂಪವಾಗಿ ಇನ್ಸ್‌ಪೆಕ್ಟರನ್ನೋ, ಪೋಲೀಸರನ್ನೋ ಕಂಡಾಗಲೆಲ್ಲ, ಕೊಲೆಯ ಜ್ಞಾಪಕ ಬಂದ ಜನರು, ತಮ್ಮ ಊಹನೆಗೆ ನಿಲುಕಿದ ಅಭಿಪ್ರಾಯಗಳನ್ನು ಹರಿಯಬಿಡುತ್ತಿದ್ದರು! ನಂಜನ ಚಟಾಕಿಯನ್ನು ಹಾರಿಸುತ್ತಿದ್ದರು!

ಪತಿಯನ್ನು ಕಳೆದುಕೊಂಡು, ಕುಂಕುಮ ವಿಹೀನೆಯಾಗಿ ಬದುಕುವ ಬಾಳು ಬಹಳ ಚಿಂತಾಜನಕವಾದುದು. ಆಕೆಗೆ ಕುಂಕುಮವಿಡುವ, ಹೂ ಮುಡಿದು ಕೊಳ್ಳುವ, ಶೃಂಗರಿಸಿಕೊಂಡು ಸಂತಸದಿಂದಿರುವ ಭಾಗ್ಯವಿಲ್ಲ! ಹಿಂದಿನ ಸಂಪ್ರದಾಯದಂತಾದರೋ ಗಂಡ ಸತ್ತು ಸಮಾಧಿಯಾದೊಡನೆ, ಹೆಣ್ಣಿನ ತಲೆ ಬೋಳಿಸಿ, ಕೆಂಪು ಸೀರೆ ಉಡಿಸಿ, ಆಕಾರವನ್ನೇ ವಿಕಾರ ಮಾಡಿ, ಜೀವಮಾನವಿಡಿ ದುರಂತವನ್ನು ಎದುರಿಸಿಯೇ ಬದುಕುವಂತೆ ಸಮಾಜದ ಸುಧಾರಕರು ಮಾಡಿಬಿಡುತ್ತಿದ್ದರು. ಆದರೆ, ಕಾಲವು ಬದಲಾಗುತ್ತಿದ್ದಂತೆ, ಸುಧಾರಣೆ ಹೊಂದಿ, ವಿದ್ಯಾವ್ಯಾಸಂಗದಿಂದ ಬುದ್ಧಿ ಬಲಿತು, ಆಕೆ ತನ್ನ ಜೀವನೋಪಾಯಕ್ಕಾಗಿ ಅಧ್ಯಾಪಕಿಯಾಗಿಯೋ, ಇನ್ನಿತರ ದುಡಿಮೆಯ ಹಾದಿ ಹಿಡಿದೋ ಬದುಕಿರಲಿ ಎಂದುಕೊಂಡು, ಈ ತಲೆ ಬೋಳಿಸುವ ಕ್ರಮವನ್ನೇ ಹೊಡೆದೋಡಿಸಿರುವರು.

ಆದರೆ, ಪ್ರಮೀಳೆ, ಸತ್ತ ಗಂಡನಿಗಾಗಿ, ಕಣ್ಣೀರ ಕೋಡಿ ಹರಿಸಿ, ಕೊರಗಿ-ಸೊರಗಿದಂತೆ ಕಂಡು ಬರಲಿಲ್ಲ! ಇಂದಿನ ನವೀನ ಆಡಂಬರದ ಆಡುಗೊಂಬೆಯಂತೆ, ಹಣೆಯ ಕುಂಕುಮವಳಿಸಿ ಮಿಕ್ಕೆಲ್ಲ ಶೃಂಗಾರವನ್ನು ಹಿತಮಿತವಾಗಿಯೇ ಮಾಡಿಕೊಳ್ಳುತ್ತಿದ್ದಳು.

ಪತ್ತೇದಾರಿಕೆಗೆ ಮುಂಬಾದ ಪುಟ್ಟಣ್ಣನವರಿಗೆ, ಆಕೆ, ತನ್ನ ಸ್ವೇಚ್ಛೆಯಂತೆ ದಿನಕಳೆಯುತ್ತಿರುವುದನ್ನು ಕಂಡು ಸಂಶಯ, ಸಂದೇಹ ಮಾಡಿದರು. ಮುಂದುವರಿದು ಸಾಧಿಸಲು, ತಕ್ಕ ಆಸ್ಪದ ದೊರಿಯದೆ ಹೋಯಿತು.

ಆಕೆಯ ಶೀಲದಲ್ಲಿ ಸಂಶಯಪಡುವುದಾದರೂ ಹೇಗೆ? ತನ್ನ ನಿತ್ಯ ವಿಧಿಯನ್ನು ತೀರಿಸಿಕೊಂಡು ಮನೆಯಿಂದ ಹೊರಬಾರದೆ ಒಳಗೆಯೇ ಇರುವವಳ ನಡತೆಯಲ್ಲಿ ದೋಷಾರೋಪಿಸುವುದು ಹೇಗೆ?

ಆಶ್ರಯ ಹೀನಳಾದ ಅವಳಿಗೆ ಅನಂತ ಕೆಫೆಯ ಚಿಕ್ಕ ಹುಡುಗ ನೋರ್ವನು ಆಕೆಗೆ ಬೇಕಾದ ನಿತ್ಯೋಪಕರಣಗಳನ್ನು ತಂದು ಕೊಡುತ್ತಿದ್ದ.

ಕೈ ಹಿಡಿದು ಕರತಂದವ ಕೈಲಾಸವಾಸಿಯಾದ! ಆಕೆಯನ್ನು ವಾತ್ಸಲ್ಯದಿಂದ ಸಲಹುವವರಾರು ಇಲ್ಲ. ಹಾಗಾದರೆ, ಆಕೆ ತವರಿಗೆ ಮರಳಿ ಆಶ್ರಯ ಪಡೆಯಲು ಮುಂದಾಗಲಿಲ್ಲವೇಕೆ? ಹೆಣ್ಣು, ಹೆತ್ತಮ್ಮನ ಕಾಣಲು ತವರಿಗೆ ಹೊರಡುವುದೆಂದರೆ ತುದಿಕಾಲಿನಲ್ಲಿ ನಿಂತಿರುತ್ತಾಳೆ! ತಾಯಿಯ ಬಳಿಯಲ್ಲಿ ಕುಳಿತುಕೊಂಡು ಗಂಡನ ನಡತೆ, ಅತ್ತೆಯ ಅಬ್ಬರವನ್ನೆಲ್ಲಾ ದೂರುವುದೆಂದರೆ ಹೆಣ್ಣಿಗೆ ಮೃಷ್ಟಾನ್ನ ಉಂಡಂತೆ! ಮಗಳ ಮಾತು ಕೇಳಿ ಮರುಕಗೊಂಡು, ಕಣ್ಣೀರಿನ ಕೋಡಿ ಹರಿಸಿ, 'ನಿನಗೆಂತಹ ಕಷ್ಟ ಬಂತಪ್ಪ' ಎಂದು ರಂಪಾಟ ಮಾಡಿ ಮುದ್ದು ಮಗಳನ್ನು ಸಮಾಧಾನಪಡಿಸುವುದೆಂದರೆ ಹೆತ್ತ ಹೊಟ್ಟೆಗೂ ಸಂತೋಷ! ಆದರೆ, ಪ್ರಮೀಳೆ ಮಾತ್ರ ಈ ಊರು ಬಿಡದೆ ಉಳಿದಿರುವಳೇಕೆ? ತವರಿನೊಡನೆ ಜಗಳ ಮಾಡಿ, ಇನ್ನು ಮುಂದೆ ಮನೆಯ ಮೆಟ್ಟಲೇರುವುದಿಲ್ಲವೆಂದು, ದೇವರ ಮೇಲೆ ಆಣೆಯಿಟ್ಟು, ನೆಲಕ್ಕೆ ಕೈ ಹೊಡೆದು ಬಂದಿರುವಳೇ?

ಅಂದೇಕೋ, ಅದಾರೋ, ಹೊಡೆದು ಎಬ್ಬಿಸಿದಂತೆ ಪ್ರಾತಃಕಾಲ ನಾಲ್ಕು ಗಂಟೆಗೆ ಪತ್ತೇದಾರರಿಗೆ ಎಚ್ಚರವಾಯಿತು. ಮತ್ತೆಷ್ಟು ಮಗ್ಗಲು ತಿರುಗಿ ಮಲಗಿ ನಿದ್ರಿಸಲು ಪ್ರಯತ್ನಿಸಿದರೂ, ನಿದ್ರೆ ಬಾರದಿರಲು ಎತ್ತಲಾದರೂ ತಿರುಗಾಡಿಕೊಂಡು ಬರೋಣವೆಂದು ಧರಿಸಿದ್ದ ಖಾಕಿ ಚಡ್ಡಿ ಶರ್ಟಿನಲ್ಲಿಯೇ, ತಲೆಗೊಂದು ರುಮಾಲ್ ಸುತ್ತಿಕೊಂಡು, ಅವರ ನೆಚ್ಚಿನ ಸ್ಫೂರ್ತಿದಾಯಕ ಕಾಮಾಕ್ಷಿ ಬೀಡಿಯನ್ನು ಹಚ್ಚಿಕೊಂಡು ಹೊರ ಹೊರಟರು, ಅವರ ಆಗಿನ ವೇಷದಿಂದ, ಚಿರಪರಿಚಿತರಿಗೂ ಪಕ್ಕನೆ

ಗುರುತಿಸಲು ಸಾಧ್ಯವಿರಲಿಲ್ಲ. ದೂರದಿಂದ ದಿಟ್ಟಿಸಿದವರಿಗೆ, ಡ್ಯೂಟಿಗಾಗಿ ಹೊರಟ ಬಸ್ ಡ್ರೈವರೋ-ಕಂಡಕ್ಟರರೋ ಎಂಬಂತೆ ಕಂಡು ಬರುತ್ತಿದ್ದರು.

ಮನೆಯ ಮೆಟ್ಟಿಲಿಳಿಯುತ್ತಿದ್ದಂತೆ ಕೊಲೆಯ ನೆನಪು ಮರುಕಳಿಸಲು 'ಅನಂತ ಕೆಫೆ'ಯ ಮಾಲಿಕರಾದ ಹಯಗ್ರೀವಾಚಾರ್ಯರ ಮನೆಯತ್ತ ಹೋಗಲು ಮನಸ್ಸು ಹಂಬಲಿಸಿದಂತಾಗಲು, ಅದೇ ಹಾದಿಯಿಂದ ಮುಂದುವರಿದರು.

ನಸುಗತ್ತಲು ಸುತ್ತಲೂ ಹರಡಿತ್ತು. ತಂಪಾದ ತಂಗಾಳಿ ಬೀಸುತಿತ್ತು. ದೂರದಲೆಲ್ಲೋ ಕೋಳಿ ಕೂಗುತಿತ್ತು. ಊರಿನ್ನೂ ನಿದ್ರಿಸುತ್ತಲೇ ಇತ್ತು. ಯಾರ ಮನೆಯಲ್ಲೂ ಎಚ್ಚರಗೊಂಡಂತೆ ಕಂಡು ಬರಲಿಲ್ಲ. ಮೂರನೆಯ ಮಾರ್ಗದಲ್ಲಿದ್ದ ಮಹಾಗಣಪತಿ ದೇವಸ್ಥಾನದ ಬಳಿಯಲ್ಲಿದ್ದ ಅರ್ಚಕರ ಮನೆಯಲ್ಲಿ ಮಾತ್ರ ಕಿರುಸ್ವರದಲ್ಲಿ ಉದಯ ರಾಗ ಹಾಡುತ್ತಾ ಮಜ್ಜಿಗೆ ಕಡೆಯುವ ಶಬ್ಧ ಕೇಳಿ ಬರುತಿತ್ತು.

ಗದ್ದೆ ಕೆಲಸಕ್ಕೆ ಮುಂದಾದ ನೇಗಿಲಯೋಗಿ, ತನ್ನ ಎತ್ತನ್ನು ಅಟ್ಟಿಕೊಂಡು ಗದ್ದೆಯತ್ತ ಸಾಗುತಿದ್ದ.

ದೂರದಿಂದ ಇಗರ್ಜಿಯ ಗಂಟೆಯ ನಿನಾದ ಕೇಳಿ ಬರುತಿತ್ತು.

ಕಾರ್ಯರಂಗಕ್ಕೆ ಇಳಿದ ನಂತರ ಜಯಶೀಲರಾಗಲೇಬೇಕೆಂಬ ಛಲ ಪತ್ತೇದಾರ ಪುಟ್ಟಣ್ಣನವರದ್ದು! ಇಷ್ಟರ ವರೆಗೆ ಅವರ ಪತ್ತೇದಾರ ಸಂಪುಟದಲ್ಲಿ ಸೋತು ಮುಖ ಮುದುಡಿಸಿಕೊಂಡಿರಲಿಲ್ಲ. ಪರಮಾತ್ಮನಲ್ಲಿ ನಂಬಿಗೆ ಇರಿಸಿದ್ದ ಅವರು, ತಾನು ಕೈಕೊಂಡ ಕಾರ್ಯದಲ್ಲಿ ಗೆಲುವನ್ನು ಖಂಡಿತವಾಗಿಯೂ ಪಡೆಯದಿರಲಾರೆನೆಂದು ನಂಬಿಕೊಂಡಿದ್ದರು.

ಮನದಲ್ಲಿ ಆಲೋಚನೆಯ ಬಿರುಗಾಳಿ ಒಡೆಬಾಡುತಿತ್ತು. ಕಣ್ಣ ದೃಷ್ಟಿ ಸುತ್ತಲೂ ಹರಿದು, ಪಥವನ್ನು ಹಸನಾಗಿ ನಿರೂಪಗೊಳಿಸುತಿತ್ತು. ಧರ್ಮ ಕರ್ಮ ಸಂಯೋಗವೆಂಬಂತೆ, 'ಅನಂತ ಕೆಫೆ'ಯ ಮಾಲಿಕರಾದ ಹಯಗ್ರೀವಾಚಾರ್ಯರ ಮನೆಯ ಎದುರು ಬಾಗಿಲನ್ನು ಓರೆಮಾಡಿಕೊಂಡು ಹೆಣ್ಣೊಂದು ಹೊರ ನುಸಿಳಿದಂತೆ, ಹಿಂದಿನಿಂದ ಅಗಳಿ ಹಾಕಿದ ಸಪ್ಪಳ ಕೇಳಿ ಪತ್ತೇದಾರರು ಒಂದು ಕ್ಷಣ ತಡೆದು ನಿಂತರು. ಮೆಟ್ಟಿಲಿಳಿಯುತ್ತಿದ್ದ ವ್ಯಕ್ತಿ ಮಾರ್ಗಕ್ಕೆ ಕಾಲಿರಿಸುತ್ತಿದ್ದಂತೆ ತನ್ನ ಮುಖ ಮುಚ್ಚಲು ಸೆರಗನ್ನು ತಲೆಯ ಸುತ್ತಲೂ ಹೊದೆದುಕೊಂಡು ಬಿರಬಿರನೆ ಹೊರಟು ಹೋದಳು.

ಕಣ್ಣಾರೆ ಕಂಡ ದೃಶ್ಯ ಮಿದುಳಿನ ಕವಾಟನ್ನು ತೆರೆಯಲು ಕೊಲೆಗಾರನೇ ಎದುರು ಬಂದು ತನ್ನ ತಪ್ಪನ್ನು ಒಪ್ಪಿಕೊಂಡಷ್ಟು ಸಂತೋಷ ಪತ್ತೇದಾರರಿಗಾಯಿತು.

ಈ ನಸುಕಿನಲ್ಲಿ ಪ್ರಮೀಳೆ ಆ ಮನೆಯಿಂದ ಹೊರಬರ ಬೇಕಾದರೆ.........?

ಮಾನವ ಡಾಂಭಿಕವಾಗಿ, ತನ್ನ ಧೀರತನವನ್ನು ಪ್ರದರ್ಶಿಸುತ್ತಾ, ತಾನಾರಿಗೂ ಬೆದರುವವನಲ್ಲ ಎಂದು ಬಡಾಯಿ ಕೊಚ್ಚಿಕೊಂಡರೂ, ಜನತೆಗೆ ತಿಳಿಯುವಂತೆ ಸರ್ವರೆದುರು ಅಕೃತ್ಯವನ್ನೆಸಗಲು ಹೆದರುತ್ತಾನೆ. ಹಿಂಬದಿಯಲ್ಲಿ ಅಪಪ್ರಚಾರದ ಕಹಳೆ ಮೊಳಗಿಸಿದರೂ, ಎದುರು ನಯ ವಿನಯದಿಂದಲೇ ವಿಚಾರಿಸುತ್ತಾನೆ. ಕತ್ತಿ, ದೊಣ್ಣೆ, ಚೂರಿ, ಕೋವಿಗಿಂತಲೂ ಆಡುವ ನಾಲಗೆಗೆ ಹೆದರಿ ಮರ್ಯಾದೆಯ ಮುದ್ದೆಯಾಗುವವರೆ ಹೆಚ್ಚು! ನಾಲಗೆಯೋ ಸರ್ವ ದುಷ್ಕೃತ್ಯಗಳಿಗೂ ಮೂಲ!

ನಡೆದು ಹೋದ ಪ್ರಮಾದ ಜನಸ್ತೋಮದ ಮನದಿಂದ ಮರೆತು ಮಾಯವಾಗುವ ವರೆಗೆ ತಮ್ಮ ಒಲವಿನ ಬಯಕೆಯ ಬಾಯಾರಿಕೆಯನ್ನು ಹತೋಟಿಯಲ್ಲಿರಿಸಿದ್ದರು. ಆದರೆ, ಒಮ್ಮೆ ಎಡವಿದ ನಂತರ ಮತ್ತೆ ಎಡವರಿಸಲು ಮನಸ್ಸು ಕೇಳದು. ಅದರಂತೆ ಇದೀಗ ಗುಪ್ತವಾಗಿ, ಕಳ್ಳತನದಿಂದ ವ್ಯವಹರಿಸಲು ಮುಂದಾಗಿದ್ದಾರೆ–ಪ್ರಣಯ ಪ್ರಸಂಗಿಗಳು!

ಕೊಲೆಯ ಮೂಲದ ಅರಿವಾಯಿತು!

ಸೌಂದರ್ಯ—ಹಣ ಸಂಬಂಧ ಬೆಳೆಸಿತು!

ಹೆಣ್ಣಿನ ಆಸೆಗೆ ಗಂಡು, ತೃಪ್ತಿಯ ತಂಗಾಳಿ ಬೀಸಿದ!

ಕೊಲೆ ಮಾಡಿದ ದೂರ್ತನಿಗೆ ದಂಡನೆಯಾಗಲೇಬೇಕು!

ಯಾರು, ಕೈಯಲ್ಲಿ ಚೂರಿ ಹಿಡಿದು ಪ್ರಸಾದರ ಪ್ರಾಣಾಪಹರಣ ಮಾಡಿರಬಹುದು?

ಯಾವ ಕೈಗೆ ಬೇಡಿ ತೊಡಿಸಬೇಕು?

ಪ್ರಮೀಳೆಯೋ? ಹಯಗ್ರೀವಾಚಾರ್ಯರೇ?

ಸ್ವದುಡಿತದಿಂದ ಹಣಗಳಿಸಿ, ನವ ಶೃಂಗಾರದಿಂದ ಮೆರೆಯುವ ಮಂಗಳಾಂಗನೆಯರ ಮಾಟಕ್ಕೆ ಮಾರುಹೋದ ಕನ್ಯೆ, ತನ್ನ ಪತಿ ಬಯಸಿದ ನಿರಾಡಂಬರಕ್ಕೆ ಕುಪಿತಳಾಗಿ ಪತಿಯನ್ನು ತೀರಿಸಿಬಿಟ್ಟಿರಬಹುದೇ?

ಹೆಣ್ಣು ಪರಾಶ್ರಿತೆ? ತಾನು, ತನ್ನಿಂದ, ತನಗಾಗಿ ಏನನ್ನು ಮಾಡಲಾರಳು ಪರರ ನೆರವು ತೆಗೆದೇ ಜೀವಮಾನವನ್ನು ಕಳೆಯುವಂತಹಳು.

ಹೆಣ್ಣನ್ನು ನಡೆಸುವುದು ಗಂಡು! ಗಂಡಿನ ಬೆಂಬಲ-ಪ್ರೋತ್ಸಾಹ-ಪುರಸ್ಕಾರವಿಲ್ಲದೆ ಯಾವ ಅಚಾತುರ್ಯಕ್ಕೂ ಕೈಯಿಕ್ಕಲಾರಳು!

ಪ್ರಮೀಳೆಯ ಯೌವ್ವನದ ಸುಂದರ ಮುಖ, ಅಚ್ಚುಗಟ್ಟಾಗಿ ಮಾಟವಾಗಿ ಬೆಳೆದ ಮೈಕಟ್ಟು ಕಂಡು ಮಾರು ಹೋದ ಮಾಲೀಕರು ಪ್ರಸಾದರನ್ನು ಕೊಲೆಗೈದು ಪ್ರಸಾದ ಸ್ವೀಕರಿಸಿರಬಹುದೆ?

ಪ್ರಸಾದರ ಕೊಲೆಯಾದ ನಂತರ, ತನ್ನ ಮುಂದಿನ ಜೀವನಕ್ಕಾಗಿ ಬೇರಾವ ದಾರಿ ಕಾಣದೆ, ಆಶ್ರಯ ಬೇಡಲು ಮುಂದಾದ ಪ್ರಮೀಳೆಯನ್ನು ತನ್ನ ಮಾರಕಾಸ್ತ್ರದಿಂದ ಬಂಧಿಸಿ ತಮ್ಮ ಬಳಿ ಇರಿಸಿಕೊಂಡಿರಬಹುದೆ?

ಕಿರು ಸೂಕ್ಷ್ಮ ದೊರೆತ ನಂತರ, ಸತ್ಯಾಸತ್ಯತೆಯನ್ನು ಹುಡುಕಲು ವಿಶೇಷ ಶ್ರಮ ಅನಗತ್ಯವೆಂದು ಮನಸ್ಸಿನಲ್ಲಿಯೇ ಮುಂದಿಗೆ ಮುರಿಯುತ್ತ, ಅದಾಗಲೇ ತೆರೆದು, ಗಿರಾಕಿಗಳಿಗಾಗಿ ಕಾಯುತ್ತಿದ್ದ 'ಅನಂತ ಕೆಫೆ'ಯಲ್ಲಿಯೇ ಕಾಫಿ ತೀರಿಸಿ, ತಮ್ಮ ಮನೆಯ ದಾರಿ ಹಿಡಿದರು.

೬

ಬೇಡದೆ ಬದುಕುವವರು ಅತೀ ವಿರಳ! ತಮ್ಮ ಚಿತ್ತಕ್ಕೆ ಅಗತ್ಯವೆಂದು ಕಂಡುದನ್ನು ಪಡೆಯಲು ತಮ್ಮಲ್ಲಿ ಶಕ್ತಿಯಿಲ್ಲ ಎಂದಾದಾಗ ಅದನ್ನು ಕಾಡಿ ಬೇಡಿಯಾದರೂ ಪಡೆಕೊಂಡು ನೆಮ್ಮದಿ ಪಡೆಯದಿರುವುದಿಲ್ಲ.

ಹಣದ ಅಭಾವವಿದ್ದವರೆಲ್ಲರೂ ಬೇಡುತ್ತೇವೆ! ತಿರುಗಿ ಕೊಡುವ ಶರ್ತದ ಮೇಲೆ, ಒಂದನೆ ತಾರೀಕಿಗೆ ಮರಳಿ ಕೊಡುವೆನೆಂಬ ಭರವಸೆಯ ಮೇಲೆ ಹಣವಂತ ಗೆಳೆಯರಿಂದ ಎರವಲು ಪಡೆದು ತಮ್ಮ ಅಗತ್ಯತೆಯನ್ನು ಪೂರೈಸಿಕೊಳ್ಳುತ್ತೇವೆ.

ಹೊಟ್ಟೆಪಾಡಿಗಾಗಿ ದುಡಿದು ತಮ್ಮ ಕಿರು ಹೊಟ್ಟೆಯನ್ನು ತುಂಬಲಾಗದಂತಹ, ಕುರುಡರು, ಕುಂಟರು, ಅಂಗವಿಹೀನರು, ದುರ್ಬಲರು, ರೋಗಿಗಳು, ಆಸರೆ ತಪ್ಪಿದ ಮುದುಕರು, ಸನ್ಯಾಸಿಗಳು, ತಮ್ಮ ಒಡಲನ್ನು ಬೇಡಿಯೇ ತುಂಬಿಕೊಳ್ಳುವರು. ಒಮ್ಮೆ ಬಿಕ್ಕೆ ಬೇಡಲ್ಸ ಮುಂದಾದರೋ ಮತ್ತೆ ಅವರ ಮೈ ದುಡಿಮೆಗಾಗಿ ಬಗ್ಗಲಾರದು. ಅವರಿಗೆ ತಾಗುವ ಅನಾಥ ಹೆಂಗಸರಲ್ಲಿ ಹುಟ್ಟುವ ಮಕ್ಕಳೂ ಬೇಡಿ ತಿಂದೇ ದಿನಗಳೆಯುವವರು. ಅವರ ಕಷ್ಟಕ್ಕಾಗಿ ಮರುಕಗೊಂಡ ಮಾನಿನಿಯರು ತಮ್ಮ ಸ್ಥಿತಿಗೆ ತಕ್ಕಂತೆ ದಾನಮಾಡಿ ಪುಣ್ಯ ಕಟ್ಟಿಕೊಳ್ಳುತ್ತಾರೆ.

ಇಂತಹ ಭಿಕ್ಷುಕರು ಒಂದೊಂದು ದಿನ, ಒಂದೊಂದು ಬೀದಿಯನ್ನು ಗೊತ್ತು ಹಚ್ಚಿ ಭಿಕ್ಷೆಗಾಗಿ ಮುಂದಾಗುವರು. ನಡೆಯಲು ಶಕ್ತಿಯಿಲ್ಲದವರು, ಜನಸಂಚಾರ ಹೆಚ್ಚಾಗಿರುವ ಮಾರ್ಗದ ಬದಿಯಲ್ಲಿ ಬಿದ್ದುಕೊಂಡು ರಾಗರೋಗವಾಗಿ ಕೂಗಿ ಕರೆದು ರಂಪಾಟ ಮಾಡುತ್ತ ಬೇಡುವರು. ಇನ್ನು ಕೆಲವರು ಹೊಟೇಲು ಬಾಗಿಲಿನಲ್ಲಿಯೋ, ಬಸ್ ಸ್ಟೇಂಡಿನಲ್ಲಿಯೋ, ರೈಲ್ವೇ ನಿಲ್ದಾಣದಲ್ಲಿಯೋ ನಿಂತು ಬೇಡುವರು.

ಪಟ್ಟಣದ ಪ್ರಖ್ಯಾತ ಹೊಟೇಲಾದ 'ಅನಂತ ಕೆಫೆ'ಯ ಎದುರಿಗೆ ಓರ್ವ ಬಡಕಲು ಶರೀರದ, ಹರಕು ಮುರುಕು ಅಂಗಿ ತೊಟ್ಟ ವೃದ್ಧ ಹಾಜರಾದ. ಒಳಹೊರ ಹೋಗುವ ಗಿರಾಕಿಗಳ ಮುಂದೆ ಕೈಚಾಚಿ ಉಪದ್ರಿಸಿದರೆ ತಮ್ಮ ವ್ಯಾಪಾರ ಕಡಿಮೆಯಾಗಬಹುದು, ಬೇಡುವವನನ್ನು ಕಂಡು ಜಿಗುಪ್ಸೆಗೊಂಡು ಬೇರೆ ಹೊಟೇಲಿನತ್ತ ಹೋಗಬಹು

ದೆಂದು ಭಾವಿಸಿದ ಮಾಲಿಕರು, ತಮ್ಮ ಹೋಟೇಲು ಬಾಗಿಲಲ್ಲಿ ಯಾರೂ ನಿಲ್ಲಬಾರದೆಂದು ಬೆದರಿಸಿದರು. ಆದರೆ ಆತ ಕಿವಿಗೊಡಲಿಲ್ಲ. ಹೆದರಿ ಓಡಿಹೋಗಲಿಲ್ಲ. ಬಿಸಿಲಿನ ಬೇಗೆಯಲ್ಲಿ ಮನೆ ಮನೆ ಬಾಗಿಲಿಗೆ ಹೋಗಿ ಬೇಡಿ ಹೊಟ್ಟೆ ತುಂಬಲು ತನ್ನ ಕಾಲಿಗೆ ಶಕ್ತಿ ಇಲ್ಲವೆಂತಲೂ, ಬೇಡಿ ದೊರೆತ ಹಣವನ್ನು ಗಂಟುಕಟ್ಟಿಕೊಂಡಿರಿಸದೆ, ಕಾಫಿ-ತಿಂಡಿಗಾಗಿ ತಮಗೆ ಕೊಡುವುದಾಗಿ ವಾಗ್ದಾನವಿತ್ತ ನಂತರ ಮಾಲಿಕರು ಮಾತನಾಡಲಿಲ್ಲ.

ಹಣದಾಸೆ ಹರಕಲು ಬಾಯಿಯವರನ್ನೂ ಮೌನವಾಗಿರಿಸಿ ಬಿಡುತ್ತದೆ!

ಹಣ ಕಂಡರೆ ಹೆಣ ಬಾಯಿ ತೆರೆಯುತ್ತದೆಯಂತೆ!

ಹಣವೋ — ಹೆಣದಂತಹ ಮನುಷ್ಯರೋ!?

ಎರಡು ದಿನಗಳು ಉರುಳಿದುವು!

ವೃದ್ಧನಿಗೆ ದಯಾವಂತ ಗಿರಾಕಿಗಳು ದಾನ ಮಾಡಿದ ಏಳೆಂಟಾಣೆ ಹೊಟೇಲಿಗೆ ಹೋಗುತಿತ್ತು!

ಮೂರನೆಯ ದಿನ!

ಮೂರು ಗಂಟೆಗೆ ಸರಿಯಾಗಿ ಸರಕಾರಿ ಖಚೇರಿಗೆ ಕಾಫಿ-ತಿಂಡಿ ಸರಬರಾಜು ಅನಂತ ಕೇಫೆಯಿಂದ ನಡೆಯುತಿತ್ತು. ಅಂತೆಯೇ, ಅಂದು ಗ್ಲಾಸ್, ತಿಂಡಿ, ತಟ್ಟೆಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಆಳಿಗೆ ಸೈಕಲ್ ಸವಾರನೋರ್ವನು ಡಿಕ್ಕಿ ಹೊಡೆಯಲು ತಲೆಯ ಮೇಲಿದ್ದುದೆಲ್ಲವೂ ಉರುಳಿ ಪಕ್ಕದ ಚರಂಡಿಯಲ್ಲಿ ಮಣ್ಣುಪಾಲಾಯಿತು. ಗ್ಲಾಸ್ ಗಳೆಲ್ಲವೂ ಒಡೆದು ಚೂರು ಚೂರಾಯಿತು. ಸುಮಾರು ಎಪ್ಪತ್ತು ರೂಪಾಯಿಯಷ್ಟು ನಷ್ಟವಾಯಿತು.

ಡಿಕ್ಕಿ ಹೊಡೆದ ಸೈಕಲ್ ಸವಾರ ಪರಾರಿಯಾಗಿದ್ದ.

ನಡೆದ ಅಚಾತುರ್ಯ ಮಾಲಿಕರ ಮುಂದೆ ವಿಚಾರಣೆಗೆ ಬಂತು!

‘ನೀನು ಬೇಕೆಂತಲೇ, ನನಗೆ ನಷ್ಟವಾಗಬೇಕೆಂದು ತಿಂಡಿ ತಿನಸ್ಸುಗಳೆಲ್ಲವನ್ನೂ ಚರಂಡಿಗೆ ತುಂಬಿರುವಿ! ನಿಮಗೆ ಧನಿಯನ್ನು ಕಂಡರೆ ಯಾವಾಗಲೂ ತಿರಸ್ಕಾರ! ಮಾಡುವ ಕಾರ್ಯದಲ್ಲಿ ಒಂದಿಷ್ಟೂ ಜಾಗ್ರತೆಯಿಲ್ಲ!’

‘ಇಲ್ಲ ಸ್ವಾಮಿ! ನಾನು ಅದಷ್ಟು ಬದಿಯಿಂದಲೇ ಹೊತ್ತುಕೊಂಡು ಹೋಗುತ್ತಿದ್ದೆ. ಆ ಸೈಕಲಿನವನೇ ಒದಿಗೆ ಬಂದು ಡಿಕ್ಕಿ ಹೊಡೆದ’

'ಮಾಡಿದ ತಪ್ಪನ್ನು ಇತರರ ಮೇಲೆ ಹೊರಿಸಿ ಪಾರಾಗಲು ಪ್ರಯತ್ನಿಸುವುದು ಬಹಳ ಸುಲಭ. ಆದರೆ, ಇಂತಹ ಕುಹಕಿಗಳ ಕಾರ್ಯಸ್ಥಾನವನ್ನು ಕಣ್ಣಾರೆ ಕಂಡುಕೊಂಡಿರುವ ನನ್ನಿಂದ ಜಾರಿಕೊಳ್ಳಲು ಮಾತ್ರ ಅಸಾಧ್ಯ. ಯಾರ ಗಂಟು ಹೋದರೆ ನಿಮಗೇನು? ತಿಂಗಳ ಸಂಬಳ ಸಂಪೂರ್ಣವಾಗಿ ಎಣಿಸಿಕೊಳ್ಳುತ್ತೀರಲ್ಲ. ಪರರ ಸೊತ್ತಿನ ಮೇಲೆ ಒಂದಿಷ್ಟು ಜಾಗ್ರತೆಯಿಲ್ಲ. ನಿಮಗೆ ಬುದ್ಧಿ ಬರಬೇಕಾದರೆ ನಷ್ಟವನ್ನು ಪೂರ್ತಿ ಭರ್ತಿ ಮಾಡಿಕೊಳ್ಳಬೇಕು. ನಿನ್ನ ತಿಂಗಳ ಸಂಬಳದಿಂದಲೇ ತುಂಬಿಕೊಳ್ಳುತ್ತೇನೆ.

ಆಳು ತನ್ನದೇನೂ ತಪ್ಪಿಲ್ಲವೆಂದು ಮನಕರಗುವಂತೆ ಬೇಡಿಕೊಂಡರೂ, ಕಲ್ಲಿನಂತೆ ಗಟ್ಟಿ ಮನಸ್ಸು ಮಾಡಿಕೊಂಡಿದ್ದ ಮಾಲಿಕರ ಮನಸ್ಸು ಬದಲಾಗಲಿಲ್ಲ. ಎಪ್ಪತ್ತು ರೂಪಾಯಿ ಎಂದರೆ ಮೂರುವರೆ ತಿಂಗಳ ಸಂಬಳ! ತನ್ನನ್ನು ನಂಬಿಕೊಂಡು ಬದುಕುತ್ತಿರುವ ಮಡದಿ-ಮಗುವಿನ ಗತಿಯೇನು? ಆರೇಳು ತಿಂಗಳಿನಿಂದ ಸೀರೆ ಬೇಕೆಂದು ಕಾಡುತ್ತಿದ್ದವಳಿಗೆ ಸಂಬಳ ದೊರೆತೊಡನೆ ತಂದುಕೊಡುತ್ತೇನೆಂದು ಸಮಾಧಾನಿಸುತ್ತಾ ಬಂದಿದ್ದರೂ ತಂದು ಕೊಡಲು ಸಾಧ್ಯವಾಗಿರಲಿಲ್ಲ. ಮಗುವಂತೂ ಹರಿದ ಅಂಗಿಯಲ್ಲೇ ದಿನ ಕಳೆಯುತ್ತಿದೆ. ಸರಿಯಾಗಿ ಉಣಲು ಗತಿಯಿಲ್ಲ...ಅದರೆಡೆಯಲ್ಲಿ ಎಪ್ಪತ್ತು ರೂಪಾಯಿಯ ಕಡಿತವೆಂದರೆ — ಸಂಬಳ ದೊರೆಯಲಿಲ್ಲವೆಂದು ಹೊಟ್ಟೆ ಕೇಳದೆ ಇರುತ್ತದೆಯೇ ?

ಮಾಲಿಕರಿಗೆ ಬಡವನ ದುಃಖ ಕೇಳಿಸಿದಂತೆಯೇ ತೋರಲಿಲ್ಲ. ಪೆಚ್ಚು ಮೋರೆಯಿಂದ ದುಃಖಿಸುತ್ತಾ ನಿಂತಿದ್ದ ಆಳನ್ನು ದಿಟ್ಟಿಸಿಯೂ ನೋಡುತ್ತಿರಲಿಲ್ಲ.

ಪರರ ಕಷ್ಟಕ್ಕಾಗಿ ತಾವೇಕೆ ಮರುಗಬೇಕು ?

ಯಾರ ಮನೆಯ ಒಲೆಯಲ್ಲಿ ಬೆಂಕಿ ಉರಿಯದಿದ್ದರೆ ತಮಗೇನು ?

ನಿಂತು ಕೈಕಟ್ಟಿ ಮರುಕದಿಂದ ಆಲೋಚಿಸುತ್ತಿದ್ದ ಆಳಿಗೆ ಮನದಲ್ಲಾವುದೋ ಭಾವನೆ ಮಿಂಚಿ ಮಾಯವಾಯಿತು. ಕಣ್ಣಿನಿಂದ ಹನಿಹನಿಯಾಗಿ ಉದುರುತ್ತಿದ್ದ ನೀರು ತಡೆದು ನಿಂತಿತು. ಮುದುಡಿದ ಮುಖ ಚೇತರಿಸಿಕೊಂಡಿತು. ತಾನು ಜಾಗ್ರತೆವಹಿಸಿ ನಿಷ್ಠೆಯಿಂದ ನುಡಿದರೂ ತನ್ನದೇ ಅಜಾಗ್ರತೆ ಎಂದು ತೀರ್ಪಿತ್ತು ದಂಡನೆಯನ್ನು ವಿಧಿಸಿದ ಮಾಲಿ

ಕರಿಗೆ, ಅವರ ಹಿರಿ ಅಪರಾಧವನ್ನು ಹೊರಗೆಳೆದರೆ ತಾನು ಗೆಲ್ಲಬಹುದು ಎಂಬ ಕಿಣಕು ಧೈರ್ಯ ಮನದಲ್ಲಿ ಮೂಡಿತು. ತನ್ನ ಎಡ ತೋಳಿಗೆ ಮೂಗೊರಸಿಕೊಂಡು:

'ನಾನು ತಪ್ಪುಗಾರನಲ್ಲ' ಪುನಃ ಪ್ರಸ್ತಾಪಿಸಿದ ಆಳು.

ಕ್ರೋಧಗೊಂಡು ಕೆಂಕಿಡಿಯನ್ನು ಕಾರುತ್ತ:

'ನಿನ್ನ ವಾದ ಬೇಡ, ಕೆಲ್ಸ ನೋಡು. ಅಧಿಕ ಪ್ರಸಂಗಿ. ತಪ್ಪು ಮಾಡಿ, ತಪ್ಪಿಸಿಕೊಳ್ಳಲು ಪ್ರಯತ್ನಿಸುವುದು ಬೇಡ' ಅಧಿಕಾರಯುತ ದರ್ಪವಾಣಿ ಘರ್ಜಿಸಿತು.

'ನನ್ನ ಸಂಬಳ ಕಳೆಯ ಬೇಡಿ. ನನ್ನ ಹೆಂಡತಿ ಮಗುವಿನ ಹೊಟ್ಟೆಗೆ ಬರೆ ಎಳೆಯ ಬೇಡಿರಿ' ದೀನತೆಯಿಂದ ಕಲ್ಲು ಹೃದಯವೂ ಕರಗಿ ನೀರಾಗುವಂತೆ ಬೇಡಿದ.

'ಒಡೆದ ಗ್ಲಾಸಿಗೆ—ಹಾಳಾದ ತಿಂಡಿಗೆ ಯಾರು ಹೊಣೆ. ನಿನ್ನಪ್ಪ ಆಸ್ತಿ ಏನಾದರೂ ಈ ಹೊಟೇಲಿನ ಹೆಸರಿನಲ್ಲಿ ಬಿಟ್ಟು ಹೋಗಿಲ್ಲ'

ಹಿರಿಯರ ವಿಚಾರವೆತ್ತಿ ಹಂಗಿಸಿದನ್ನು ಕೇಳಿ ರೇಗಿದ ಆಳು:

'ನನ್ನ ಅಪ್ಪ ಬದುಕಿದ್ದಿದ್ದರೆ ನಾನು ಈ ಹೊಟೇಲಿಗೆ ದುಡಿಯಲು ಬರುತ್ತಿರಲಿಲ್ಲ. ಸ್ವರ್ಗಸ್ಥರಾದವರ ಅವಹೇಳನೆ ನಿಮಗೂ ಅಗತ್ಯವಿಲ್ಲ.'

'ಬಹಳ ನಾಲಗೆ ಬೆಳೆಸುತ್ತಿರುವಿ'

'ನೀವಾಗಿ ಮಾತಾಡಿಸುತ್ತಿರುವಿರಿ!'

'ನೀನೇನು ಹೇಳಿದರೂ ನನ್ನ ಮನ ಬದಲಾಗಲಾರದು'

'ನಾನು ನಿಮಗೆ ಬೇಕೆಂತಲೇ ನಷ್ಟ ಮಾಡಲಿಲ್ಲ'

'ಬೇಕೋ-ಬೇಡವೋ ನಾನರಿಯೆ! ನನ್ನೆದುರು ನಿನ್ನ ಮುಂದಿನ ವಾದ ಬೇಡ! ನನ್ನ ತೀರ್ಪಿಗೆ ಯಾವ ಅಪೀಲು ಇಲ್ಲ. ನಿನ್ನ ಸಂಬಳದಿಂದಲೇ ಎಪ್ಪತ್ತು ರೂಪಾಯಿ ಖರ್ಚುಮಾಡಿಕೊಳ್ಳುತ್ತೇನೆ. ನೀನು ಮೂರು ತಿಂಗಳು ಪುಕ್ಕಟೆಯಾಗಿ ದುಡಿಯಬೇಕು'

'ನೀವು ಹೀಗೆ ಬಡವರ ಹೊಟ್ಟೆಗೆ ಹೊಡೆಯುತ್ತೇನೆ ಎಂಬ ಹಟ ಹಿಡಿದರೆ, ನಾನು ಪ್ರಸಾದರನ್ನು......ಪೋಲೀಸರಿಗೆ ತಿಳಿಸುತ್ತೇನೆ' ತಡೆ ತಡೆಯಾಗಿ ತಡವರಿಸುತ್ತ ನುಡಿದ.

'ಪ್ರಸಾದ್' ಎಂದೊಡನೆ ಬೆಚ್ಚಿಬಿದ್ದ ಮಾಲಿಕರೂ ಅವನಾಡಿದ ಮಾತನ್ನು ಯಾರಾದರೂ ಗಮನಿಸಿದರೇ ಎಂದು ಸುತ್ತಲೂ ಕಣ್ಣೋರಳಿಸಿ

ನೋಡಿದರು. ಯಾರೂ ಇಲ್ಲ. ಬದುಕಬೇಕೆಂದು ಬಯಸಿದ ಜೀವ ಬದುಕಿಗಾಗಿಯೇ ಬಯಸಿತು.

ಮಾಲಿಕರ ದರ್ಪಕ್ಕೆ ತಣ್ಣೀರೆರಚಿದಂತಾಯಿತು! ಕ್ರೋಧ ಒಮ್ಮೆಲೆ ಕರಗಿ ನೀರಾಯಿತು! ಮುಖದಲ್ಲಿ ಬೆವರು ಮೂಡಿತು! ಕೈಕಾಲು ನಡುಗ ತೊಡಗಿತು! ಹೆದರಿಕೊಂಡ ಮಾಲಿಕರು ಆಳಿನ ಮುಖವನ್ನೇ ನೋಡುತ್ತಾ:

'ಇನ್ನು ಮುಂದೆ ಬಹಳ ಜಾಗ್ರತೆಯಿಂದ ಕೆಲಸ ನೋಡಿಕೊಂಡಿರು. ನಿನ್ನ ನಾಲ್ಕು ವರ್ಷದ ಸರ್ವಿಸ್ಸಿನಲ್ಲಿ ಹೀಗೆ ಅಜಾಗ್ರತೆಯಿಂದ ವರ್ತಿಸಿದುದಿಲ್ಲ. ಹಾಗಾಗಿ ನಿನಗೆ ಈ ಬಾರಿ ಮಾಫಿ ಮಾಡಿರುವೆನು. ಇನ್ನು ಮುಂದೆ ಸಂಸ್ಥೆಗೆ ನಷ್ಟ ಬರುವಂತಹ ಕಾರ್ಯ ಮಾಡಬೇಡ' ಎಂದು ಸಮಾಧಾನಿಸಿ ಕಳುಹಿಸಿದರು.

'ಆಯಿತು' ಎನ್ನುವಂತೆ ತಲೆಯಾಡಿಸುತ್ತಾ ಸಂತೋಷದಿಂದ ತನ್ನ ಕೆಲಸದ ಮೇಲೆ ಹೊರಟು ಹೋದ.

ತನ್ನ ಮೋಸ ಬಯಲಾಗದಿರಲಿ ಎಂದು ಗಲ್ಲದ ಎದುರಿನ ಗೋಡೆಯಲ್ಲಿದ್ದ ಗಣಪತಿ ದೇವರಿಗೆ ಕೈ ಮುಗಿದರು ಹಯಗೀವಾಚಾರ್ಯರು.

ತನ್ನ ಜಯಕ್ಕಾಗಿ ತಾನೆ ಮೆಚ್ಚಿಕೊಂಡ ಆಳು. ಉಳಿದ ಕೆಲಸಗಾರರಿಗೂ, ದಂಡನೆ ತಪ್ಪಿದ್ದು ಸಂತೋಷವೇ ಆಯಿತು.

ಪ್ರಸಾದರ ಕೈ ಕೆಳಗೆ ದುಡಿದು, ಅವರ ಸೌಹಾರ್ದದಲ್ಲಿ ಬೆಳೆದ ಕೆಲಸಗಾರರ ಗುಂಪಿನಲ್ಲಿ ಯಾವ ವೈಮನಸ್ಸು ಇರಲಿಲ್ಲ. ಮನಸ್ಸಿನ ಬ್ರಾಂತಿಗಾಗಿ ಚಿಕ್ಕ ಪುಟ್ಟ ಜಗಳವಿರಲಿಲ್ಲ. ಅವರೆಲ್ಲರೂ ಒಂದೇ ಮನೆಯ ಬಂಧುಗಳಂತೆ ಬದುಕಿಕೊಂಡಿದ್ದರು.

ಅವರಲ್ಲಿ ಒಗ್ಗಟ್ಟಿತ್ತು!

೧೦

ಬೇಡಲು ಬರುತ್ತಿದ್ದ ಭಿಕ್ಷುಕ ಮಾಯವಾದ!

ಅಂದು ಭಾನುವಾರ! ಎಂದಿಗಿಂತಲೂ ಹೆಚ್ಚಾಗಿಯೇ ವ್ಯಾಪಾರ ನಡೆದಿತ್ತು. ಜನ ಕಿಕ್ಕಿರಿದು ಸೇರಿದ್ದರು. ಪ್ರತಿ ಭಾನುವಾರ ಬೆಳಿಗ್ಗೆ ತಯಾರಾಗುತ್ತಿದ್ದ ಸ್ಪೆಶಲ್ ಕ್ಷೀರ ಜನರನ್ನು ವಿಶೇಷವಾಗಿ ಆಕರ್ಷಿಸುತಿತ್ತು.

ಹೋಗಿ ಬರುವ ಜನರನ್ನು ಎಚ್ಚರಿಕೆಯಿಂದ ನೋಡುತ್ತ, ಕಾಫಿ ಕುಡಿದು ಯಾರಾದರೂ ಬಿಲ್ ಕೊಡದೆ ಮೋಸ ಮಾಡಿ ಹೊರಟು ಹೋಗುವರೋ ಎಂದು ಹೊಂಚುಹಾಕಿ ನೋಡುತ್ತಾ ಹಣ ಎಣಿಸಿಕೊಳ್ಳುತ್ತಿದ್ದರು ಮಾಲಿಕರು.

ಮೇಜಿನ ಮೇಲೆ ಕಾಲಿಯಾಗಿ ಇರಿಸಿದ್ದ ಗ್ಲಾಸ್-ಪ್ಲೇಟುಗಳನ್ನು ತೆಗೆಯುತ್ತಿದ್ದ ಕೆಲ್ಸದ ಆಳಿನೊಡನೆ ಫಲಹಾರ ತೀರಿಸಿ, ಬೀಡಿ ಸೇದುತ್ತಾ ಹೊಗೆ ಬಿಡುತ್ತಿದ್ದ ಗಿರಾಕಿಯೊಂದು ಮಳಿಯಾಳ ಭಾಷೆಯಲ್ಲಿ ಮಾತನಾಡಲು ಮುಂದಾದುದನ್ನು ಕಂಡು, ಅಪರಿಚಿತನಾರೆಂದು ಅಚ್ಚರಿಗೊಂಡನು—ಆ ಆಳು.

ಅಪರಿಚಿತ, ಮುಖ ಕಂಡ ಗುರುತಿಲ್ಲದಿದ್ದರೂ, ತೀರಾ ಚಿರಪರಿಚಿತನಂತೆ ಮಾತು ಬೆಳಸಿ, ತನ್ನ ಪರಿಚಯದ ಹೆಸರು ತಿಳಿಸಿ, ಹಿಂದೆ ತಾವಿಬ್ಬರೂ ಒಂದೇ ಹೊಟೇಲಿನಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದುದೆಂದೂ ತಮ್ಮ ಗೆಳೆತನ ಮುರಿಯಬಾರದೆಂದೂ ಒಟ್ಟಿಗೆ ನಿಂತು ತೆಗೆದ ಭಾವಚಿತ್ರ ತನ್ನೊಡನೆ ಈಗಲೂ ಇದೆಯೆಂತಲೂ ಕೆಲ್ಸದೆಡೆಯಲ್ಲಿ ಇಲ್ಲಿ ಮಾತು ಬೆಳೆಸುವುದು ಅನುಚಿತವಾಗಿ, ಮಾಲಿಕರ ಕ್ರೂರ ದೃಷ್ಟಿಗೆ ಒಳಗಾಗಬೇಕಾಗಬಹುದೆಂತಲೂ, ಸಂಜೆ ಬಿಡುವಿನ ಸಮಯದಲ್ಲಿ ಗಾಂಧಿ ಮೈದಾನಿಗೆ ಖಂಡಿತಾ ಬರಬೇಕೆಂದು ಒತ್ತಾಯಪೂರ್ವಕವಾಗಿ ಆಮಂತ್ರಿಸಿ, ಬರುವೆನೆಂಬ ಭರವಸೆ ಪಡೆದುಕೊಂಡು ಹೊರಟು ಹೋದನು.

ತನ್ನ ಬಿಲ್ಲಿನ ಹಣ ಕೊಡುತ್ತಿದ್ದಾಗ, ತಮ್ಮ ಕೆಲ್ಸದಾಳಿನೊಡನೆ ಮಾತಾಡಿದ ವ್ಯಕ್ತಿಯಾರೆಂದು ಅವನನ್ನು ತಿವಿಯುವ ನೋಟದಿಂದ

ನೋಡಿದರು, ಅವನಾರೆಂದು ಕಂಡು ಹಿಡಿಯಲು ಮಾಲೀಕರಿಗೆ ಸಾಧ್ಯವಾಗಲಿಲ್ಲ.

ಆ ಮಲಯಾಳೀಕಾರನ್ ಯಾರು? ಅವನ ಹೆಸರೇನಾಗಿರಬಹುದು! ಕೆಲ್ಸದಾಳಿಗೆ ಎಷ್ಟು ಯೋಚಿಸಿದರೂ ಬಗೆಹರಿಸಲಾಗಲಿಲ್ಲ. ಅವನನ್ನೆಲ್ಲಿ ಕಂಡಿದ್ದೆ—ತನ್ನೊಡನೆ ಎಲ್ಲಿ ದುಡಿದಿದ್ದ ಎಂದು ಮನನ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ತಾನೂ ದುಡಿಮೆಗಾಗಿ ಹಲವಾರು ಊರು ಸುತ್ತಿದವನು. ಎಲ್ಲಿಯೂ ಆರೇಳು ತಿಂಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದವನಲ್ಲ. ಆದರೆ ಇಲ್ಲಿಗೆ ಬಂದವ ಮಾತ್ರ, ಪ್ರಸಾದರ ಕರುಣಾಪೂರಿತ ದೃಷ್ಟಿ, ಮೇಲ್ವಿಚಾರಗಳಿಂದಾಗಿ, ಮಾಲಿಕರು ಯಾವ ತಂಟೆಗೂ ಬಾರದಿದ್ದ ಕಾರಣ ನಾಲ್ಕು ವರ್ಷಕಾಲ, ಬೇರೆಡೆ ಹೊರಡುವ ಮನಸ್ಸು ಮಾಡದೆ ಸ್ಥಿರ ನೆಲೆ ಹಿಡಿದಿದ್ದ.

ನಾಲ್ಕು ವರ್ಷಗಳ ಹಿಂದಿನ ಕತೆ—ಅದರಲ್ಲೂ ತಾತ್ಕಾಲಿಕವಾಗಿ ಆಗಿ ಹೋದ ಪರಿಚಯವನ್ನು ನೆನೆಯಲು ಸಾಧ್ಯವಿದೆಯೇ? ಮಾನವನ ಪರಿಚಯದ ಚಿತ್ರ ಮನದಲ್ಲಿ ನಿಂತಿರಬೇಕಾದರೆ ಅವನನ್ನು ಆಗ್ಯಾಗ್ಯೆ ನೋಡುತ್ತಿರಬೇಕು. ಇಲ್ಲದಿದ್ದರೆ ಅವನ ಮುಖದ ಗುರುತೇ ಮರೆತು ಹೋಗಬಹುದು.

ಅವನಾಗಿರಬಹುದು ಎಂದು ತಿಳಿದುಕೊಳ್ಳುವ ಕುತೂಹಲದಿಂದ ಅಪರಿಚಿತ ಗೆಳೆಯನ ಭೇಟಿಗಾಗಿ ಮುಂದಾದ. ಹಳೆಯ ಆತ್ಮೀಯ ಸ್ನೇಹಿತನಾದರೆ ಬರೀ ಮಾತಿನಿಂದಲೇ ಮುಕ್ತಾಯವಾಗದೆ ಸ್ವಲ್ಪ ಗೆಲುವಾಗಿಯೋ, ಹೊಟೇಲೋ, ಸಿನೇಮವೋ ನೋಡಿಕೊಂಡು ಒಂದೆರಡು ತಾಸು ಸಂತೋಷದಿಂದಿರಬೇಕೆಂದು ನಿಶ್ಚಯಿಸಿ ಮಾಲಿಕರಿಂದ ಎರಡು ರೂಪಾಯಿ ಮುಂಗಡ ಪಡಕೊಂಡು ಹೇಳಿದ ಸಮಯಕ್ಕೆ ಸರಿಯಾಗಿ ಮೈದಾನಿನಲ್ಲಿ ಹಾಜರಾದ. ಮಲಯಾಳಿ ಮಾತ್ರ ಭಾಷೆಯ ಪರಿಚಿತ ಅಲ್ಲಿಯೇ ಕಾದು ಕುಳಿತಿದ್ದು ಗೆಳೆಯನ ಆಗಮನವನ್ನೇ ನಿರೀಕ್ಷಿಸುತ್ತಿದ್ದ.

ಎದುರು ಬಂದು ನಿಂತ ಆಳನ್ನು ನಗುತ್ತಾ ಕುಳಿತುಕೊಳ್ಳುವಂತೆ ಕಣ್ಣು ಸನ್ನೆಯಿಂದ ಸೂಚಿಸಿ:

"ಪ್ರಸಾದರನ್ನು ಕೊಂದವರಾರು?"

ಪ್ರಶ್ನೆ ನೇರವಾಗಿತ್ತು! ಮಾತು ಮಲಯಾಳಿಯಲ್ಲಾಗಿರದೆ ಕಸ್ತೂರಿ ಕನ್ನಡದಲ್ಲಿಯೇ ಹರಿದಿತ್ತು!

ಬೆಚ್ಚಿ ಬಿದ್ದು ಬೆರಗುಗಣ್ಣಿನಿಂದ ನೋಡುತ್ತಾ ತನಗೇನೂ ಗೊತ್ತಿಲ್ಲವೆಂಬಂತೆ ತಲೆ-ಕೈ ಅಲ್ಲಾಡಿಸಿ ಸನ್ನೆಯಿಂದ ನುಡಿದ.

"ನೀನು ನನ್ನಲ್ಲಿ ಸತ್ಯವನ್ನು ಮರೆಮಾಚಿ ಮೈಮರೆಸಿಕೊಂಡೇನು ಎಂದು ಗ್ರಹಿಸಬೇಡ. ನಾನು ಸಮಗ್ರ ವಿಚಾರವನ್ನು ಸಂಗ್ರಹಿಸಿಕೊಂಡೇ ನಿನ್ನನ್ನು ಉಪಾಯದಿಂದ ಇಲ್ಲಿಗೆ ಬರಮಾಡಿಕೊಂಡಿರುವೆನು. ನಿಜಾಂಶವನ್ನು ತಿಳಿಯಪಡಿಸಿದರೆ, ನಿನಗೆ ಶಿಕ್ಷೆಯಾಗದೆ ಜೈಲಿನ ನರಕವಾಸ ತಪ್ಪಬಹುದು. ಇಲ್ಲದಿದ್ದರೆ ನಿನ್ನನ್ನು ಈಗಲೇ ಕರಕ್ಕೊಂಡು ಹೋಗಿ, ಕೊಲೆಗಾರನೆಂದು ಸೆರೆಮನೆಯೊಳಗೆ ಸೇರಿಸಿ ಶಿಕ್ಷೆಗೆ ಗುರಿಪಡಿಸುವೆನು.

"ನನಗೆ, ಸಿಜವಾಗಿಯೂ ತಿಳಿಯದು"

ಸ್ವಾಮಿ ನಿಷ್ಠನೆಂದೆಣಿಸಿ ಕೊಂಡ ಸೇವಕ, ತನ್ನ ಯಜಮಾನ ಮಾಡಿದ ಅಕೃತ್ಯವನ್ನು ಅರಿತಿದ್ದರೂ ಸತ್ಯ ಸಂಗತಿಯನ್ನು ಬಹಿರಂಗವಾಗಿ ಹೇಳಿ ಬಿಡುವುದಾದರೂ ಹೇಗೆ? ಇವನಾರು? ಗೂಢವನ್ನೆಲ್ಲಾ ಅರಿತಿರುವೆನೆಂದು ಅರುಹುವ ಇವನಿಗೆ ನಿಜವಾಗಿ ನಡೆದ ಕೃತ್ಯದ ಅರಿವಿರಬಹುದೆ? ಬರೀ ಸಂಶಯದಿಂದ ಬಾಯಿ ಬಿಡಿಸಲು ಸಂಚು ಹೂಡುತ್ತಿರುವನೋ—ಏನೋ? ಮುಂದೆ, ಇವನೊಡನೆ ಮಾತು ಬೆಳಸಿ, ಇನ್ನಾವ ಆಪತ್ತನ್ನು ಅನುಭವಿಸಲಿದೆಯೋ ಎಂಬ ಬೆದರಿಕೆ ಆ ಆಳಿಗೆ ಆಗದಿರಲಿಲ್ಲ. ಪರಿಚಿತನಂತೆ ನಟಿಸಿದವನ ಬಳಿ ಬರಲೇ ಬಾರದಿತ್ತು ಎಂದೆಣಿಸಿದನು.

ಕ್ರೂರವಾಗಿ ದಿಟ್ಟಿಸಿದ ಪತ್ತೇದಾರರು:

"ನಾನಾರೆಂದು ಗ್ರಹಿಸಿಕೊಂಡಿರುವಿ? ಪತ್ತೇದಾರಿ ಪುಟ್ಟಣ್ಣ! ನನ್ನ ಕೈಯ ಹಿಡಿತಕ್ಕೆ ಸಿಕ್ಕಿಕೊಂಡ ನಂತರ ಪಾರಾಗಲು ಕನಸ್ಸು—ಮನಸ್ಸಿನಲ್ಲಿಯೂ ನೆನಸಬೇಡ! ಏನು ಅರಿಯದ ಮಗುವಿನಂತೆ ವರ್ತಿಸಬೇಡ! ವರ್ತಿಸಿ ಪ್ರಯೋಜನವೂ ಇಲ್ಲ! ಮೊನ್ನೆ ಗ್ಲಾಸುಗಳು ಒಡೆದು ಹೋದಾಗ ನೀನು ಧನಿಯ ಎದುರು 'ಪ್ರಸಾದರ' ಪ್ರಕರಣದ ಸುಳಿವಿತ್ತು, ಅವರ ಬಾಯಿ ಮುಚ್ಚಲಿಲ್ಲವೆ? ಹೊರ ನಿಂತು ಭಿಕ್ಷೆ ಬೇಡುತ್ತಿದ್ದ ವೃದ್ಧನಾರು? ನಾನಲ್ಲವೆ! ನನ್ನಲ್ಲಿ ಮುಚ್ಚು ಮರೆಬೇಡ. ಹೇಳು, ಪ್ರಸಾದರನ್ನು ಕೊಂದವರು ನಿನ್ನ ಧನಿಗಳೇ ಅಲ್ಲವೆ ?

ಇವರೊಡನೆ ಸುಳ್ಳಿನ ಬೇಳೆ ಬೇಯಲಾರದೆಂದು ಮನಗಂಡ ಆಳು ಹೌದೆಂದು ತಲೆಯಲ್ಲಾಡಿಸಿದ.

"ಏಕೆ ಕೊಲೆ ಮಾಡಿದರು? ಪ್ರಸಾದರು ಮಾಲಿಕರಿಗೆ ಏನಾದರೂ ಹಣದಲ್ಲಿ ಮೋಸ ಮಾಡಿದರೆ?"

"ಇಲ್ಲ"

"ಅವರೊಳಗೇನಾದರೂ ಜಗಳವಾಯಿತೆ?"

"ಇಲ್ಲ"

"ಮತ್ತೇಕೆ?"

"ಗುಟ್ಟಾಗಿ ನಡೆಯುತ್ತಿದ್ದ ವ್ಯವಹಾರ ರಟ್ಟಾಯಿತೆಂದು"

"ಅಂದರೆ"

"ನಮ್ಮ ರಾಯರಿಗೂ-ಪ್ರಮೀಳಮ್ಮನವರಿಗೂ ಸ್ನೇಹ ಬೆಳೆದಿದ್ದುದರಿಂದ ಅದು ಪ್ರಸಾದರಿಗೆ ಕಾರಣಾಂತರದಿಂದ ತಿಳಿದು ಹೋಗಲು, ತಾನು ತನ್ನ ಕೈ ಕೆಳಗೆ ದುಡಿಯುವವನ ಹೆಂಡತಿಯನ್ನು ರಮಿಸಿದೆ ಎಂಬ ಹೀನತನ ಪರಸ್ಪರ ಮುಖ ಬಡಿಯುತ್ತಿರಬಾರದು ಎಂದು ನೆನೆದು ಪ್ರಸಾದರನ್ನು ತೀರಿಸಿಬಿಟ್ಟರು."

"ಆದರೆ, ಕೊಲೆಯೊಂದಿಗೆ ಪ್ರಮೀಳೆಯು ಬಂಧಿತಳಾಗಿದ್ದಳಲ್ಲ! ಅವಳಿಗೆ ಪ್ರಜ್ಞೆ ಬರಬೇಕಾದರೆ ಐದಾರು ಗಂಟೆ ಡಾಕ್ಟರರು ಶ್ರಮವಹಿಸಬೇಕಾಯಿತಲ್ಲ"

"ಸ್ವಾಮಿ, ನಾನು ಕಡು ಬಡವ! ನನ್ನ ಹೊಟ್ಟೆಗೆ ಹೊಡೆಯಬೇಡಿರಿ. ನಾನು ನಿಮಗೆ ಹೇಳಿದ ವಾರ್ತೆ ರಾಯರಿಗೆ ತಿಳಿದರೆ ಅವರು ನನ್ನನ್ನು ಸುಮ್ಮನೆ ಬಿಡುತ್ತಾರೆಯೇ? ನನ್ನನ್ನು ಕೆಲಸದಿಂದ ತೆಗೆದು, ಹೊರಗೋಡಿಸಬಹುದು!"

"ಬೆದರಬೇಡ. ನೀನು ಅಲ್ಲಿಂದ ಹೊರ ಬರುವುದೇ ಉತ್ತಮ. ನಿನಗೆ ಗುಪ್ತ ವಿಚಾರದ ಅರಿವಿದೆ ಎಂದು ತಿಳಿದ ಅವರು, ಒಂದಲ್ಲ ಒಂದು ದಿನ ನಿನ್ನನ್ನು ತೀರಿಸಿ ಬಿಡಲು ಹಿಂಜರಿಯಲಾರರು"

"ನನ್ನ ಕೊಲೆಯೇ?"

"ಯಾಕಾಗಬಾರದು? ಮನುಷ್ಯನನ್ನು ನಂಬುವುದು ಕಷ್ಟ!"

"ಅವರು ಅಷ್ಟು ಕ್ರೂರಿಗಳಲ್ಲ"

"ಮನುಷ್ಯನನ್ನು ನಂಬಬಹುದು. ಆದರೆ ಅವನ ಮನಸ್ಸನ್ನು ನಂಬಲಸಾಧ್ಯ. ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಮನಸ್ಸಿನೊಳಗಾವ ಗೊಂದಲವಾಗುತ್ತಿದೆ ಎಂದು ತಿಳಿಯುವುದು ಕಷ್ಟ"

"ನೀವು ಅವರಿಗೆ, ನಾನೇ ಈ ವಾರ್ತೆ ತಿಳಿಸಿದವನೆಂದು ಹೇಳುವು ದಿಲ್ಲವಲ್ಲ!"

"ನಿನಗೇಕೆ ಈ ಒಣ ಬೆದರಿಕೆ"

"ಕೆಲಸ ಹೋದರೆ?

"ಶರೀರದಲ್ಲಿ ಶಕ್ತಿಯಿರುವ ತನಕ ಎಲ್ಲಿಯಾದರೂ ದುಡಿದು ಜೀವಿಸಬಹುದು. ಇಂತಹ ನೀಚ ಮನೋಪ್ರವೃತ್ತಿಯವರಡಿಯಲ್ಲಿ ದುಡಿಯುವುದರ ಬದಲು ಉಪವಾಸ ಬಿದ್ದಿರುವುದೇ ಲೇಸು! ಸತ್ಯಕ್ಕೆ ಸಾವಿಲ್ಲ! ಧನಮದದಿಂದ ಜನತೆಯನ್ನು ವಂಚಿಸುವ ಮದಾಂಧರು ಎಂತಹ ಹೀನ ಕೃತ್ಯಕ್ಕೂ ಹೇಸುವವರಲ್ಲ ಎಂದಾಯಿತು! ಬಡವರ ಶಕ್ತಿ ಹೀರುವ ಧನಿಕನವನು! ನೀನಂದು ಈ ರಹಸ್ಯದ ನುಡಿ ಎತ್ತದಿರುತ್ತಿದ್ದ್ದರೆ, ನೀನು ಮೂರು ತಿಂಗಳ ಸಂಬಳವಿಲ್ಲದೆ ದುಡಿಯಬೇಕಿತ್ತು. ಈ ಕೊಲೆಯ ಪೂರ್ವೋತ್ತರವನ್ನು ತಿಳಿಸು. ನಾನೇ ನಿನಗೆ ಸಹಾಯ ಮಾಡುತ್ತೇನೆ"

"ತನ್ನ ಶರೀರವನ್ನೇ ಸಮರ್ಪಿಸಿ ತೃಪ್ತಿ ಪಡಿಸಿ, ಸ್ವರ್ಗ ಸುಖವನ್ನಿತ್ತ ಅಪ್ಸರೆಗಾಗಿ ರಾಯರು ಹೂಡಿದ ಜಾಲವಿದು! ಅವರ ನಡೆ ನುಡಿಯನ್ನೇ ಗುಟ್ಟಾಗಿ ನಿರೀಕ್ಷಿಸುತ್ತಿದ್ದ ನಾನು, ಅವರು ತಮ್ಮ ಗುಪ್ತ ಪ್ರಣಯ ಬಯಲಾಯಿತೆಂದು ಬೆದರಿದಾಗ ರಾಯರು ಮತ್ತು ಪ್ರಮೀಳಮ್ಮ ಗುಪ್ತವಾಗಿ ಮಾತಾಡಿಕೊಂಡುದನ್ನು ನಾನು ಕೇಳಿರುವೆನು"

"ಪ್ರಮೀ! ನಮ್ಮ ವ್ಯವಹಾರ ಬಯಲಾಯಿತು! ನಿನ್ನನ್ನೇ ನಂಬಿ, ನಿನ್ನಲ್ಲಿ ಇರಿಸಿದ್ದ ಅಗಾಧ ಪ್ರೇಮವನ್ನು ನಾನು ಹೇಗೆ ಮರೆಯಲಿ. ನೀನೆಂದರೆ ನನಗೆ ಪಂಚಪ್ರಾಣ! ನೀನಿಲ್ಲದೆ ನಾನು ಕಾಲಹರಣ ಮಾಡಲಾರೆ. ಕೆಲವು ದಿನಗಳ ವರೆಗೆ ಸುಖವಿತ್ತು ಸ್ವರ್ಗಸ್ಥಳದ ಮುದಗಿಂತಲೂ ಮಿಗಿಲಾದ ಸುಖವನ್ನು ನಿನ್ನಿಂದ ನಾನು ಪಡೆದಿರುವೆನು ಎಂದಾಗ ಪ್ರಮೀಳಮ್ಮ ತನ್ನ ಗಂಡನನ್ನು ತುಂಬಾ ಜರೆದು, ನೀವೇ ನನ್ನ ಪಾಲಿನ ದೇವರು ಎಂದು ಕೊಂಡಾಡಿರುವರು. ಆಗ ರಾಯರು, ನೀನೊಪ್ಪುವಿಯಾದರೆ ನಾವೊಂದು ಉಪಾಯ ಹೂಡಬಹುದು. ನಿನ್ನ ಗಂಡನನ್ನು ತೀರಿಸಿಬಿಟ್ಟರೆ ನಾವು ನಿಶ್ಚಿಂತೆಯಿಂದಿರಬಹುದು ಎಂದಾಗ ಕೊಲೆಯ ರಹಸ್ಯ ಗೊತ್ತಾದರೆ ಮುಂದೆ ಸೆರೆಮನೆಯ ವಾಸವೋ ಫಾಶಿ ಶಿಕ್ಷೆಯೋ ಆದರೆ.........ದುಡುಕಿ ಕೆಡುಕನ್ನು ಮೈ ಮೇಲೆ ಕೆಡುಹಿಕೊಳ್ಳುವುದು ಸರಿಯೋ ಎಂದು ಅಮ್ಮಯ್ಯ ಪ್ರಶ್ನಿಸಲು ರಾಯರು ಬಳಿ

ಆಲೋಚಿಸಿ ತರ್ಕ ಮಾಡಿದ್ದರು. ಕೊನೆಯ ಈ ಕೊಲೆ ಯಾರಿಂದ ಸಂಭವಿಸಿತೆಂದು ಪತ್ತೆಯೇ ತಿಳಿಯದಂತೆ, ಪ್ರಸಾದರನ್ನು ಕೊಂದು, ಅಮ್ಮಯ್ಯನವರ ತಲೆಗೆ ಚಿಕ್ಕ ಗಾಯ ಮಾಡಿ ಜ್ಞಾನತಪ್ಪುವ ಮದ್ದಿನಿಂದ ಆರೇಳು ತಾಸು ಪ್ರಜ್ಞಾಹೀನಳನ್ನಾಗಿ ಮಲಗಿಸಿದರೆ, ಕೊಲೆಗಡುಕ ಅಜ್ಞಾತನಾಗಿಯೇ ಉಳಿಯಬಹುದೆಂದು ಸಂಚು ಹೂಡಿದ್ದರು"

"ನಿನ್ನಿಂದ ನನಗೆ ತುಂಬಾ ಉಪಕಾರವಾಯಿತು" ಕೃತಜ್ಞತೆಯಿಂದ ನುಡಿದರು ಪತ್ತೇದಾರರು.

"ಸ್ವಾಮಿ, ಬಡವನ ಹೊಟ್ಟೆಗೆ ಹೊಡೆಯಬೇಡಿರಿ'' ದೈನತೆಯಿಂದ ಪುನಃ ಬೇಡಿಕೊಂಡ

ಗುಪ್ತ ವಿಚಾರವನ್ನು ಸಂಪೂರ್ಣವಾಗಿ ಮುಚ್ಚುಮರೆಯಿಲ್ಲದೆ ತಿಳಿಸಿದ ಆಳಿಗೆ ಹತ್ತು ರೂಪಾಯಿಯ ಬಹುಮಾನವಿತ್ತು, ತನ್ನೊಡನೆ ಈ ವಿಚಾರವಾಗಿ ಪ್ರಸ್ತಾಪಿಸಿರುವೆನೆಂದು ಯಾರೊಡನೆಯೂ ಅಪ್ಪಿತಪ್ಪಿ ತಿಳಿಸಬಾರದೆಂದು ಜಾಗ್ರತೆ ಹೇಳಿ ಅವನನ್ನು ಕಳುಹಿಸಿಕೊಟ್ಟರು.

ತಾನು ಕೈಕೊಂಡ ಕಾರ್ಯವು ಶ್ರೀ ದುರ್ಗಾಮಾತೆಯ ಕರುಣಾ ಪ್ರಸಾದದಿಂದ ಕೈಗೂಡಿತೆಂದೂ, ಮಾತೆಯನ್ನು ಮನದಲ್ಲಿಯೇ ಸ್ಮರಿಸುತ್ತಾ, ಮುಂದಾವ ಪಥದಲ್ಲಿ ಮುಂದುವರಿಯಬೇಕೆಂದು ಮೆಲುಕಾಡುತ್ತಾ ಮನೆಯ ಹಾದಿ ಹಿಡಿದರು.

ಒಲಿದರೆ ನಾರಿ — ಮುನಿದರೆ ಮಾರಿ !

ಮನ ಒಲಿದರೆ ಗಂಡ — ಮನನೊಂದರೆ ಅವನು ಬಲೂ ದಂಡ !

ಹೆಂಡ್ತಿಯ ಬಯಕೆಯ ತಾಳಕ್ಕೆ ತಕ್ಕಂತೆ ಗಂಡ ಕುಣಿಯಬೇಕು. ಆಕೆಯ ಇಚ್ಛೆಯನ್ನು ವಿರೋಧಿಸಿದರೆ ಮುನಿದ ಮಾರಿಯವತಾರವನ್ನೇ ತಾಳುವರು.

ಗಂಡನಿಂದ ಆಸೆಯ ಚಿಗುರು ಚಿಗುರದಿದ್ದಾಗ, ಬೇರೊಬ್ಬನ ಬಳಿ ಕಳ್ಳ ಹೆಜ್ಜೆಯಿಂದ ನಡೆದು, ಕೊನೆಗೆ ವಿಜೃಂಭಣೆಯಿಂದ ಅಗ್ನಿದೇವ ನೆದುರು ಕೈ ಹಿಡಿದ ಗಂಡನನ್ನು ತೀರಿಸಿ ಬೇರೊಬ್ಬನಿಗೆ ಸೆರಗು ಹಾಸಲು ಮುಂದಾಗುವ ಹೆಣ್ಣಿನ ಹೆಣ್ತನಕ್ಕೆ ಏನನ್ನಬೇಕು ?

ಪ್ರಮೀಳೆ, ಮಾಲಿಕರ ಮನ ಒಲಿಸಿಕೊಂಡವಳೇ — ಮಾಲಿಕರಿ ತಮ್ಮ ಮಾಯಾಜಾಲದಿಂದ ಪ್ರಮೀಳೆನನ್ನು ಮಂಕುಮಾಡಿ ತಮ್ಮ ತೋಳತಕ್ಕೆಯಲ್ಲಿ ಬಂಧಿಸಿಕೊಂಡು, ಹೆಣ್ಣು ಮನವನ್ನು ತನ್ನೆಡೆಗೆ ಸೆಳೆದುಕೊಂಡರೆ ?

ಯಾರು — ಯಾರಿಗಾಗಿ ಒಲಿದು ಬಂದರು ?

೧೧

ಮತ್ತೊಂದು ತಿಂಗಳು ಉರುಳಿತು.

ಪತ್ತೇದಾರರು ತನ್ನ ಪ್ರಗತಿ ಪಥದಲ್ಲಿ ಮುನ್ನಡೆದಿದ್ದರು.

ವಿವಿಧ ವೇಷ ಧರಿಸಿ ಗುಟ್ಟಿನ ಸಂಗತಿಗಳನ್ನು ಸಂಗ್ರಹಿಸುತ್ತಿದ್ದರು.

ನಾಲ್ಕೈದು ಬಾರಿ ಮಂಗಳೂರಿಗೂ ಬಂದು ಹೋಗಿದ್ದರು.

ಪ್ರಮೀಳೆ ಒಪ್ಪದ ಯುವಕನನ್ನು ಒತ್ತಾಯದಿಂದ ವಿವಾಹ ಮಾಡಿಸಿದುದಕ್ಕಾಗಿ ಇನ್ನು ಮುಂದೆ ಎಂಥಹ ಸಂಕಷ್ಟ ಬಂದರೂ ಆ ಮನೆಯ ಮೆಟ್ಟಲೇರುವುದಿಲ್ಲ ಎಂದು ಅವರ ಮನೆಯ ಆರಾಧಕ ಭೂತವಾದ ಗುಳಿಗನ ಮೇಲೆ ಆಣೆಯಿರಿಸಿ ಸಿಡುಕಿನಿಂದ ಮನೆಬಿಟ್ಟು ನಡೆದಿದ್ದಳು.

ಪ್ರಸಾದರು ಕೊಲೆಯಾದರು ಎಂಬ ವಿಚಾರವೇ ಜನರ ಮನಸ್ಸಿನಿಂದ ಮಾಯವಾಯಿತು.

ಸತ್ತವರದ್ದಾಗಲೀ—ಹುಟ್ಟಿ ಸತ್ತವರದ್ದಾಗಲೀ, ಜ್ಞಾಪಕ ಉಳಿಯಬೇಕಾದರೆ ಅವರೇನಾದರೂ ದುಷ್ಕಾರ್ಯ ಮಾಡಿರಬೇಕು. ಸತ್ಕಾರ್ಯ ಮಾಡುವವರನ್ನು ಸ್ಮರಿಸುವವರೆ ಇಲ್ಲ. ಕೇಡಿನೆಡೆಗೆ ಕಣ್ಣೆತ್ತಿಯೂ ನೋಡದ ಪ್ರಸಾದರ ಸಭ್ಯತೆಯ ನೆನಪು ಉಳಿದಿರುವುದಾದರೂ ಹೇಗೆ?

ಅನಂತ ಕೆಫೆಯ ಗಲ್ಲಾ ಪೆಟ್ಟಿಗೆಯ ಮೇಲೆ ಒಬ್ಬ ಸಪ್ಲಾಯರ್ ಸ್ಥಾನದಿಂದ ಬಡ್ತಿ ಹೊಂದಿದ ಮೇಲೆ ಬಂದ, ದುಡ್ಡಿದ್ದವರಿಗೆ ಹೊಟ್ಟೆಪಾಡಿಗಾಗಿ ದುಡಿಯುವವರ ದೊಡ್ಡಿ ಕಟ್ಟಲು ಕಷ್ಟವಿದೆಯೇ?

ಮಂಗಳವಾರ ಅನಂತ ಕೆಫೆಗೆ ವಾರದ ರಜಾದಿನ! ಅಂದಿನ ಸುದಿನವನ್ನು ಮಾಲಿಕರು ತನ್ನ ಪ್ರೇಯಸಿಯ ಮನೆಯಲ್ಲಿ ಕಳೆಯುತ್ತಿದ್ದುದನ್ನು ಕಂಡುಕೊಂಡಿದ್ದರು ಪತ್ತೇದಾರರು. ಆದರೆ, ಅವರಾವ ಸಮಯದಲ್ಲಿ ಆ ಮನೆಯಲ್ಲಿರುತ್ತಾರೆಂದು ಕಂಡುಹಿಡಿಯುವುದಾದರೂ ಹೇಗೆ?

ಅಂದು ಹೊಟೇಲಿಗೆ ವಾರದ ರಜಾದಿನ! ಪತ್ತೇದಾರ ಪುಟ್ಟಣ್ಣನವರು ಹಣ್ಣು ಮಾರುವ ಮುದಿ ಹೆಣ್ಣಿನ ವೇಷಧರಿಸಿಕೊಂಡು, ಪ್ರಮೀ

ಳೆಯ ಮನೆಯ ಪಕ್ಕದಲ್ಲಿದ್ದ ಅಶ್ವತ್ಥ ಕಟ್ಟೆಯಲ್ಲಿ ನಾನಾ ವಿಧದ ಹಣ್ಣುಗಳನ್ನಿಟ್ಟು ವಿಕ್ರಯಿಸಲು ಕುಳಿತುಕೊಂಡರು.

ಗಿರಾಕಿಯಾಗಿ ಬಳಿ ಬಂದವರಿಗೆ ಹಣ್ಣನ್ನು ಕೊಡುತ್ತಾ ವ್ಯಾಪಾರ ಸಾಗಿತ್ತು. ಆಕೆಯನ್ನು ಯಾರೂ ಗುರುತಿಸಿರಲಿಲ್ಲ! ಬಳಿ ಸಾರಿದವರೆಲ್ಲರೂ ಈಕೆ ತಮ್ಮ ಪಟ್ಟಣಕ್ಕೆ ಹೊಸತಾಗಿ ಬಂದ ವೃದ್ಧೆ ಎಂದು ನಿರ್ಧರಿಸಿಕೊಂಡಿದ್ದರು.

ಸುಮಾರು ಹತ್ತು ಗಂಟೆಯ ಸಮಯ. ಶಾಲಾ ಬಾಲಕರೆಲ್ಲರೂ ಶಾಲೆ ಸೇರಿಯಾಗಿತ್ತು. ಸೋಮಾರಿ ಹುಡುಗರು ಮೆಲ್ಲ ಮೆಲ್ಲನೆ ಹೆಜ್ಜೆ ಇಡುತ್ತಾ ನಡೆಯುತ್ತಿದ್ದರು.

ಸುಸಜ್ಜಿತ ವಸ್ತ್ರಾಲಂಕಾರದಿಂದ ಅಲಂಕರಿಸಿಕೊಂಡು ಕಳ್ಳ ಹೆಜ್ಜೆ ಇಡುತ್ತಾ, ಹಯಗೀವಾಚಾರ್ಯರು ಆ ಬೀದಿಯಾಗಿ ಬಂದರು. ಎದುರಿನ ಕಟ್ಟೆಯಲ್ಲಿ ವಿಕ್ರಯವಾಗುತ್ತಿರುವ ತರತರದ ಹಣ್ಣುಗಳನ್ನು ಕಂಡು ತನ್ನ ಪ್ರೇಯಸಿಯ ದರ್ಶನಕ್ಕೆ ತೆರಳುತ್ತಿರುವಾಗ ಕೆಲವು ಜಾತಿಯ ಹಣ್ಣು ಕೊಂಡುಹೋದರೆ ಪ್ರಿಯೆಗೂ ಅತ್ಯಾನಂದವಾಗಬಹುದು, ಸರಸದ ಸವಿಯಾಡುವುದರೊಂದಿಗೆ ಹಣ್ಣಿನ ಸವಿಯನ್ನು ಹೀರಬಹುದೆಂದು ನೆನೆದು ಹಣ್ಣನ್ನು ಕೊಂಡುಕೊಂಡೇ ಹೊರಟು ಹೋದರು.

ಪ್ರೇಯಸಿಯು ದರ್ಶನಾಪೇಕ್ಷೆಯಿಂದ ಬಂದ ಪ್ರಿಯಕರನನ್ನು ಹರ್ಷದಿಂದ ಸ್ವಾಗತಿಸಿ, ಒಳ ಕರಕೊಂಡು ಹೊರ ಬಾಗಿಲಿಗೆ ಅಗಳಿಯಿಕ್ಕಿದಳು—ಪ್ರಮೀಳೆ!

ಅವರ ಗುಪ್ತ ಪ್ರಣಯ ಗುಲ್ಲಾಗಬಾರದು ಎಂಬ ಹೆಬ್ಬಯಕೆ ಅವರದ್ದು!

ಆಚಾರ್ಯರು ಪ್ರಮೀಳೆಯ ಮನೆಯೊಳ ಸೇರಿ ಬಾಗಿಲನ್ನು ಬಂಧಿಸಿ, ತನ್ನ ಮೋಹಿನಿಯ ತೋಳತೆಕ್ಕೆಯಲ್ಲಿ ಲೀನವಾಗಿರಬಹುದು ಎಂದು ನೆನಸಿದೊಡನೆ, ಹಣ್ಣಿನ ವ್ಯಾಪಾರದಲ್ಲಿ ನಿರತರಾಗಿದ್ದ ಪತ್ತೇದಾರರು ತಮ್ಮ ವ್ಯವಹಾರವನ್ನು ಅಂತ್ಯಗೊಳಿಸಿ, ತನ್ನ ಮನೆ ಸೇರಿ ವೇಷ ಬದಲಾಯಿಸಿ ನಿಜವೇಷಧಾರಿಯಾಗಿ ನೇರವಾಗಿ ಪೋಲೀಸ್ ಸ್ಟೇಶನಿಗೆ ಬಂದರು.

ತನ್ನ ದಿನಚರಿಯಲ್ಲಿ ತೊಡಗಿದ್ದು, ಅಂದಿನ ಕೇಸಿನ ವಿಚಾರವಾಗಿ ಪರಿಶೀಲಿಸುತ್ತಿದ್ದ ಇನ್ಸ್‌ಪೆಕ್ಟರರು, ನಗುಮುಖದಿಂದಲೇ ಸ್ವಾಗತಿಸಿದರು—ಪತ್ತೇದಾರರನ್ನು.

ಕುಶಲ ಪ್ರಶ್ನೆಯಾದ ನಂತರ:

'ನೀವೀಗಲೇ, ಹೊರಟು ಪ್ರಸಾದರ ಮನೆಯಲ್ಲಿ ಸೇರಿಕೊಂಡು ಪ್ರಣಯದ ಪಗಡೆಯಾಡುತ್ತಿರುವ ಹಯಗ್ರೀವಾಚಾರ್ಯರನ್ನು-ಪ್ರವಿಾಳೆಯನ್ನು ಬಂಧಿಸಬೇಕು' ಎಂದರು ಪತ್ತೇದಾರರು.

ಸಕಾರಣವಿಲ್ಲದೆ ಗಣ್ಯ ವ್ಯಕ್ತಿಗಳನ್ನು ಬಂಧಿಸಿದರೆ ತೊಂದರೆ ಎಂದು ಮನಗಂಡ ಇನ್ಸ್‌ಪೆಕ್ಟರರು:

'ಅವರ ಬಂಧನವೇಕೆ?'

'ಪ್ರಸಾದರ ಕೊಲೆಗಾಗಿ!'

'ಅವರೇ ಕೊಲೆಪಾತಕರೆ?'

'ಹೌದು'

'ಅದನ್ನು ಹೇಗೆ ಕಂಡುಕೊಂಡಿರುವಿರಿ?'

'ಈ ಕೊಲೆಯ ಶೋಧನೆಗೆ ಕೈಯಿಕ್ಕಿದ ನಂತರ ನಾನು ಕೈ ಕಟ್ಟಿ ಕುಳಿತಿರುವೆನೆಂದು ಭಾವಿಸಿದಿರಾ? ನನ್ನ ಬಿಡುವಿಲ್ಲದ ಗೂಢ ಸಂಶೋಧನೆಯೇ ಅವರು ಕೊಲೆಗಾರರು ಎಂದು ಕಂಡುಕೊಂಡಿತು'

'ಅವರನ್ನು ಬಂಧಿಸಬಹುದೆ?'

'ನಿಮಗೇಕೆ ಬೆದರಿಕೆ?'

ಸಂದೇಹ ಪಡುವ ಇನ್ಸ್‌ಪೆಕ್ಟರರಿಗೆ ತಾನು ವಿವಿಧ ವೇಷಾಂತರದಿಂದ ಕಂಡು ಹಿಡಿದ ಸಮಗ್ರ ವಿಷಯವನ್ನು ಸಂಕ್ಷಿಪ್ತವಾಗಿ ತಿಳಿಸಿದರು. ಪತ್ತೇದಾರರ ಕಾರ್ಯದಕ್ಷತೆಗೆ ಮೆಚ್ಚಿಕೊಂಡರು ಇನ್ಸ್‌ಪೆಕ್ಟರರು.

'ನೀವೂ ನನ್ನೊಟ್ಟಿಗೆ ಬರುವಿರಾ?'

'ಹೂಂ, ಹೊರಡಿ. ವಿಳಂಬ ಮಾಡಿದರೆ, ಭ್ರಮರ ಹೂವಿನ ಸಾರಭವನ್ನು ಹೀರಿ ಹಾರಿಹೋದೀತು. ಅವರನ್ನು ಅಲ್ಲಿಯೇ ಬಂಧಿಸಬೇಕು'

ಡ್ಯೂಟಿ ಮೇಲಿದ್ದ ಇಬ್ಬರು ಕಾನ್ಸ್ಟೇಬಲ್‌ಗಳೊಡಗೂಡಿಕೊಂಡು, ಇನ್ಸ್‌ಪೆಕ್ಟರರು, ಪತ್ತೇದಾರರು ಜೀಪ್‌ನಲ್ಲಿ ಪ್ರಸಾದರ ಮನೆಯ ಕಡೆ ನಡೆದರು.

ಮನೆಗಿಂತ ಸ್ವಲ್ಪ ದೂರವೇ ಜೀಪ್ ನಿಲ್ಲಿಸಿ, ಮುನ್ನಡೆದರು ಯಾಮಿಕರೊಂದಿಗೆ ಇನ್ಸ್‌ಪೆಕ್ಟರರು-ಪತ್ತೇದಾರರು.

ಕೆಲ ನಿಮಿಷ ಒಳಗೇನೂ ನಡೆಯುತ್ತಿದೆ ಎಂದು ಕಿವಿಗೊಟ್ಟು ಕೇಳಿದ ಪತ್ತೇದಾರರು ಬಾಗಿಲು ತಟ್ಟಿದರು.

ಸರಸದ ಸರಪಳಿ ಹೆಣೆದು, ಪ್ರಣಯೋನ್ಮಾದದಿಂದ ಪರಸ್ಪರ ಬಾಹು ಬಂಧಿತರಾಗಿದ್ದವರಿಗೆ ಹೊರಗಿನಿಂದ ಬಾಗಿಲು ಬಡಿದ ಸದ್ದಾಗಲು, ವಿಜೃಂಭಿಸಿದ್ದ ವಿಲಾಸವನ್ನು ವಿಫಲಗೊಳಿಸಿದಂತಾಯಿತು. ಹಾಲಿನವಳೋ, ನೀರಿನವಳೋ ಬಂದು ಬಾಗಿಲು ತಟ್ಟುತ್ತಿರಬಹುದೆಂದು ಕುಪಿತಳಾದ ಪ್ರಣಯ ಕಿಂಕಿಣಿ ಪ್ರಮೀಳ ಪ್ರಕೋಪದ ಹೆಜ್ಜೆಯಿಡುತ್ತಾ ಹೊರಬಂದಳು. ಯಾರೇ ಆಗಲಿ, ಇಂತಹ ಸಂದಿಗ್ಧ ಸಮಯದಲ್ಲಿ ಬಂದು ಉಪದ್ರಿಸಿದುದಕ್ಕಾಗಿ ಚೆನ್ನಾಗಿ ಬೈದು ಕಳುಹಿಸಬೇಕೆಂದು ಎಣಿಸಿಕೊಂಡಳು. ಪ್ರಮೀಳೆ ವೀರ ಹೆಜ್ಜೆಯಿಡುತ್ತಾ ಹೊರ ಹೊರಟೊಡನೆ ಒಳಗಿದ್ದ ಹಯಗೀವಾಚಾರ್ಯರು ಕರೆದವರು ಯಾರೋ ಎಂಬ ಶಂಕಾ ಪೀಡಿತ ಚಳಿಯಿಂದ ಅಲ್ಲಿಯೇ ಇದ್ದ ವಸ್ತ್ರವನ್ನು ಮೈ ತುಂಬಾ ಹೊದೆದು ಚಳಿಯ ಬಾಧೆಯನ್ನು ತಪ್ಪಿಸಿಕೊಳ್ಳಲು ಮುಂದಾದರು.

ಬಾಗಿಲು ತೆರೆದಂತೆ ಪ್ರತ್ಯಕ್ಷರಾದ ಖಾಕಿ ವಸ್ತ್ರಧಾರಿಗಳನ್ನು ಕಂಡ ಪ್ರಮೀಳೆ ಬೆಚ್ಚಿದಳು. ಆದರೂ ಮೂರ್ಛೆ ತಪ್ಪಲಿಲ್ಲ. ಭೀತಿಯಿಂದ ಬಾಗಿಲನ್ನು ಮುಚ್ಚಿ ಒಳ ಓಡಿಹೋಗಬೇಕೆಂದು ಹವಣಿಸುತ್ತಿರುವುದರೊಳಗೆ ಇನ್ಸ್‌ಪೆಕ್ಟರರು ದರ್ಪದಿಂದ ಒಳ ಕಾಲಿರಿಸಿಯಾಗಿತ್ತು.

'ಮನೆಯೊಳಗೆ ಯಾರಿದ್ದಾರೆ?'

ಸುಳ್ಳು ಹೇಳಲು ಹೆಣ್ಣಿಗೆ ಹೇಳಿಕೊಡಬೇಕೇ? ಆಕೆ ಛಲದ ಚಾಪಲ್ಯದಿಂದ ಬಾಯಿ ತೆರೆದರೆ ಸುಳ್ಳಿನ ಮೂಟೆಯನ್ನೇ ಹೇರಿ ಕೆಡಹಲು ಸಮರ್ಥಳು!

ಛಲದ ಹೆಣ್ಣುಗಳು ಬದುಕಿರುವುದು ಸುಳ್ಳು-ಮತ್ತೆ ಕಣ್ಣೀರಿನಿಂದ!

ಸುಳ್ಳಿನಿಂದ ಮರೆಮಾಚಲಾಗದ ವಿಚಾರವಿಲ್ಲ! ಕಣ್ಣಿನಿಂದ ಕರಗಲಾರದ ಕಟು ಹೃದಯವಿಲ್ಲ!

'ಯಾರಿಲ್ಲ' ಕೂಡಲೇ ಉತ್ತರ ಬಂತು ಪ್ರಮೀಳೆಯಿಂದ.

'ಯಾರೂ ಇಲ್ಲ'

'ಸುಳ್ಳು ಹೇಳಬೇಡ'

'ನಿಜವಾಗಿಯೂ ಯಾರೂ ಇಲ್ಲವೆ?'

'ಇಲ್ಲ'

'ಯಾರೊಡನೆಯೋ ಮಾತಾಡುತ್ತಿರುವುದನ್ನು ನಾವು ಕೇಳಿರುವೆವಲ್ಲ'

'ಮಾತು! ಇಲ್ಲ......ನನ್ನಷ್ಟಕ್ಕೆ ನಾನೇ ಪದ ಹಾಡುತ್ತಿದ್ದೆ' ಪುನಃ ಸುಳ್ಳಿನ ಸುಳಿ !

'ಚಿಂತಿಲ್ಲ! ಹಾಡಿದ ಮಾಸ್ತರರಾಗಿ ಒಳಗಿರುವ ಆಚಾರ್ಯರನ್ನು ಹೊರಕ್ಕೆ ಕರೆ!' ಇನ್ಸ್‌ಪೆಕ್ಟರರು ಬಳಸಿ ಮಾತಾಡದೆ ನೇರಾಗಿ ಕರ್ತವ್ಯದ ಹಾದಿ ಹಿಡಿದರು.

ಇದಿರು ಬಾಗಿಲಿನಲ್ಲಿ ವಿಚಾರಣೆಯಾಗುತ್ತಿದ್ದ ವಿಷಯವನ್ನು ತಿಳಿದಿದ್ದ ಆಚಾರ್ಯರಿಗೆ ಹಿಂದಿನ ಬಾಗಿಲಿನಿಂದ ಹೊರಗೋಡಿಹೋಗಬಹುದಿತ್ತು. ಅದೃಷ್ಟದ ಪಾಲಿಗೆ ಅಪರಾಧಿಯಾಗಿ ಪರಿಣಮಿಸಿದ ಅವರ ತಲೆಗೆ ಆ ಘಳಿಗೆಯಲ್ಲಿ ಅಷ್ಟು ಬುದ್ಧಿವಂತಿಕೆಯು ಹೊಳೆಯಲಿಲ್ಲ. ದುರಾದೃಷ್ಟ ಬಲದಿಂದ ಅವರಾಗಿಯೇ ಹೊರಬಂದರು.

ಎದುರು ಬಂದವರನ್ನು ಕಂಡ ಇನ್ಸ್‌ಪೆಕ್ಟರರು:

'ನಿಮ್ಮನ್ನು ಎರೆಸ್ಟ್ ಮಾಡಿದ್ದೇನೆ' ಎಂದರು.

'ಏಕೆ!'

'ಪ್ರಸಾದರನ್ನು ಕೊಂದುದಕ್ಕೆ'

ಯಥಾವತ್ತಾಗಿ ಬಾಲೆ ಪ್ರಮಿಳೆಗೆ ಮೂರ್ಛೆ ತಪ್ಪಬೇಕಿತ್ತು. ಆದರೆ ಹಾಗಾಗಲಿಲ್ಲ.

'ಯಾರು ಕೊಂದವರು! ಸುಳ್ಳು ಅಪಾದನೆ ಹೊರಿಸಿ ಅವಮಾನಿಸಬೇಡಿರಿ' ಜೀರ್ಣ ಹೊಂದುತ್ತಿರುವ ಧೈರ್ಯವನ್ನು ಒಂದುಗೂಡಿಸಿ ವಾದಿಸಿದರು.

'ಅವಮಾನಿಸುವುದಿಲ್ಲ; ಸನ್ಮಾನಿಸುತ್ತೇವೆ. ತಮ್ಮ ಮಹತ್ಕಾರ್ಯಕ್ಕಾಗಿ ಗೌರವವಿತ್ತು ಪ್ರಶಂಶಿಸುತ್ತೇವೆ'

'ಒರಟು ನುಡಿಯಿಂದ ಹಂಗಿಸಿದರೆ ನಿಮ್ಮ ಮೇಲೆ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ'

'ಮಾನ ಕಳಕೊಂಡವರಿಗೆ ಯಾವಾಗಲು ಮಾನದ ಮೇಲೆ ತುಂಬಾ ಅಭಿಮಾನವಿರುತ್ತದೆ ಬಹಳ ಸ್ವಾಭಿಮಾನಿಗಳು ತಾವು? ತಮ್ಮಿಂದೇನು ಸಾಧ್ಯವೋ ಅದೆಲ್ಲವನ್ನೂ ಕೈಕೊಳ್ಳಬಹುದು. ನಾವಾರು ಅಡ್ಡಿ ಬರುವುದಿಲ್ಲ. ಅದಿರಲಿ, ನೀವೇಕೆ ಇಲ್ಲಿ ಬಂದಿರುವಿರಿ ?

'ನಿರಾಶ್ರಿತಳಾಗಿ ನೆಲಸಿರುವ ನನ್ನ ಹೋಟೇಲಿನ ಮೆನೇಜರನಾಗಿ ಪ್ರಮಾಣಿಕತೆಯಿಂದ ದುಡಿದವನ ಮಡದಿಯ ಮೇಲ್ವಿಚಾರಣೆಗಾಗಿ! ಆಕೆಗೆ ಜ್ವರ ಬರುತ್ತಿದೆ, ಎಂದು ತಿಳಿದು ನೋಡಿ ಹೋಗಲು ಬಂದೆ'

'ನೋಡಲು ಬಂದವರು, ಮನೆಗೆ ಬಾಗಿಲಿಕ್ಕಿಕೊಂಡು, ಮಂಚದಲ್ಲೇನು ಕೆಲ್ಸ?' ದರ್ಪದಿಂದಲೇ ಗರ್ಜಿಸಿದರು ಇನ್ಸ್‌ಪೆಕ್ಟರರು.

'ಅಷ್ಟು ಮುಂದುವರಿಸಿ ಮಾತು ಬೆಳೆಸಲು ನೀವಾರು' ಹುಚ್ಚು ಕೋಪದಿಂದಲೇ ನುಡಿದರು ಆಚಾರ್ಯರು.

'ನಾನಾರೆಂದು ಗೊತ್ತಾಗುತ್ತದೆ. ಮೊದಲು ಒಳ್ಳೆಯ ಮಾತಿನಿಂದ ಬಾಯಿ ಮುಚ್ಚಿಕೊಂಡು ನೀವಿಬ್ಬರೂ ಸ್ಟೇಶನಿಗೆ ಹೊರಡಿ'

'ಬರುವುದಿಲ್ಲ'

'ಬಾರದೇ ಇದ್ದರೆ ಎಳೆದುಕೊಂಡು ಹೋಗುತ್ತೇನೆ'

'ನಿಮಗಷ್ಟು ಶಕ್ತಿಯಿದೆಯೆ?'

'ಪರಮಾತ್ಮ ಕೊಟ್ಟಿರುವ ಶಕ್ತಿ ಪರೀಕ್ಷೆಯಾಗಬೇಕಿದ್ದರೆ, ಅದನು ತೋರಿಸಿ ಬಿಡುತ್ತೇನೆ'

'ನೀವು ನೀಚರು!'

'ನೀಚರ ಬಾಯಿಯಿಂದಲೇ ಬರಬೇಕು'

'ನನ್ನ ಮೇಲೆ ಕೈ ಮಾಡುವಷ್ಟು ಅಧಿಕಾರ ನೀವು ಪಡೆದಿರುವಿರಾ?'

'ಹುಟ್ಟುವಾಗ ಪಡೆದು ಬಂದಿದ್ದರೂ, ಸರಕಾರದ ಸಹಾನುಭೂತಿಯಿಂದ ನನ, ಮೇಧಾವಿತನದಿಂದ ಪಡೆದಿರುವೆನು'

'ನನಗೆ ಸಮಾಜದಲ್ಲೆಷ್ಟು ಗೌರವವಿದೆಯೆಂದು ಬಲ್ಲಿರಾ?'

'ನೀವಾಗಿಯೇ, ಪರಸ್ತ್ರೀಯನ್ನು ವ್ಯಾಮೋಹಿಸಿ, ನಿಮ್ಮ ಗೌರವಕ್ಕೆ ಮಸಿ ಬಳಿದಿರುವಿರಲ್ಲ'

'ನಾನ್ಯಾವ ಅನ್ಯಾಯವನ್ನು ಮಾಡಿಲ್ಲ'

'ತಪ್ಪಿಸಿಕೊಳ್ಳಲು ಬಯಸುವಿರಾ? ನಿಮ್ಮ ಗುಪ್ತ ಕಾರ್ಯಸ್ಥಾನವನ್ನೆಲ್ಲಾ ನಮ್ಮ ಪತ್ತೇದಾರರು ಬಯಲಿಗೆಳೆದಿರುವರು'

ಅದಾಗಲೇ ಜನರು ಗುಂಪು ಗುಂಪಾಗಿ ಮನೆಯ ಬಾಗಿಲಲ್ಲಿ ಸೇರ ತೊಡಗಿದ್ದರು. ಕೆಲವರಂತೂ ಮನೆಯ ಬಾಗಿಲಿನ ಬಳಿ ನಿಂತು ಒಳ ನಡೆಯುವ ಮಾತುಕತೆಯನ್ನೆಲ್ಲಾ ಆಲಿಸುತ್ತಿದ್ದರು. ಕೊಲೆಯ ರಹಸ್ಯ ಸಂಪೂರ್ಣವಾಗಿ ಅವರೆಲ್ಲರೂ ಅರಿತುಕೊಂಡಿದ್ದರು.

ಅದಾವದೋ ಪರಿಚಿತ ವ್ಯಕ್ತಿ ಹೊರಗೆ ನಿಂತು ನೋಡುತ್ತಿರುವುದನ್ನು ಕಂಡು, ತನ್ನ ವಾದ ಬೆಳೆಸಿದ ಆಚಾರ್ಯರು:

'ನನ್ನ ಮಾನವನ್ನು ಬೀದಿಪಾಲು ಮಾಡಿದುದಕ್ಕಾಗಿ ಮಾನನಷ್ಟ ಮೊಕದ್ದಮೆ ಹೂಡಿ ನಿಮ್ಮಿಂದ ಸಾವಿರ ರೂಪಾಯಿ ದಂಡ ಪಡೆದುಕೊಳ್ಳುತ್ತೇನೆ'

‘ನ್ಯಾಯದ ತಕ್ಕಡಿ ನಿಮ್ಮ ಕೈಯಲ್ಲಿ ಇಲ್ಲ’ ಮರ್ಯಾದೆಯಿಂದ ಮಾನವರಂತೆ ನಡೆದುಕೊಂಡು ಬಾಯಿ ಮುಚ್ಚಿ ಹೊರಡಿ’

ಇವರೊಡನೆ ವೃಥಾ ವಾದಿಸುತ್ತ ನಿಂತಿರಬಾರದೆಂದು ನೆನೆದ ಪತ್ತೇದಾರರು ತನ್ನ ಪತ್ತೇದಾರಿ ಕಾರ್ಯವನ್ನೆಲ್ಲ ಸಂಕ್ಷಿಪ್ತವಾಗಿ ತಿಳಿಸಿದರು.

ಸತ್ಯತೆಯನ್ನು ಅರಿತುಕೊಂಡ ಆಚಾರ್ಯರ ಮುಖ ಕಪ್ಪಿಟ್ಟಿತು. ತಾವು ಎಷ್ಟು ಸುಳ್ಳು ಹೇಳಿದರೂ ತಪ್ಪಿಸಿಕೊಳ್ಳಲಸಾಧ್ಯವೆಂದು ಮೌನವಾದರು.

ಮುಂದಾವ ಎದುರು ಮಾತನ್ನೂ ಆಡದೆ ಅವರಿಬ್ಬರೂ ಇನ್ಸ್ಪೆಕ್ಟರರನ್ನು ಹಿಂಬಾಲಿಸಿ ‘ಜೀಪ್’ ಏರಿ ಕುಳಿತರು. ಕಾನ್‌ಸ್ಟೇಬಲ್ ತನ್ನೊಡನೆ ತಂದಿದ್ದ ಬೀಗದಿಂದ ಮನೆಯ ಬಾಗಿಲು ಮುಚ್ಚಿ ಸರಕಾರಿ ಮುದ್ರೆಯೊತ್ತಿ ಜೀಪ್ ಏರಿದ.

ಜೀಪ್ ಬರದಿಂದ ಸ್ಟೇಶನಿನ ದಾರಿ ಹಿಡಿಯಿತು.

೧೨

ಮಾರನೆಯ ದಿನ ಹತ್ತು ಗಂಟೆಗೆ ಕೋರ್ಟಿಗೆ ಕರೆದುಕೊಂಡು ಹೋದರು—ಪ್ರಣಯ ಪಕ್ಷಿಗಳನ್ನು!

ಕೋರ್ಟಿನ ಸುತ್ತಲೂ ಜನರು ಕಿಕ್ಕಿರಿದು ನೆರೆದಿದ್ದರು.

ಅವರವರ ವ್ಯಾಜ್ಯ ಅವರವರಿಗೆ!

ಅಪರಾಧಿಗಳನ್ನು ಕುಳ್ಳಿರಿಸಲಿಕ್ಕಾಗಿ ಕೋರ್ಟಿನ ಹೊರ ಜಗಲಿಯಲ್ಲಿ ಬೇಂಚೊಂದು ಹಾಕಲ್ಪಟ್ಟಿತ್ತು.

ಅಂದಿನ ವಿಚಾರಣೆಗಾಗಿ ಮುಂದುವರಿಸಲಾಗಿದ್ದ ಹಲವಾರು ಖೈದಿಗಳು ಕೋಳದಿಂದ ಬಂಧಿತರಾಗಿ ಕುಳಿತಿದ್ದರು—ಅವರ ಮುಖ ದುಃಖದಿಂದ ಮುದುಡಿಕೊಂಡಿತ್ತು. ಮಾಡಿದ ಅಕೃತ್ಯಕ್ಕಾಗಿ ಮರುಗುತ್ತಿದ್ದರು.

ಸಮಯಕ್ಕೆ ಸರಿಯಾಗಿ ಹಾಜರಾದ ನ್ಯಾಯಾಧೀಶರು ಮೊದಲಾಗಿ ಮಾರಣ್ಣನ ಕೇಸ್ ಕರೆಯಲಾಯಿತು.

ಅವನನ್ನು 'ಬಿಡ್' ಸಂಗ್ರಹಕ್ಕಾಗಿ ಬಂಧಿಸಲಾಗಿತ್ತು. ಆಶೆಯಿಂದಲೇ ದಿನ ಕಳೆಯುವ ಕಡು ಬಡವರು ಧನ ಲಾಭಕ್ಕಾಗಿ ಅಮೇರಿಕನ್ ಕೋಟನ್ ಬಜಾರ್‌ನ ಏರಿಳಿತದ ಮೇಲೆ, ಬರಬಹುದಾದ ನಂಬ್ರ ಗ್ರಹಿಸಿ ಹಣ ಕಟ್ಟುತ್ತಿದ್ದರು. ಈ ಜುಗಾರಾಟ ನಡೆಸುತ್ತಿದ್ದ ಮಾರಣ್ಣ. ಅವನು ಹೇರಳ ಹಣ ಗಳಿಸಿದ್ದ.

ಮಾರಣ್ಣನಿಗೆ ಐನೂರು ರೂಪಾಯಿ ಜುಲ್ಮಾನೆ ವಿಧಿಸಿದರು ನ್ಯಾಯಾಧೀಶರು.

ಆಗಲೇ ಹುಚ್ಚಿಯೋರ್ವಳನ್ನು ನ್ಯಾಯಾಲಯಕ್ಕೆ ತರಲಾಯಿತು!

ಯೌವನದ ಹೊಸ್ತಿಲಲ್ಲಿ ಕಾಲಿರಿಸುತ್ತಿದ್ದ ಸುಂದರಾಂಗನೆಗೆ ಹುಚ್ಚು!

ಆಕೆಯನ್ನು ಬೆಂಗಳೂರಿನ ಹುಚ್ಚರಾಸ್ಪತ್ರೆಗೆ ಕಳುಹಿಸಲು ಮೆಜಿಸ್ಟ್ರೇಟರ ಸರ್ಟಿಫಿಕೇಟು ಪಡೆಯಲು ಕರೆತರಲಾಗಿತ್ತು.

ಆಕೆಯ ರಂಪಾಟ ಕಂಡು, ತಮ್ಮ ಕೆಲಸವನ್ನು ಬದಿಗೊತ್ತಿರಿಸಿ ಗುಮಾಸ್ತರೆಲ್ಲ ಹೊರಬಂದು ನೋಡುತ್ತಿದ್ದರು! ತಮ್ಮ ಕಾರ್ಯಭಾರಕ್ಕಾಗಿ ಕೋರ್ಟಿಗೆ ಬಂದವರೂ ಅಲ್ಲಿ ನೆರೆದು ನೋಡತೊಡಗಿದರು!

ಆಕೆಯೊಡನೆ ಬಂದಿದ್ದ ಆಕೆಯ ಅಣ್ಣ, ಅವಳನ್ನು ಸಮಾಧಾನಿಸಿ, ಮಾತಾಡದಂತೆ ಮೌನವಾಗಿರಲು ಪರಿಪರಿ ವಿಧದಿಂದ ಭಿನ್ನವಿಸಿಕೊಂಡರೂ ಆಕೆ ಮಾತು ನಿಲ್ಲಿಸಲಿಲ್ಲ.

'ಅಣ್ಣ, ನನಗೆ ಮದುವೆ ಮಾಡು...ನಾನು ಮಾತಾಡದಿರುತ್ತೇನೆ! ನೀನು ಮಾತ್ರ ಮದುವೆಯಾಗಿ, ಹೆಂಡ್ತಿಯೊಟ್ಟಿಗೆ ಸಂತೋಷವಾಗಿದ್ದಿ! ನನಗೆ ಮಾತ್ರ ಗಂಡ ಬೇಡವೇ?'

ವಿಕಾರವಾಗಿ ನಕ್ಕು ಮೌನವಾದಳು.

ಅಲ್ಲಿ ನೆರೆದವರೆಲ್ಲರೂ ತಮ್ಮೊಳಗೆ ನಗಾಡಿಕೊಂಡರು.

'ಅಣ್ಣಾ, ನನ್ನನ್ನು ಗಂಡನ ಮನೆಗೆ ಕರಕ್ಕೊಂಡು ಹೋಗುತ್ತೇನೆ ಎಂದು ಸುಳ್ಳು ಹೇಳಿ ಇಲ್ಲಿಗೆ ಕರತಂದಿರುವೆಯಲ್ಲಾ! ಇಲ್ಲಿ ಇಷ್ಟು ಗಂಡಸರಿದ್ದಾರಲ್ಲ—ನನ್ನ ಗಂಡನನ್ನು ತೋರಿಸು!'

ಎಲ್ಲರೆಡೆಗೂ ಕಣ್ಣು ಹಾಯಿಸಿದಳು.

ಇವರೆಲ್ಲರೂ ಗಂಡಸರಲ್ಲವೆ? ನನ್ನನ್ನು ಮದುವೆಯಾಗುವ ಮರುಕ ಯಾರಲ್ಲಿಯೂ ಇಲ್ಲವೆ? ನಾನು ಪತ್ನಿಯಾಗಲು ಅರ್ಹಳಲ್ಲವೆ?'

ಅವಳಣ್ಣನ ಪ್ರಾರ್ಥನೆ ನಡೆದೇ ಇತ್ತು. ಮಾತನಾಡದೆ ಇದ್ದರೆ ಗಂಡನನ್ನು ಕರಕೊಂಡು ಬರುವೆನೆಂದು ಹೇಳಿದ. ಆದರೆ ಆಕೆ ತನ್ನ ಮಾತು ಬೆಳಸಿಯೇ ಇದ್ದಳು.

ಆಕೆಯ ಅಣ್ಣನೊಡನೆ ಹುಚ್ಚಿನ ಕಾರಣವನ್ನು ಅದಾರೋ ವಿಚಾರಿಸಿದರು.

'ವರದಕ್ಷಿಣೆಯನ್ನು ಕೊಡಲು ಹಣವಿಲ್ಲದೆ, ಆಕೆ ಇಷ್ಟರ ವರೆಗೆ ಅವಿವಾಹಿತೆಯಾಗಿರಬೇಕಾಯಿತು. ನಾಲ್ಕೈದು ತಿಂಗಳ ಹಿಂದೆ ಆಕೆಯನ್ನು ವಿವಾಹವಾಗಲು ಓರ್ವ ಯುವಕ ಮುಂದಾಗಿ, ವಿವಾಹದ ದಿನವೂ ನಿಶ್ಚಯವಾಗಿತ್ತು. ನಿಶ್ಚಯಿತ ದಿನಕ್ಕೆ ಒಂದು ವಾರವಿರುವಾಗ, ಗಂಡು ತನಗೆ ಒಂದು ಸಾವಿರವಾದರೂ ವರೋಪಚಾರ ದೊರೆಯದಿದ್ದರೆ, ಮದುವೆಯ ಮಾತು ಮುರಿಯಬೇಕಾಗುತ್ತದೆ ಎಂದು ತಿಳಿಸಿದಾಗ ಹಣಕ್ಕಾಗಿ ಸಾಲವಾದರೂ ಮಾಡಿ ಕೊಡುವುದೆಂದು ನಿರ್ಣಯಿಸಲಾಯಿತು. ಆದರೆ...ನಾಲ್ಕು ದಿನಗಳಲ್ಲಿ ಆಕೆಯ ವಿವಾಹ ನೆರವೇರುವುದು ಎಂದು ಮನೆಯಲ್ಲಿ ಸಂತಸದ ನೆಲೆ ನೆಲಸಿದ್ದಾಗ, ಅವನ ಕಡೆಯಿಂದ ಹುಡುಗನಿಗೆ ಐದು ಸಾವಿರ ಕೊಟ್ಟು, ಹುಡುಗಿ ಕೊಡುವವರಿದ್ದಾರೆ......ನೀವು

ಐದು ಸಾವಿರ ಕೊಡುವುದಾದರೆ ಮಂಗಳಕಾರ್ಯ ನೆರವೇರಬಹುದು ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಮದುವೆ ಮುರಿದರು. ಅಂದಿನಿಂದ ಮಂಕು ಬಡಿದವಳಂತೆ ಇರತೊಡಗಿದವಳ ಬುದ್ಧಿ ಭ್ರಮಣಗೊಂಡಿತು.

ಆಕೆಯ ಚಿಂತಾಜನಕ ಕತೆ ಕೇಳಿ ಹಲವರು ಮರುಗಿದರು !

ಹಣಕ್ಕಾಗಿ ಮದುವೆ ಮುರಿದವರನ್ನು ಕೊಚ್ಚಿ ಕೊಚ್ಚಿ ಕೊಲ್ಲಬೇಕೆಂದು ಒದರಾಡಿದರು !

ವರದಕ್ಷಿಣೆಯ ಪೆಡಂಭೂತ ಉಚ್ಚಾಟಣೆಯಾಗದೆ ನಮ್ಮ ಸಮಾಜ ಉದ್ಧಾರವಾಗದೆಂದರು.

ನಗುತ್ತಿದ್ದವಳು ಒಮ್ಮೆಲೆ ಅಳತೊಡಗಿದಳು.

ಆಕೆಯ ಅಳುವಿನ ಹಿಂದೆ ಎಂತಹ ನೋವು ಅಡಗಿದೆ! ಹಣದ ದಾಹ ಆಕೆಯನ್ನು ಹುಚ್ಚಿಯನ್ನಾಗಿ ಮಾಡಿತು !

ಹಣವಿದ್ದಿದ್ದರೆ...ಗಂಡಿನ ನೆರಳಲ್ಲಿ ನಿರಾಯಾಸವಾಗಿರಬಹುದಿತ್ತು!

ಸಮಾಜಕ್ಕೆ ಅಂಟಿಕೊಂಡಿರುವ ವರದಕ್ಷಿಣೆಯ ಜಾಡ್ಯ ಎಷ್ಟು ಸಂಸಾರವನ್ನು ಹಿಂಡುತ್ತಿಲ್ಲ !

ಅಳು ನಿಲ್ಲಿಸಿ ಅಲ್ಲಿ ನೆರೆದವರನ್ನು ಚೆದರಿಸಿ ಓಡುವಂತೆ ಒಮ್ಮೆ ಕುಪ್ಪಳಿಸಿ ಕುಣಿದು ಕುಳಿತುಕೊಂಡಳು.

ಮತ್ತೆ ಅವಳ ಮಾತು ಹೊರಟಿತು.

'ನನ್ನನ್ನೇಕೆ ನೋಡುತ್ತೀರಿ! ಹುಡುಗಿಯ ಚಂದ ನೋಡಲು ಬಂದು ಸೇರಿರುವಿರಾ? ನಿಮಗೆ ಸಂಬಳ ಕೊಡುವುದು — ನನ್ನನ್ನು ನಿಂತು ನೋಡಲೆ? ನೀವಾರಾದರೂ ನನ್ನನ್ನು ಮದುವೆಯಾಗುತ್ತೀರಾ ?

ಗೋಡೆಗೆ ಒರಗಿ ನಿಂತಿದ್ದವನ ಕೈ ಹಿಡಿಯಲು ಮುಂದಾದಳು. ಅವಳ ಜಾಗ್ರತೆಗಾಗಿ ಬಂದ ಪೋಲೀಸ್‌ನೋರ್ವನು ಆಕೆಗೆ ಹೆ ಡೆಯು ವೆನೆಂದು ಬೆದರಿಸಲು ತನ್ನ ಕೈಯಲ್ಲಿದ್ದ ದೊಣ್ಣೆಯನ್ನು ಮೇಲೆತ್ತಿದ.

'ನನ್ನನ್ನು ಹೊಡೆಯುತ್ತೀರಾ? ನಿಮಗೆ ನನ್ನನ್ನು ಹೊಡೆಯಲು ಮನಸ್ಸು ಬರುವುದೇ? ನಿಮಗಾರು ಅಕ್ಕ-ತಂಗಿಯರಿಲ್ಲವೆ ?

ಆಕೆಯ ಮುಗ್ಧ ಮಾತಿಗೆ ಮರುಗಿದ ಪೋಲೀಸ್:

'ನೀನು ಸುಮ್ಮನೆ ಮಾತಾಡದೆ ಕುಳಿತರೆ ಯಾರು ಹೊಡಿತ್ತಾರೆ?'

'ನನಗೊಬ್ಬ ಗಂಡನನ್ನು ತಂದು ಕೊಡಿ! ನಾನು ಸುಮ್ಮನಿರುತ್ತೇನೆ!'

ಆಕೆಯನ್ನು ಒಳ ಕರತರಲು ನ್ಯಾಯಾಧೀಶರ ಆಜ್ಞೆಯಾಯಿತು.

ಕೆಲ ಸಮಯ ವಿಚಾರಣೆ ನಡೆದು ಆಕೆಯನ್ನು ಹೊರ ಕಳುಹಿಸಿದರು.

ಆಕೆಯನ್ನು ಕರಕೊಂಡು ವ್ಯಾನ್ ಹೊರಟು ಹೋಯಿತು.

ಅನಂತರ ನ್ಯಾಯಾಧೀಶರಿಗೆ ಒಂದು ಗಂಟೆಯ ವಿರಾಮ.

ಹಯಗ್ರೀವಾಚಾರ್ಯರು, ಪ್ರಮೀಳಾ ಹೊರ ಬೆಂಚಿನಲ್ಲಿ ಕುಳಿತುಕೊಂಡು ತಮ್ಮ ಕರೆಗಾಗಿ ಕಾಯುತ್ತಿದ್ದರು! ತಮಗೆ ದೊರೆಯಬಹುದಾದ ತೀರ್ಪಿಗಾಗಿ ಎದುರುನೋಡುತ್ತಿದ್ದರು.

ಒಂದು ಗಂಟೆಗೆ ಸರಿಯಾಗಿ ನ್ಯಾಯಾಧೀಶರು ನ್ಯಾಯಪೀಠವನ್ನು ಅಲಂಕರಿಸಿದರು.

ಹಯಗ್ರೀವಾಚಾರ್ಯರು ಪ್ರಸಾದರನ್ನು ಸ್ವಹಸ್ತದಿಂದ ಕೊಂದುದೆಂದೂ, ಅವರ ಕೊಲೆಗೆ ಪ್ರೋತ್ಸಾಹಿಸಿ ಸಹಾನುಭೂತಿಯನ್ನು ತೋರಿಸಿದವಳು ಪ್ರಮೀಳೆಯೆಂದೂ ಅವರೀರ್ವರ ಮೇಲೆ 'ಚಾರ್ಜ್‌ಶೀಟ್' ಹಾಕಲಾಯಿತು.

ವಿಚಾರಣೆ ಮಾರನೆಯ ದಿನಕ್ಕೆ ಮುಂದುವರಿಸಲಾಯಿತು.

ಪುನಃ ಸೆರೆಮನೆಯಲ್ಲಿ ಒಂದು ದಿನ ನೆಲಸಿರಬೇಕು.

ಪಟ್ಟಣದ ಪತಂಗ–ಸೆರೆಮನೆಯ ಪಂಜರದಲ್ಲಿ ಬಂಧಿತಳಾದಳು.

ಮಾರನೆಯ ದಿನ ಕೋರ್ಟಿನಲ್ಲಿ ಪುನಃ ಹಾಜರು ಪಡಿಸಲಾಯಿತು.

ಅಂದು ಬೇರಾವ ಕೇಸ್ ಇರಲಿಲ್ಲ.

ಹಯಗ್ರೀವಾಚಾರ್ಯ—ಪ್ರಮೀಳೆಯ ಕೊಲೆಯ ಪ್ರಕರಣ ವಿಚಾರಣೆಗೊಳಗಾಯಿತು.

ಪತ್ತೇದಾರ ಪುಟ್ಟಣ್ಣನವರು, ತಾನು ಈ ಕೊಲೆಯ ಮೊಕದ್ದಮೆಗೆ ಕೈಹಾಕಿದಂದಿನಿಂದ ರಹಸ್ಯಭೇಧನೆಗಾಗಿ ವಿಧಾನೋಪಾಯಗಳನ್ನು ಹೂಡಿದ ಹಂಚಿಕೆಯನ್ನೆಲ್ಲಾ ವಿವರವಾಗಿ ತಿಳಿಸಿ, ಹಯಗ್ರೀವಾಚಾರ್ಯರೇ ಕೊಲೆಗಾರರು ಎಂದು ವಾದಿಸಿದರು.

ಮೊತ್ತಮೊದಲು ಹೊಟೇಲು ಕೆಲಸದಾಳಿನ ವಿಚಾರಣೆಯಾಯಿತು.

ಪತ್ತೇದಾರರ ಸಮ್ಮುಖದಲ್ಲಿ ನುಡಿದುದನ್ನೇ ಪುನಃರಪಿ ನುಡಿದ ಆಳು.

ಈ ಕೆಲಸದಾಳಿನಿಂದಲೇ ತಾನು ಸಿಕ್ಕಿಬಿದ್ದುಕೊಂಡುದು. ಅವನಿಲ್ಲದಿರುತ್ತಿದ್ದರೆ, ತಾನು ಪ್ರಮೀಳೆಯೊಂದಿಗೆ ಸುಖದಿಂದ ದಿನಕಳೆಯಬಹುದ್ದಿತೆಂದುಕೊಂಡರು ಆಚಾರ್ಯರು.

ಆದರೆ, ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ.

ಹೊಟೇಲು ಮಾಲಿಕರನ್ನು ವಿಚಾರಣೆಗಾಗಿ, ತಪ್ಪಿನ ಒಪ್ಪಿಗೆಗಾಗಿ ಪಿಂಜರದಲ್ಲಿ ತಂದು ನಿಲ್ಲಿಸಿದರು.

ಅವರಿತ್ತ ಹೇಳಿಕೆ:

'ಸುಂದರಿಯಾದ ಹೆಣ್ಣು, ವಿಶೇಷ ಆಕರ್ಷಕ ವೈಕಟ್ಟಿನಿಂದ ಕೂಡಿಕೊಂಡು ಮಂಗಳೂರಿನಿಂದ ತನ್ನ ಮೆನೇಜರರ ಪತ್ನಿಯಾಗಿ ಬಂದಂದಿನಿಂದ, ಆಕೆಯ ಅಂದ ಚಂದಗಳಿಗೆ ವ್ಯಾಮೋಹಗೊಂಡ ನಾನು ಆಕೆಯ ಒಲವಿನ ಅಮೃತವನ್ನು ಹೀರಬಯಸಿದೆ. ನನ್ನ ಪತ್ನಿ ತೀರಿಕೊಂಡು ಮೂರು ವರ್ಷಗಳಾಗಿತ್ತು.

'ತನ್ನ ಗಂಡನಿಂದ ಸಂಪೂರ್ಣ ತೃಪ್ತಿಹೊಂದದೆ ಕೆರಳಿದ ಸಂದರ್ಭ ದಲ್ಲಿ ನಾನೊಮ್ಮೆ ಸಂಧಿಸಿ, ನನ್ನಾಸೆಯನ್ನು ವ್ಯಕ್ತಪಡಿಸಿದಾಗ ವಿಲಾಸಕ್ಕೆ ವಿಳಂಬಿಸದ ವಿಲಾಸಿನಿ ತನ್ನ ಆಸೆಯನು ಮಣ್ಣುಪಾಲು ಮಾಡದೆ, ನನ್ನ ಬಳಿಗೆ ಪತಂಗದಂತೆ ಹಾರಿ ಬಂದಳು.

'ನಾವಿಬ್ಬರು ಸರಸದ ಸಮಾಧಿಯಲ್ಲಿದ್ದುದ್ದನ್ನು ಪ್ರಸಾದನೊಮ್ಮೆ ಕಣ್ಣಾರೆ ಕಂಡುಕೊಂಡ.' ಹೊಟೇಲಿನ ಕೆಲಸವಲ್ಲಿ ನಿರತನಾಗಿರುವಾಗಲೇ ನಾವು ಸಂದಿಸುತಿದ್ದೆವು.

'ನಮ್ಮ ನಲಿವು ಒಲವು ಆಕೆಯ ಗಂಡನಿಗೆ ತಿಳಿಯಿತು ಎಂದಾ ದಾಗ ನಾನು ಕಂಗಾಲಾದೆ'

'ನಾಗರೀಕ ಗಣ್ಯ ವ್ಯಕ್ತಿ, ಸಮಾಜ ಸುಧಾರಕ, ಮನಸ್ಸು ಮಾಡಿ ದರೆ ಮುನ್ಸಿಪಾಲ್ಟಿಯಲ್ಲಿಯೋ, ಮಂತ್ರಿ ಮಂಡಲದಕ್ಷನಾಗಿ ಮೆರೆಯಲು ಅರ್ಹತೆಯುಳ್ಳ ನಾನು, ನನ್ನ ಕೈಕೆಳಗೆ ದುಡಿಯುವಂತಹನ ಮಡದಿ ಯಲ್ಲಿ ಅನುರಕ್ತನಾಗಿರುವೆನೆಂಬ ವಿಚಾರ ಗಲ್ಲಿಯ ಗುಲ್ಲಾಗಿ ಹೋದರೆ ನನ್ನ ಮಾನಕ್ಕೆ ಅವಮಾನವೆಂದು ಎಣಿಸಿದೆ'.

'ಪ್ರಸಾದರೇ ಕಾಲು ಕೆರೆದು ಜಗಳಕ್ಕೆ ಬಂದರೆ, ವಾರ್ತೆ ಮನೆ ಮಾತಾಡಿ ಹರಡಲು ವಿಳಂಬವಾಗಲಾರದು'

'ಸಾವಿರವೋ—ಎರಡು ಸಾವಿರವೋ ಹಣ ಕೊಟ್ಟು ಪ್ರಸಾದರ ಬಾಯಿ ಮುಚ್ಚಿಸಬಹುದೋ ಎಂದು ಯೋಚಿಸಿದೆ: ಆದರೆ, ಅವರು ಹಣ ನಿರಾಕರಿಸಿದರೆ?'

'ಹಣಕ್ಕಾಗಿ ಅದೆಷ್ಟೋ ಜನರು ತಮ್ಮ ಮಡದಿಯರನ್ನು ಪರರ ಬಳಿ ಕಳುಹಿಸಿ ಕೊಡುವಂತೆ ಪ್ರಸಾದರೂ ಮುಂದಾದರೆ ನೆಮ್ಮದಿಯಿಂದಿ ರಬಹುದು ಎಂದೆಣಿಸಿದೆ'

'ಗುಟ್ಟು ರಟ್ಟಾಯಿತೆಂದೂ, ಆಕೆಯು ಆಸೆಯನ್ನೇ ತೊರೆದು, ಇಂದಿನ ವರೆಗೆ ನಡೆದುದೆಲ್ಲ ಕನಸ್ಸು ಎಂದು ಮರೆತು ಬಿಡೋಣ ಎಂದರೆ ಆ ಸುಂದರ ಮುಖಾರವಿಂದವನ್ನು ನನ್ನ ಮನೋಪಟಲದಿಂದ ಅಳಿಸುವು ದಾದರೂ ಹೇಗೆ?

'ನಾವಿಬ್ಬರು ಒಮ್ಮತದಿಂದ ಆಲೋಚಿಸಿ......ಯಾರಿಗೂ ತಿಳಿಯು ದಂತೆ ಉಪಾಯದಿಂದ ಆತನನ್ನೇ ತೀರಿಸಿ ಬಿಟ್ಟರೆ......ಅದೇ ಸರಿ ಯಾದ ಉಪಾಯ ಎಂದು ನಿರ್ಧರಿಸಿದೆವು"

'ಕೊಲೆ ರಹಸ್ಯವಾಗಿ ಉಳಿಯಲು ಬಹಳ ಜಾಗ್ರತೆಯಿಂದ ವಿವೇ ಚಿಸಿ, ಈ ಕೊಲೆಯಲ್ಲಿ ಯಾವೊಂದು ವಿಧಾನದಲ್ಲಿಯೂ ರಹಸ್ಯ ಹೊರ ಬೀಳಬಾರದೆಂದು ನೆನೆದು, ಕೈ-ಕಾಲು ಚೀಲಗಳಿಂದ ಅಂಗಾಂಗ ವನ್ನೆಲ್ಲಾ ಮುಚ್ಚಿಕೊಂಡು, ಅವನನ್ನು ಮಲಗಿದಲ್ಲಿಯೇ ತೀರಿಸಿಬಿಟ್ಟು ಹೊರಕ್ಕೆ ಎಳತಂದು ಬಾಗಿಲ ಬಳಿ ಮಲಗಿಸಿದೆ.

'ಮುಂದೆ ಈ ಕೊಲೆ ನಡೆದುದು ಏಕೆ...ಹೇಗೆ ಎಂಬುದು ಸಮಸ್ಯೆ ಯಾಗಿಯೇ ಉಳಿದಿರಲಿ ಎಂದು, ಕೆಲ ಕಾಲದ ಕಷ್ಟದಿಂದ, ಚಿರಕಾಲ ಆನಂದ ಪಡಬಹುದೆಂದು, ಪ್ರವೀಣಾಳೆಯನ್ನು ಹಗ್ಗದಿಂದ ಬಂಧಿಸಿ, ಆಕೆಗೆ ಬೋಧ ತಪ್ಪುವ ಮದ್ದಿನಿಂದ ನಾಲ್ಕೈದು ಗಂಟೆ ನಿದ್ರಾವಸ್ಥೆಯಲ್ಲಿರು ವಂತೆ ಚಮತ್ಕಾರ ಹೂಡಿದೆ'

'ಯಾವುದೋ ಕೆರಳಿದ ಕೋಮಲೆ ಕೊಲೆ ಮಾಡಿದಳೆಂದು ಯಾರ ಮೇಲಾದರೂ ದೂರು ಬೀಳಲಿ ಎಂಬ ಕುಟಿಲೋಪಾಯದಿಂದ ಒಂದು ಕಾಗದವನ್ನು ಬರೆದು ಮೃತ ಶರೀರದ ಬಳಿಯಲ್ಲಿ ಎಸೆದೆ'

'ನಮ್ಮ ಸುಖಕ್ಕಾಗಿ ಯಾರಿಗಾದರೂ ಅನ್ಯಾಯವಾಗಲಿ ಎಂದು ಕಾರ್ಯ ಸಾಧಿಸಿದೆ'

'ಇಷ್ಟೆ ಅಲ್ಲವೆ, ನಮ್ಮೊಳಗಿನ ವ್ಯಾಮೋಹ ಸದ್ಯಕ್ಕೆ ಗುಪ್ತವಾ ಗಿಯೇ ಉಳಿದಿರಲಿ ಎಂದು ಮುಂಜಾಗ್ರತೆ ವಹಿಸಿದ್ದು, ವಾರಕ್ಕೊ ಮ್ಮೆಯೋ, ಹದಿನೈದು ದಿನಕ್ಕೊಮ್ಮೆಯೋ ಹೋಗಿ ಬರುತ್ತಿದ್ದೆ'

'ನಮ್ಮ ಗುಟ್ಟು ರಹಸ್ಯವಾಗಿದೆ. ನಾನು ಎಲ್ಲರ ಕಣ್ಣು ತಪ್ಪಿ ಸಿಯೇ ವ್ಯವಹರಿಸುತ್ತಿರುವೆನೆಂದು ನಾನು ನೆನಸಿದ್ದರೂ, ನಮ್ಮ ಮೇಲೆ ಹದ್ದಿನ ಕಣ್ಣಿರಿಸಿದವರೂ ನನ್ನ ಹಿಂದೆ ಇದ್ದರು ಎಂದು ನಾನೆನಿಸಿರಲಿಲ್ಲ."

'ನಮ್ಮ ಕಾರ್ಯಕಲಾಪದಲ್ಲಿ ಕೆಲಸದ ಆಳು ಕಣ್ಣಿಟ್ಟಿರುವನು ಎಂದು ನಾನೆನಿಸಿರಲಿಲ್ಲ!

'ಗುಪ್ತವಾಗಿ ನಾವೆಷ್ಟು ಜಾಗ್ರತೆ ವಹಿಸಿಕೊಂಡರೂ ಜಾಣ ಪತ್ತೇದಾರರು ಮಾತ್ರ ನಮ್ಮ ಗುಟ್ಟನ್ನು ರಟ್ಟುಮಾಡಿ ಕೊಲೆಯ ಕಾರಣವನ್ನು ಕಂಡುಹಿಡಿದರು'

ಸಮಗ್ರ ವಿಚಾರವನ್ನು, ಯಾವೊಂದು ಮುಚ್ಚುಮರೆಯಿಲ್ಲದೆ ತಿಳಿಸಿ ಮೌನವಾದರು ಹಯಗ್ರೀವಾಚಾರ್ಯರು.

ಪ್ರಮಿಳಾಳೆಯನ್ನು ವಿಚಾರಣೆಗಾಗಿ ಪಿಂಜರಕ್ಕೆ ಕರಲು, ಆಕೆ ತಾನೇನೂ ಹೇಳಲು ಉಳಿದಿಲ್ಲವೆಂದೂ ಹೆಚ್ಚು ಕಡಿಮೆ ಏನಿದ್ದರೂ ಪತ್ತೇದಾರರೇ ತಿಳಿಸಲಿ. ಅದರಲ್ಲೇನಾದರೂ ತಪ್ಪಿದ್ದರೆ ತಿಳಿಸುವೆನೆಂದು ಸ್ತ್ರೀ ಸಹಜವಾದ ಲಜ್ಜೆಯಿಂದ ತಲೆತಗ್ಗಿಸಿ ನಿಂತಳು.

ಪತ್ತೇದಾರರು ತಮ್ಮ ವಿಚಾರ ಸರಣಿಯನ್ನು ಹರಿಯಬಿಡುತ್ತಾ:

'ಈಕೆ,ಮಂಗಳೂರಲ್ಲಿರುವಾಗ,ತನಗೆ ಹಿತವೆನಿಸಿದ ಓರ್ವ ಗಂಡನ್ನು, ಮೋಹಿಸಿ ಪ್ರಣಯ ವಂಚಿತಳಾಗಿದ್ದು ಕೊನೆಯಲ್ಲಿ ಪ್ರಸಾದರ ಕೈಹಿಡಿದಳು'

'ಆಶಾಗೋಪುರದ ತುಟ್ಟ ತುದಿಯನ್ನೇರಿ ವಿಹರಿಸಲು ಆಶಿಸಿದ್ದ, ಆಕೆಗೆ ಜೀವನದಲ್ಲಿ ನಿರಾಶೆಯಾಯಿತು ಸುಖದ ಸಂಪತ್ತಿಗೆಯಲ್ಲಿ ಓಲಾಡಬೇಕೆಂದು ನೆನೆದವಳ ಕನಸ್ಸು ಮಣ್ಣುಪಾಲಾಯಿತು.

ಯೌವ್ವನದ ಹೆಣ್ಣು, ಪ್ರಣಯ ಜಗತ್ತಿನ ರಾಣಿಯಾಗಿ ಮೆರೆದು, ಸುಖೋಲ್ಲಾಸವನ್ನು ಸವಿಯಬೇಕೆಂದು, ಬೃಹತ್ ಬದುಕಿನ ಚೆಲುವಿನ ಕನಸ್ಸು ಕಾಣುತ್ತಾ, ನಿಜ ಜೀವನದಲ್ಲಿ ಮಾತ್ರ ಅತೃಪ್ತಿಯ ಅಂಧತೆಯಲ್ಲಿ ಬೆಳೆಯುತ್ತಿರುತ್ತಾರೆ. ಮನಸ್ಸಿನಲ್ಲಿ ನಾನಾ ಬಯಕೆಗಳು ಮೂಡುತ್ತಿರುತ್ತವೆ. ಕಣ್ಣು, ಕಂಡದ್ದೆಲ್ಲಾ ಪಡೆಯಬೇಕೆಂದು ಬಯಸುತ್ತದೆ. ಆಶಾಲತೆ ಆವರಿಸಿರುತ್ತದೆ!

'ನಾನು ಇಚ್ಛೆಪಟ್ಟುದನ್ನು ಗಂಡ ತಂದುಕೊಡಬೇಕು. ತಾನು ಕೇಳಿದ್ದಕ್ಕೆ ಎದುರು ಹೇಳಬಾರದು. 'ಬೇಕು' ಎಂದೊಡನೆ ತಂದು ಅವಳಡಿಯಲ್ಲಿ ತುಂಬಬೇಕು"

'ಪ್ರಸಾದ, ವಿವಾಹವಾಗಿ ಮನೆ ಸೇರಿದ ಹೆಣ್ಣಿಗೆ ಮನನೋಯಬಾರದು ಎಂದು ತನ್ನ ಶಕ್ತಿ ಮೀರಿ, ಇಚ್ಛಿತ ವಸ್ತುಗಳನ್ನು ತಂದುಕೊಡುತ್ತಿದ್ದಂತೆ ಇವರ ಬೇಡಿಕೆಗಳೂ ಹೆಚ್ಚಾಗುತ್ತಿದ್ದುವು"

'ತನ್ನ ಶಕ್ತಿಗೆ ನಿಲುಕದ ವಸ್ತುಗಳಿಗಾಗಿ ಬೇಡಿಕೆ ಬಂದಾಗ ಸಾಧ್ಯವಿಲ್ಲ ಎಂಬ ಉತ್ತರ ಬಂತು.'

'ತಂದುಕೊಡದಿದ್ದರೆ, ಊಟ ಮಾಡದೆ ಉಪವಾಸವಿದ್ದುಬಿಡುತ್ತೇನೆ! ಬಾವಿಗೆ ಹಾರಿ ಪ್ರಾಣಬಿಡುತ್ತೇನೆ! ಎಂಬ ಬೆದರಿಕೆ ಹಾಕಿದಳು'

'ತನ್ನಾಸೆ ನೆರವೇರಿಸಲು ಅಶಕ್ತನೆಂದಾದರೆ ತನ್ನನ್ನೇಕೆ ವಿವಾಹವಾಗಿ ವಂಚಿಸಿದಿರಿ'

'ಹಣ...ಹಣ ಎಂದು ಕೂಗುವ ನೀವು, ಮಾಲಿಕರ ಧನ ವಂಚಿಸಿ, ತನ್ನ ಇಷ್ಟಾರ್ಥವನ್ನು ನೆರವೇರಿಸಿ'

'ಪ್ರಸಾದರು ಮಾತ್ರ, ಹೆಣ್ಣಿನ ತಾಳಕ್ಕೆ ಕುಣಿಯುವ ಮನಸ್ಸು ಮಾಡಲಿಲ್ಲ. ಆಕೆಯ ಒದರಾಟಕ್ಕೆ ಬೆಲೆ ಕೊಡಲಿಲ್ಲ. ಆಕೆಯ ರಂಪಾಟ ಕೇಳಿಯೂ ಕೇಳದಂತೆ ಇದ್ದುಬಿಡುತ್ತಿದ್ದರು'

'ಪ್ರಸಾದರು, ಪೂರೈಸಲಾರದುದನ್ನು ತಂದುಕೊಡಲು ಮುಂದಾದರು'

'ಪ್ರಸಾದರ ಎಂಜಲು ಮಾಲಿಕರ ಮೃಷ್ಟಾನ್ನವಾಯಿತು'

'ಸರಸ ಸರಾಗವಾಗಿ ಏನಾದರೂ ಗರ್ಭವತಿಯಾದರು ಕೂಡಾ ಕೈ ಹಿಡಿದು. ಮಾಂಗಲ್ಯ ಬಿಗಿದವನೊಬ್ಬನಿರುವಾಗ ಯಾರ ಬಳಿಗೆ ಹೋದರೂ ಅಂದಿನಿಂದ ಪರನಿಂದೆ—ಅಪವಾದ—ಅಪಕೀರ್ತಿ—ಅವಮಾನವಾಗಲಾರದು ಎಂದು ಎಣಿಸಿಯೆ ಸರಸ ನಡೆಯಿತು'

'ಪರರ ಸುಳಿವು—ಹೊಳಪು ಕಂಡು ಹಿಡಿದು ಸಂತೋಷಪಡುವವರು ಇವರ ಮೇಲೆ ಕಣ್ಣಿಟ್ಟಿದ್ದರು. ಆದರೆ ಇವರಿಗೆ ಮಾತ್ರ ಯಾವುದೂ ತಿಳಿದಿರಲಿಲ್ಲ. ತಿಳಿದುಕೊಳ್ಳುವಂತಹ ಗೋಜಿಗೂ ಹೋಗಲಿಲ್ಲ.

'ಸರಸ ಸರಾಗವಾಗಿ ನಡೆಯಿತು! ವಿರಸಕ್ಕೆ ಮೊದಲು ಕೊಲೆಯೂ ಆಯಿತು !!'

ಪ್ರಸಾದರ ಊಹಾಪೋಹೆ ಸರಿಯೆಂದು ಒಪ್ಪಿಕೊಂಡಳು ಪ್ರಮಿಳಾ.

ವಿಚಾರಣೆಯಲ್ಲಿ ದೊರೆತ ವಿಷಯ ನ್ಯಾಯದ ತಕ್ಕಡಿಯಲ್ಲಿ ತೂಗಿತು !

ಕೊಲೆಪಾತಕಿ ಹಯಗ್ರೀವಾಚಾರ್ಯರಿಗೆ ಫಾಶಿ ಶಿಕ್ಷೆ! ಕೊಲೆಗೆ ಪ್ರೇರೇಪಿಸಿದ ಪ್ರಮಿಳಾಳಿಗೆ ಆರು ವರ್ಷದ ಕಠಿಣ ಸಜೆ! ಕೋರ್ಟಿನಲ್ಲಿ ತೀರ್ಮಾನವಾಯಿತು.

ಪಟ್ಟಣದ ಪತಂಗದಂತೆ ಮೆರೆದ ಪ್ರಮಿಳಾ ಕಬ್ಬಿಣದ ಪಂಜರದೊಳಗಿನ ಹಕ್ಕಿಯಾದಳು. ಅವಳಿಗೆ ಹೊರ ಹಾರುವ ಹಕ್ಕಿರಲಿಲ್ಲ.

ಅತೃಪ್ತಿ ಆಕೆಯ ಜೀವಮಾನಕ್ಕೆ ಬರಿ ಎಳೆದಿತ್ತು.

ಕೈಕೊಂಡ ಕಾರ್ಯದಲ್ಲಿ ನಿರಾಸೆಗೊಳ್ಳದೆ ಕೊನೆಯ ವರೆಗೂ ಶತ ಪ್ರಯತ್ನದಿಂದ ಸಾಧಿಸಿದ ಪತ್ತೇದಾರ ಪುಟ್ಟಣ್ಣನವರಿಗೆ ಸರಕಾರ ಚಿನ್ನದ ಪದಕವಿತ್ತು ಗೌರವಿಸಿತು.

ಅನಂತ ಕೆಫೆ, ಹಯಗೀವಾಚಾರ್ಯರ ತಮ್ಮನ ಸ್ವಾಧೀನವಾಯಿತು.